23 ವರ್ಷಗಳಿಂದ ದೆಹಲಿಯಲ್ಲಿ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

www.dehalivaarthe.com

EDITION: NEW DELHI / CIRCULATION IN U.P. & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 23 | ಸಂಚಿಕೆ 347 | ನವದೆಹಲಿ | ಬೆಲೆ ₹10 | ಜೂನ್ 22 2026, ಸೋಮವಾರ

## ಒಳಪುಟಗಳಲ್ಲಿ



ಯೋಗಿ ನರೇಂದ್ರನ ಆಧ್ಯಾತ್ಮಿಕ ಮಣ್ಣಿಗೆ, ನಾಯಕ ನರೇಂದ್ರನ ಯೋಗಿಕ ಹೆಜ್ಜೆ - ಪು.4

ಕೆರೆಗೆ ವೈದ್ಯಕೀಯ ತ್ಯಾಜ್ಯ: ವೈದ್ಯರ ವಿರುದ್ಧ ಎಫ್ಐಆರ್ ದಾಖಲು - ಈಶ್ವರ ಖಂಡ್ರೆ ಸೂಚನೆಯಂತೆ ಜಲಮೂಲ ಕಲುಷಿತ ಮಾಡಿದವರ ವಿರುದ್ಧ ಕ್ರಮ - ಪು.5

ಎಸ್‌ಬಿಎಚ್ ನಿವೃತ್ತ ನೌಕರರಿಗೆ ಶೀಘ್ರ ವೈದ್ಯಕೀಯ ಸೌಲಭ್ಯ: ಎಜಿಎಂ ಸೀತಾಬಾಯಿ - ಪು.6

# ಯೋಗವು ಕೇವಲ ದೈಹಿಕ ಕಸರತ್ತಲ್ಲ, ಮಾನವ ಚೇತನದ ಅದ್ಭುತ ಅಭಿವ್ಯಕ್ತಿ: ಮೋದಿ

**ಕೋಲ್ಕತ್ತಾ, ಜೂ.21: ಯೋಗವು ಕೇವಲ ದೈಹಿಕ ಕಸರತ್ತಲ್ಲ ಅಥವಾ ಇದು ಯಾವುದೇ ನಿರ್ದಿಷ್ಟ ವಯೋಮಾನದವರಿಗೆ ಸೀಮಿತವಾಗಿಲ್ಲ. ಇದು ಮಾನವ ಚೇತನದ ಅದ್ಭುತ ಅಭಿವ್ಯಕ್ತಿಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.**








ಕೋಲ್ಕತ್ತಾದ ಐತಿಹಾಸಿಕ 'ರೆಡ್ ರೋಡ್'ನಲ್ಲಿ ನಡೆದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮದಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ ಅವರು, ಜೂನ್ 21 ಭೂಮಿಯ ಮೇಲಿನ ಸುದೀರ್ಘ ದಿನವಾಗಿದೆ. ಆದರೆ ಈಗ ಯೋಗದ ಕಾರಣದಿಂದಾಗಿ ಇದು ವಿಶ್ವದ ಅತಿಹೆಚ್ಚು ಜನರು ಭಾಗವಹಿಸುವ ಆಚರಣೆಯ ದಿನವಾಗಿ ಮಾರ್ಪಟ್ಟಿದೆ ಎಂದರು.

ವಿಶ್ವವು ಇಂದು ಒಂದಕ್ಕೊಂದು ಬೆಸೆದುಕೊಂಡಿರುವಂತೆ ಕಾಣುತ್ತಿದೆ. ಇದುವೇ ಯೋಗದ ಶಕ್ತಿ. ಯೋಗವು ಪ್ರತಿಯೊಬ್ಬರನ್ನೂ ಜೋಡಿಸುತ್ತದೆ, ಎಲ್ಲರನ್ನೂ ಒಟ್ಟಿಗೆ ತರುತ್ತದೆ. ಈ ಶುಭ ಸಂದರ್ಭದಲ್ಲಿ, ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ನಾನು ಇಡೀ ಜಗತ್ತಿಗೆ ಹಾಗೂ ಇಡೀ ಮಾನವ ಕುಲಕ್ಕೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇನೆ. ಯೋಗದಿನದಂದು, ವಿಶೇಷವಾಗಿ ಬಂಗಾಳದ ಜನತೆ ಹಮ್ಮಿಕೊಂಡಿರುವ ಸ್ವಚ್ಛತಾ ಅಭಿಯಾನವನ್ನು ನಾನು ಪ್ರಶಂಸಿಸಲು ಬಯಸುತ್ತೇನೆ. ಇದು ಅತ್ಯಂತ ಅದ್ಭುತವಾದ ಉಪಕ್ರಮವಾಗಿದೆ ಎಂದು ಮೆಚ್ಚುಗೆ ಸೂಚಿಸಿದರು.

ಮೋದಿ ಅವರೊಂದಿಗೆ 35 ಸಾವಿರಕ್ಕೂ ಹೆಚ್ಚು ಜನರು ಒಟ್ಟಿಗೆ ಯೋಗಾಭ್ಯಾಸ ಮಾಡಿದರು. ಕೋಲ್ಕತ್ತಾದ ಹೂಗ್ಲಿ ನದಿಯ 'ಬಾಬು ಘಾಟ್' ಬಳಿ ಸುಂದರಬನ್ಸ್ ಸೇರಿದಂತೆ ವಿವಿಧ ಭಾಗಗಳಿಂದ ಬಂದ 500ಕ್ಕೂ ಹೆಚ್ಚು ದೋಣಿಗಳ ಮೇಲೆ ಯೋಗಪಟುಗಳು ಏಕಕಾಲದಲ್ಲಿ ಯೋಗಾಸನ ಪ್ರದರ್ಶಿಸಿದರು.

ಕೇವಲ ರೆಡ್‌ರೋಡ್ ಮಾತ್ರವಲ್ಲದೆ, ಕೋಲ್ಕತ್ತಾದ ಪ್ರಮುಖ ಐತಿಹಾಸಿಕ ಸ್ಥಳಗಳಲ್ಲೂ ಯೋಗ ಕೇಂದ್ರಗಳನ್ನು ತೆರೆಯಲಾಗಿತ್ತು. ವಿಕ್ಟೋರಿಯಾ ಮೆಮೋರಿಯಲ್ ಆವರಣ, ಹೌರಾ ಸೇತುವೆಯ ಆಯ್ದ ಭಾಗಗಳು, ಈಡನ್ ಗಾರ್ಡನ್ಸ್ ಕ್ರೀಡಾಂಗಣದ ಆವರಣಈ ಎಲ್ಲಾ ಸ್ಥಳಗಳಲ್ಲಿ ಬೆಳಗ್ಗೆ ಏಕಕಾಲದಲ್ಲಿ ಹೂವಿನ ಅಲಂಕಾರಗಳ ನಡುವೆ ಸಹಸ್ರಾರು ಜನರು ಯೋಗ ಮಾಡಿದರು.

ಈ ಬಾರಿಯ ಯೋಗ ದಿನಾಚರಣೆಯನ್ನು ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ಎಂಬ ಘೋಷವಾಕ್ಯದೊಂದಿಗೆ ಆಚರಿಸಲಾಗುತ್ತಿದೆ. ವಯಸ್ಸಾದಂತೆ ದೈಹಿಕ ಅರ್ಹತೆ, ಮಾನಸಿಕ ಸಮತೋಲನ ಮತ್ತು ಸಕ್ರಿಯ ಜೀವನವನ್ನು ಕಾಪಾಡಿಕೊಳ್ಳುವಲ್ಲಿ ಯೋಗದ ಪಾತ್ರವನ್ನು ಈ ವರ್ಷದ ಥೀಮ್ ಎತ್ತಿತೋರಿಸುತ್ತದೆ.

# ರಕ್ಷಣಾ ಕ್ಷೇತ್ರದಲ್ಲಿ ಭಾರತ ಖರೀದಿದಾರ ರಾಷ್ಟ್ರವಾಗಿ ಉಳಿಯಲು ಬಯಸದು: ಮೋದಿ ಭರವಸೆ




**ನವದೆಹಲಿ, ಜೂ.21:** ರಕ್ಷಣಾ ಕ್ಷೇತ್ರದಲ್ಲಿ ಭಾರತ ಇನ್ನು ಮುಂದೆ ಕೇವಲ ಖರೀದಿದಾರ ರಾಷ್ಟ್ರವಾಗಿ ಉಳಿಯಲು ಬಯಸುವುದಿಲ್ಲ ಎಂದು ಪ್ರಧಾನಿ ಮೋದಿ ಮಹತ್ವದ ಹೇಳಿಕೆ ನೀಡಿದ್ದಾರೆ. "ಈ ಮೂರು ನೌಕೆಗಳು ಭಾರತದ ಮೂರು ಮಹತ್ವದ ಸಂಕಲ್ಪಗಳ ಸಂಕೇತಗಳಾಗಿವೆ. ಭಾರತ ಇನ್ನು ಮುಂದೆ ಕೇವಲ ಖರೀದಿದಾರ ರಾಷ್ಟ್ರವಾಗಿ ಉಳಿಯಲು ಬಯಸುವುದಿಲ್ಲ ಎಂದು ಹೇಳಿದರು.

ಈ ಮೂರು ನೌಕೆಗಳು ಭಾರತದಲ್ಲೇ ನಿರ್ಮಾಣಗೊಂಡಿದ್ದು, ಭಾರತದಲ್ಲೇ ವಿನ್ಯಾಸಗೊಳಿಸಲಾಗಿದೆ. ಭಾರತೀಯ ಕೈಗಾರಿಕೆಗಳ ಪ್ರತಿಭೆ, ಭಾರತೀಯ ಎಂಜಿನಿಯರ್‌ಗಳ ಕೌಶಲ್ಯ ಮತ್ತು ಭಾರತೀಯ ಕಾರ್ಮಿಕರ ಶ್ರಮದ ಫಲವೇ ಇವು. ಹೊಸ ಭಾರತದ ಅತಿದೊಡ್ಡ ಶಕ್ತಿ ಇದೇ. ಇಂದು ಭಾರತ ರಕ್ಷಣಾ ಕ್ಷೇತ್ರದಲ್ಲಿ ಕೇವಲ ಖರೀದಿದಾರನಾಗಿ ಉಳಿಯಲು ಬಯಸುವುದಿಲ್ಲ. ನಮ್ಮ ಸೇನಾ ಸಾಮರ್ಥ್ಯ ವಿಶ್ವಕ್ಕೆ ಮಾರುಕಟ್ಟೆಯಾಗಬಾರದು. ನಮ್ಮ ಶಕ್ತಿಯ ವ್ಯಾಖ್ಯಾನ ವಿಶ್ವದ ಮಾರುಕಟ್ಟೆಯಾಗುವುದರಲ್ಲಿ ಇಲ್ಲ; ಸ್ವಾವಲಂಬಿಯಾಗುವುದರಲ್ಲಿದೆ" ಎಂದು ಪ್ರಧಾನಿ ಮೋದಿ ಹೇಳಿದರು. ಯಾವ ದೇಶದ ಸಮುದ್ರಶಕ್ತಿ ಬಲವಾಗಿರುತ್ತದೆಯೋ, ಅದರ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವೂ ಬಲವಾಗಿರುತ್ತದೆ. ಭಾರತ ಈ ವಾಸ್ತವವನ್ನು ಚೆನ್ನಾಗಿ ಅರ್ಥಮಾಡಿಕೊಂಡಿದೆ. ಕೆಲವು ವರ್ಷಗಳ ಹಿಂದೆ ನಾವು ಐಎನ್‌ಎಸ್ ವಿಕ್ರಾಂತ್ ಅನ್ನು ರಾಷ್ಟ್ರಕ್ಕೆ ಸಮರ್ಪಿಸಿದಾಗ, ಭಾರತದ ಸಮುದ್ರಶಕ್ತಿಯ ಹೊಸ ಅಧ್ಯಾಯವನ್ನು ಜಗತ್ತಿಗೆ ಘೋಷಿಸಿದ್ದೆವು. ಐಎನ್‌ಎಸ್ ವಿಕ್ರಾಂತ್‌ನಿಂದ ಇಂದಿನವರೆಗಿನ ಪಯಣವು ಕೇವಲ ಹೊಸ ಯುದ್ಧನೌಕೆಗಳ ಪಯಣವಲ್ಲ; ಅದು ಭಾರತದ ಬೆಳೆಯುತ್ತಿರುವ ಸ್ವಾವಲಂಬನೆಯ ಪಯಣವೂ ಆಗಿದೆ. ಇಂದು ಐಎನ್‌ಎಸ್ ಅಗ್ರಾಯ್, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ಯುದ್ಧ ನೌಕೆಗಳು ಆ ಪಯಣಕ್ಕೆ ಹೊಸ ವೇಗವನ್ನು ನೀಡಿವೆ," ಎಂದು ಪ್ರಧಾನಿ ಮೋದಿ ಹೇಳಿದರು. ಅಂದಹಾಗೆ ಈ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳದ ರಾಜ್ಯಪಾಲ ಆರ್. ಎನ್. ರವಿ, ಪಶ್ಚಿಮ ಬಂಗಾಳ ಸಿಎಂ ಸುವೇಂದು ಅಧಿಕಾರಿ ಹಾಗೂ ಭಾರತೀಯ ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕೃಷ್ಣ ಸ್ವಾಮಿನಾಥನ್ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

# ಕೆಪಿಸಿಸಿ ಸಾರಥಿಯಾಗಿ ಬಿ.ಕೆ. ಹರಿಪ್ರಸಾದ್ ಅಧಿಕಾರಕ್ಕೆ



**ಬೆಂಗಳೂರು, ಜೂ. 21:** ಕೆಪಿಸಿಸಿ ಅಧ್ಯಕ್ಷರಾಗಿ ಹಿರಿಯ ಮುಖಂಡ, ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಭಾನುವಾರ ಅಧಿಕೃತವಾಗಿ ಅಧಿಕಾರ ವಹಿಸಿಕೊಂಡರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟದ ಸಚಿವರು, ಶಾಸಕರು ಸೇರಿದಂತೆ ಹಲವರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಪದಗ್ರಹಣ ಸಮಾರಂಭದಲ್ಲಿ ಹಾಲಿ ಹಾಗೂ ಮಾಜಿ ಮುಖ್ಯಮಂತ್ರಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದ ಅಂಗವಾಗಿ ಬೆಂಗಳೂರಿನಾದ್ಯಂತ ಫ್ಲೆಕ್ಸ್‌ಗಳು, ಬ್ಯಾನರ್‌ಗಳು ರಾರಾಜಿಸುತ್ತಿದ್ದವು. ಕಾಂಗ್ರೆಸ್ ಪಾಳಯದಲ್ಲಿ ಹೊಸ ಉತ್ಸಾಹ ಮೂಡಿಸಿತ್ತು. ಕಾರ್ಯಕರ್ತರಲ್ಲಿ ಸಂಭ್ರಮ ಮೇರೆ ಮೀರಿತ್ತು.

ಅಧಿಕಾರ ಹಸ್ತಾಂತರದ ಪರ್ವದಲ್ಲಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು, ಕೆಪಿಸಿಸಿ ಅಧ್ಯಕ್ಷರಾಗಿ ಕೆಲಸ ಮಾಡುತ್ತಿದ್ದ ಆಗಿನ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಆಯ್ಕೆಯಾದರು. ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ ಎಂಬ ಸಿದ್ಧಾಂತದ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಿದ್ದರು. ಬಿ.ಕೆ. ಹರಿಪ್ರಸಾದ್ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದರು. ದೆಹಲಿಯಲ್ಲಿ ಬಿ.ಕೆ.ಹರಿಪ್ರಸಾದ್ ಮತ್ತು ಡಿ.ಕೆ.ಶಿವಕುಮಾರ್ ನಡುವೆ ರಹಸ್ಯ ಸಭೆ ನಡೆಯಿತು.

ಅನಂತರ ಹರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದು, ಜೂನ್ 3ರಂದು ಎಐಸಿಸಿ ಅಧ್ಯಕ್ಷರು ಹರಿಪ್ರಸಾದ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಘೋಷಣೆ ಮಾಡಿದ್ದರು. 18 ದಿನಗಳ ಬಳಿಕ ಇಂದು ಹರಿಪ್ರಸಾದ್ ಅಧಿಕಾರ ಸ್ವೀಕರಿಸಿದ್ದಾರೆ.

4 ಬಾರಿ ರಾಜ್ಯಸಭೆ ಸದಸ್ಯರಾಗಿ, 1 ಬಾರಿ ವಿಧಾನಪರಿಷತ್ ಸದಸ್ಯರಾಗಿದ್ದ ಬಿ.ಕೆ.ಹರಿಪ್ರಸಾದ್ ಮೇಲ್ಮನೆಗೆ 2ನೇ ಅವಧಿಗೆ ಸದಸ್ಯರಾಗಿ ಇತ್ತೀಚೆಗಷ್ಟೇ ಮರು ಆಯ್ಕೆಯಾಗಿದ್ದಾರೆ. ಇದಕ್ಕೂ ಮೊದಲು ಹರಿಪ್ರಸಾದ್ ಗುಜರಾತ್, ಹರಿಯಾಣ, ಉತ್ತರ ಪ್ರದೇಶ, ಮಹಾರಾಷ್ಟ್ರ ಮೊದಲಾದ ರಾಜ್ಯಗಳಲ್ಲಿ ಕಾಂಗ್ರೆಸ್ ಉಸ್ತುವಾರಿ ನಾಯಕರಾಗಿ ಕೆಲಸ ಮಾಡಿದ್ದಾರೆ.

ರಾಜಕಾರಣದಲ್ಲಿ ಕಾಂಗ್ರೆಸ್‌ನ ನಿಷ್ಠಾವಂತರಾಗಿ ಗುರುತಿಸಿಕೊಂಡಿರುವ ಹರಿಪ್ರಸಾದ್, ಬಿಜೆಪಿ ಮತ್ತು ಆರ್‌ಎಸ್‌ಎಸ್‌ನ ಕಡುವೈರಿ ಎಂದು ಬಿಂಬಿಸಿಕೊಂಡಿದ್ದಾರೆ. ಹೈಕಮಾಂಡ್ ಅಳೆದು–ತೂಗಿ ಹರಿಪ್ರಸಾದ್ ಅವರನ್ನು ಪಕ್ಷದ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದೆ.

ಅಧಿಕೃತವಾಗಿ ಅಧಿಕಾರ ವಹಿಸಿಕೊಂಡ ಬಳಿಕ ಸಂಘಟನೆಗೆ ಹೊಸ ಸ್ವರೂಪ ನೀಡಲು ಹರಿಪ್ರಸಾದ್ ಕಾರ್ಯಾರಂಭ ಮಾಡಿದ್ದಾರೆ.

# ದೇವರ ಹೆಸರಲ್ಲಿ ಬಿಜೆಪಿ ಅಪಾರ ಲೂಟಿ

## ಪ್ರಧಾನಿ ವಿರುದ್ಧ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ



ಬೆಂಗಳೂರು, ಜೂ.21: ಅಯೋಧ್ಯೆಯಲ್ಲಿ ರಾಮನ ಗುಡಿ ಕಟ್ಟುತ್ತೇವೆ ಎಂದು ಚಂದಾ ಎತ್ತಿದ ಬಿಜೆಪಿಯವರು ಅದರ ಲೆಕ್ಕವನ್ನು ನೀಡಿಲ್ಲ. ಈಗ ರಾಮ ಮಂದಿರ ಕಟ್ಟಿದ ಮೇಲೂ ಅಲ್ಲಿ 5 ಸಾವಿರ ಕೋಟಿಯಷ್ಟು ಹಣ ಕಳ್ಳತನವಾಗಿದೆ. ರಾಮನ ಹೆಸರಲ್ಲಿ ಲೂಟಿ ಮಾಡಲಾಗುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಇಂದಿಲ್ಲಿ ವಾಗ್ದಾಳಿ ನಡೆಸಿದರು.

**ಲೂಟಿ ಮಾಡಲು ದೇವರ ಗುಡಿ ಕಟ್ಟಬೇಕೆ?**

ಅದರ ಉದ್ಘಾಟನೆ ಮಾಡಿದವರು ಯಾರು? ಪೂಜ್ಯ ವ್ಯಕ್ತಿಗಳಿಂದ ಗುಡಿ ಉದ್ಘಾಟನೆ ಮಾಡಬೇಕಿತ್ತು. ಆದರೆ ಮೋದಿ ಮಂದಿರ ಉದ್ಘಾಟಿಸಿದರು. ಆದರೆ ಅವರ ಶಿಷ್ಯರೇ ಹುಂಡಿ ಲೂಟಿ ಮಾಡುತ್ತಿದ್ದಾರೆ. ಇದರ ತನಿಖೆ ಆಗಬೇಕು. ಎಸ್ ಐಟಿ ರಚನೆ ಮಾಡಬೇಕು ಎಂದು ಆಗ್ರಹಿಸಿದರು.

ಮೋದಿ ಭಾರತ ಹಾಳು ಮಾಡಿದರೆ. ಟ್ರಂಪ್ ಪ್ರಪಂಚ ಹಾಳು ಮಾಡುತ್ತಿದ್ದಾನೆ. ಗುಡ್ ಫ್ರೆಂಡ್ ಅಂತ ಬೇರೆ ಹೇಳುತ್ತಾರೆ. ಇಂತಹ ಗುಡ್ ಫ್ರೆಂಡ್ ದೇಶಕ್ಕೆ ಕೆಟ್ಟ ಹೆಸರು ತರುತ್ತಿದ್ದಾರೆ. ದೇಶದ ಜನ ಸಾಯುತ್ತಿದ್ದಾರೆ. ಟ್ರಂಪ್ ಕಾರಣಕ್ಕೆ ತೈಲಬೆಲೆ ಏರಿಕೆಯಾಗಿದೆ. ಮೋದಿ ಫ್ರೆಂಡ್ ಎನ್ನುತ್ತಾರೆ.

ಕೆಪಿಸಿಸಿ ನೂತನ ಅಧ್ಯಕ್ಷರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ದೇಶದಲ್ಲಿ ನೀಟ್ ಬದಲು ಕರ್ನಾಟಕ ಮಾದರಿ ಸಿಇಟಿ ಮಾಡಬೇಕು. ಅದಕ್ಕೆ ಪಿಯು ಅಂಕಗಳನ್ನು ಸೇರಿಸಬೇಕು. ವೈದ್ಯಕೀಯ ಸೀಟುಗಳು ಕೇವಲ ಶ್ರೀಮಂತರ ಪಾಲಾಗುತ್ತಿದೆ. ಬಡವರ ಮಕ್ಕಳು, ಪ್ರತಿಭಾವಂತರು ಒದ್ದಾಡುತ್ತಿದ್ದಾರೆ. ಮಕ್ಕಳ ಪರವಾದ ಕಾನೂನು ಜಾರಿಗೆ ತರಬೇಕು. ರಾಹುಲ್ ಗಾಂಧಿ ಇದರ ಬಗ್ಗೆ ದೊಡ್ಡ ಹೋರಾಟ ಮಾಡುತ್ತಿದ್ದಾರೆ. ನಾವೂ ಇದಕ್ಕೆ ಕೈ ಜೋಡಿಸಬೇಕು ಎಂದರು.

ನನ್ನ 58 ವರ್ಷಗಳ ರಾಜಕೀಯ ಜೀವನದಲ್ಲಿ ಎಲ್ಲವನ್ನೂ ನೋಡಿದ್ದೇನೆ. ಕಾಂಗ್ರೆಸ್ ಪಕ್ಷದಿಂದ ನಾಯಕರು ಬೆಳೆದಿದ್ದಾರೆಯೇ ಹೊರತು ಅವರಿಂದ ಕಾಂಗ್ರೆಸ್ ಪಕ್ಷವಲ್ಲ. ನಾವೆಲ್ಲರೂ ಸೇರಿ ಕಾಂಗ್ರೆಸ್ ಪಕ್ಷವನ್ನು ಕಟ್ಟಬೇಕು. ಯಾವುದೇ ಕಾರಣಕ್ಕೂ ಶಿಸ್ತನ್ನು ಮರೆಯಬಾರದು. ಶಿವಕುಮಾರ್ ಅವರು ಸಾಕಷ್ಟು ಸೇವೆ ಸಲ್ಲಿಸಿ ರಾಜ್ಯದ ಮೂಲೆ, ಮೂಲೆಗೂ ತಲುಪಿ ಕೆಲಸ ಮಾಡಿದ್ದಾರೆ. ಎಲ್ಲರನ್ನು ಒಗ್ಗೂಡಿಸಿ ಪಕ್ಷ ಕಟ್ಟಿದ್ದಾರೆ. ಸಿದ್ದರಾಮಯ್ಯ ಅವರು ತಮ್ಮ ಅಧಿಕಾರದ ಅವಧಿಯಲ್ಲಿ ನೀಡಿದ ಎಲ್ಲಾ ಭರವಸೆಗಳನ್ನು ಈಡೇರಿಸಿದ್ದಾರೆ. ಇಬ್ಬರೂ ಸೇರಿ ಸರ್ಕಾರವನ್ನು ಅತ್ಯಂತ ಸುಭದ್ರವಾಗಿ ಜನಪರವಾಗಿ ಮುನ್ನಡೆಸಿದ್ದಾರೆ. ಇವರ ರೀತಿಯಲ್ಲಿ ಕೆಲಸ ಮಾಡಿದರೆ ಮತ್ತೊಮ್ಮೆ ನಮ್ಮ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಬೆಲೆಏರಿಕೆ, ಹಣದುಬ್ಬರ ದೇಶದಲ್ಲಿ ಹೆಚ್ಚಾಗಿದೆ. ಗ್ಯಾಸ್, ಪೆಟ್ರೋಲ್, ಆಹಾರ ಪದಾರ್ಥಗಳು ಹೀಗೆ ಪ್ರತಿಯೊಂದು ಸಹ ಜನಸಾಮಾನ್ಯರಿಗೆ ದುಬಾರಿಯಾಗಿವೆ. ಇದು ಮೋದಿ ಸರ್ಕಾರದ ಕೊಡುಗೆ. ಇದರ ವಿರುದ್ಧ ಹೋರಾಟ ಮಾಡುವ ಜವಾಬ್ದಾರಿ ನಮ್ಮ ಮೇಲಿದೆ. ಇದನ್ನು ಸಂಘಟಿಸುವ ಜವಾಬ್ದಾರಿ ಬಿ.ಕೆ.ಹರಿಪ್ರಸಾದ್ ಅವರ ಮೇಲಿದೆ. ಹರಿಪ್ರಸಾದ್ ಅವರು ಪಕ್ಷಕ್ಕೆ ಹೊಸಬರಲ್ಲ. ಸಾಮಾನ್ಯ ಕಾರ್ಯಕರ್ತನಾಗಿ ಕೆಪಿಸಿಸಿ ಅಧ್ಯಕ್ಷರಾಗಿದ್ದಾರೆ. ಹಲವಾರು ಹುದ್ದೆಗಳನ್ನು ಅಲಂಕರಿಸಿದ್ದಾರೆ. ದೇಶದ ಅನೇಕ ರಾಜ್ಯಗಳಲ್ಲಿ ಕೆಲಸ ಮಾಡಿದ್ದಾರೆ.

ಪಕ್ಷವನ್ನು ತಳಮಟ್ಟದಿಂದ ಕಟ್ಟಿರುವ, ಕಾರ್ಯಕರ್ತರನ್ನು ಗುರುತಿಸುವ, ಪಕ್ಷದ ಸಿದ್ಧಾತ ಪಾಲಿಸುವ ವ್ಯಕ್ತಿಯ ಕೈಯಲ್ಲಿಯೇ ಪಕ್ಷದ ಜವಾಬ್ದಾರಿ ನೀಡಬೇಕು ಎಂದು ನಾವೆಲ್ಲರೂ ತೀರ್ಮಾನ ಮಾಡಿ ಕೊನೆಗೆ ಹರಿಪ್ರಸಾದ್ ಅವರಿಗೆ ಈ ದೊಡ್ಡ ಜವಾಬ್ದಾರಿ ನೀಡಲಾಗಿದೆ. ಹರಿಪ್ರಸಾದ್ ಒಂದು ವರ್ಗಕ್ಕೆ ಸೀಮಿತವಾದ ನಾಯಕರಲ್ಲ. ಎಲ್ಲರನ್ನೂ ಒಟ್ಟಾಗಿ ಕರೆದುಕೊಂಡು ಹೋಗುತ್ತಾರೆ. ಇಂತಹ ನಾಯಕನ ಕೈಯಲ್ಲಿ ಜವಾಬ್ದಾರಿ ನೀಡಿದ್ದೇವೆ. ಅವರ ನೇತೃತ್ವದಲ್ಲಿ ಚುನಾವಣೆಗಳನ್ನು ಎದುರಿಸೋಣ. ಅವರು ನಮಗೆ ಶಕ್ತಿ ನೀಡುತ್ತಾರೆ ಎಂದು ಭರವಸೆ ಇಟ್ಟಿದ್ದೇನೆ ಎಂದರು.

ನಾವು ಮುಂಬರುವ ಚುನಾವಣೆಯಲ್ಲಿ ಅಧಿಕಾರಕ್ಕೆ ಬರದಿದ್ದರೆ ಈ ದೇಶಕ್ಕೆ ಉಳಿಗಾಲವಿಲ್ಲ. ಆರ್‌ಎಸ್‌ಎಸ್, ಬಿಜೆಪಿ, ಮೋದಿ ಈ ದೇಶವನ್ನು ಹಾಳು ಮಾಡುತ್ತಿದ್ದಾರೆ. ಇದರ ಪರಿಣಾಮ ಯುವಕರು, ಮಹಿಳೆಯರ ಮೇಲೆ ಬೀಳುತ್ತಿದೆ. ಇದು ಮೋದಿ ಕೊಡುಗೆ. ನಿರುದ್ಯೋಗದಿಂದ ಯುವಕರು ಹಾಳಾಗುತ್ತಿದ್ದಾರೆ. 2 ಕೋಟಿ ಉದ್ಯೋಗ ಕೊಡುತ್ತೇನೆ ಎಂದು ಮೋದಿ ಹೇಳಿದರು. ಆದರೆ ಕೊಟ್ಟಿದ್ದಾರೆಯೇ? ಎಬಿವಿಪಿ ಅವರು ಇದರ ಬಗ್ಗೆ ಏಕೆ ಕೇಳುತ್ತಿಲ್ಲ? ನಾವು ಅಧಿಕಾರದಲ್ಲಿ ಇದ್ದಾಗ ಸಣ್ಣ ಬೆಲೆ ಏರಿಕೆ ಆದರೂ ಜಂಡಾ ಹಿಡಿದು ಬೀದಿಗೆ ಬರುತ್ತಿದ್ದರು. ಈಗ ಎಲ್ಲಿದ್ದಾರೆ ಬಿಜೆಪಿಯವರು. ಬಡವರ ಮೇಲಿನ ದಬ್ಬಾಳಿಕೆಯೇ ಅವರ ಮಂತ್ರ ಎಂದು ಖರ್ಗೆ ಕುಟುಕಿದರು.

ಒಂದಲ್ಲ ಒಂದು ಸಮಯದಲ್ಲಿ ಮೋದಿ ಸರ್ಕಾರ ಬಿದ್ದೇ ಬೀಳುತ್ತದೆ. ಆ ಸರ್ಕಾರ ದೊಡ್ಡ ಸಂಕಟಕ್ಕೆ ಎದುರಾಗಲಿದೆ. ಒಂದೇ ಒಂದು ಸಹಾಯವನ್ನೂ ಯಾವ ವರ್ಗಕ್ಕೂ ಮಾಡಿಲ್ಲ. ಶಿಕ್ಷಣದಲ್ಲಿ ದಿಕ್ಕು ತಪ್ಪಿಸುವ ಪಾಠಗಳನ್ನು ನೀಡುತ್ತಿದ್ದಾರೆ. ಶಿಕ್ಷಕರು ಸೇರಿದಂತೆ ಅನೇಕ ಹುದ್ದೆಗಳಿಗೆ ಆರ್‌ಎಸ್‌ಎಸ್ ಹಿನ್ನೆಲೆಯ ಜನರನ್ನು ತುರುಕುತ್ತಿದ್ದಾರೆ. ಏಕೆಂದರೆ ಆಡಳಿತದಲ್ಲಿ ಹಿಡಿತ ಸಾಧಿಸಬೇಕು ಎಂದು ಹೀಗೆ ಮಾಡುತ್ತಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಮಾತನಾಡಿ, ಕಾಂಗ್ರೆಸ್ ಪಕ್ಷದ ನಾಯಕರು ಸಮಾನತೆ ಸಿದ್ಧಾಂತಗಳ ಹರಿಕಾರರು. ಬಡವರ ಪರ ದಲಿತ, ಆದಿವಾಸಿಗಳ ಪರ ಕಾಳಜಿ ಇರುವ ಧೀಮಂತ ನಾಯಕ ಹರಿಪ್ರಸಾದ್. ಕಾಂಗ್ರೆಸ್ ನಾಯಕರು ಅಧಿಕಾರಕ್ಕಾಗಿ ಇರುವ ನಾಯಕರಲ್ಲ. ಜನರಿಗೆ ಅಧಿಕಾರ ನೀಡುವ ನಾಯಕರು. ಕಾಂಗ್ರೆಸ್ ಮಾದರಿ ದೇಶಕ್ಕೆ ಮಾದರಿ. ಕಾಂಗ್ರೆಸ್ ನಾಯಕತ್ವ ದೇಶಕ್ಕೆ ಮಾದರಿ. ಕರ್ನಾಟಕ ಮಾದರಿ ಇಡೀ ದೇಶಕ್ಕೆ ಮಾದರಿ. ಸಮಾಜದ ಕಟ್ಟಕಡೆಯ ಪ್ರಜೆಗೆ ನ್ಯಾಯ ಒದಗಿಸುವುದೇ ಕಾಂಗ್ರೆಸ್ ತತ್ವ ಎಂದರು.

ಕಾಂಗ್ರೆಸ್ ಪಕ್ಷ ಯಾವುದೇ ತಾರತಮ್ಯ ಇಲ್ಲದೇ. ಜಾತಿ ಮಾಡದೇ ಕಾರ್ಯಕ್ರಮ ನೀಡಿದೆ. ಇದು ಜನ ಸೇವೆಗೆ ಇರುವ ಸರ್ಕಾರ. ಒಂದು ಕಡೆ ಜನಪರ ಕಾಂಗ್ರೆಸ್ ಸರ್ಕಾರ ಇನ್ನೊಂದು ಕಡೆ ಜನಕ್ಕೆ ಪ್ರಹಾರ ಮಾಡುವ ಬಿಜೆಪಿ ಸರ್ಕಾರ ನಿಂತಿದೆ. ನರೇಂದ್ರ ಮೋದಿ ಸರ್ಕಾರ ಜನಸಾಮಾನ್ಯರ ಮೇಲೆ ಹಲ್ಲೆ ಮಾಡುತ್ತಿದೆ.

ಲೂಟಿ ಮಾಡುತ್ತಿದೆ. 12 ವರ್ಷಗಳಲ್ಲಿ ತೈಲಗಳ ಮೇಲೆ ತೆರಿಗೆ ಹಾಕಿ ಕೊಳ್ಳೆ ಹೊಡೆದಿದ್ದಾರೆ. ಎರಡು ತಿಂಗಳಲ್ಲಿ ಪೆಟ್ರೋಲ್ ಡೀಸೆಲ್ ಬೆಲೆ 8 ರೂಪಾಯಿ ಜಾಸ್ತಿ ಮಾಡಿ ಲೂಟಿ ಮಾಡಿದ್ದಾರೆ. ಕಮರ್ಷಿಯಲ್ ಗ್ಯಾಸ್, ಬೆಲೆ ಏರಿಕೆ ಮಾಡಿದ್ದಾರೆ ಎಂದರು.

# ಅಮೆರಿಕ–ಇರಾನ್ ಮಾತುಕತೆಯಲ್ಲಿ ಮಹಾ ಪ್ರಗತಿ: ಜೆಡಿ ವ್ಯಾನ್ಸ್



ಬರ್ನ್, ಜೂ.21: ಇರಾನ್ ಜೊತೆಗಿನ ತನ್ನ ಚರ್ಚೆಯಲ್ಲಿ ವಾಷಿಂಗ್ಟನ್ ಈಗಾಗಲೇ ತನ್ನ ಎರಡು ಪ್ರಮುಖ ಉದ್ದೇಶಗಳನ್ನು ಪಡೆದುಕೊಂಡಿದೆ ಎಂದು ಅಮೆರಿಕದ ಉಪಾಧ್ಯಕ್ಷ ಜೆಡಿ ವ್ಯಾನ್ಸ್ ಭಾನುವಾರ ಹೇಳಿದ್ದಾರೆ – ಹಾರ್ಮುಜ್ ಜಲಸಂಧಿಯನ್ನು ಪುನಃ ತೆರೆಯುವುದು ಮತ್ತು ಟೆಹ್ರಾನ್‌ನ ಪರಮಾಣು ಶಸ್ತ್ರಾಸ್ತ್ರಗಳ ಕಾರ್ಯಕ್ರಮವನ್ನು ಕೊನೆಗೊಳಿಸುವುದು – ಸ್ವಿಜರ್‌ಲೆಂಡ್‌ನಲ್ಲಿ ಉನ್ನತ ಮಟ್ಟದ ಮಾತುಕತೆಗಳು ಮುಂದುವರೆದಂತೆ. ಬರ್ಗೆನ್‌ಸ್ಟಾಕ್‌ನ ಸ್ವಿಸ್ ಪರ್ವತ ರೆಸಾರ್ಟ್‌ನಲ್ಲಿ ಇರಾನಿನ ಅಧಿಕಾರಿಗಳೊಂದಿಗೆ ಮಾತುಕತೆಯ ನಂತರ ಮಾತನಾಡಿದ ವ್ಯಾನ್ಸ್, ಹತ್ತು ವಾರಗಳಲ್ಲಿ ಎರಡೂ ಕಡೆಯ ನಡುವಿನ ಮೊದಲ ನೇರ ಮಾತುಕತೆಗಳಲ್ಲಿ "ಮಹಾ ಪ್ರಗತಿ" ಸಾಧಿಸಲಾಗಿದೆ ಎಂದು ಹೇಳಿದರು.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಮತ್ತು ಕತಾರ್ ಪ್ರಧಾನಿ ಶೇಖ್ ಮೊಹಮ್ಮದ್ ಬಿನ್ ಅಬ್ದುಲ್‌ರಹಮಾನ್ ಬಿನ್ ಜಾಸಿಮ್ ಅಲ್ ಥಾನಿ ಅವರೊಂದಿಗೆ ವರದಿಗಾರರನ್ನು ಉದ್ದೇಶಿಸಿ ಮಾತನಾಡಿದ ವ್ಯಾನ್ಸ್, ವಾಷಿಂಗ್ಟನ್ ನಡುವಿನ ಹಲವಾರು ಬಾಕಿ ಇರುವ ಸಮಸ್ಯೆಗಳಿಗೆ ರಾಜತಾಂತ್ರಿಕ ಪರಿಹಾರವನ್ನು ಅನುಸರಿಸಲು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಲ್ಲಾ ಪಕ್ಷಗಳಿಗೆ ಅಧಿಕಾರ ನೀಡಿದ್ದಾರೆ ಎಂದು ಹೇಳಿದರು...

ನಡೆಯುತ್ತಿರುವ ಚರ್ಚೆಗಳು ಅಮೆರಿಕ ಮತ್ತು ಪ್ರಾದೇಶಿಕ ಶಕ್ತಿಗಳು ಭವಿಷ್ಯಕ್ಕಾಗಿ ಹೆಚ್ಚು ಸ್ಥಿರವಾದ ಚೌಕಟ್ಟನ್ನು ನಿರ್ಮಿಸಬಹುದೇ ಎಂದು ನಿರ್ಧರಿಸುತ್ತದೆ ಎಂದು ಉಪಾಧ್ಯಕ್ಷರು ಹೇಳಿದರು.

"ನಾವು ಮಧ್ಯಪ್ರಾಚ್ಯದಲ್ಲಿ ಸಂಬಂಧಗಳನ್ನು ಶಾಶ್ವತವಾಗಿ ಬದಲಾಯಿಸಬಹುದೇ ಅಥವಾ ಹಳೆಯ ರೀತಿಯಲ್ಲಿ ಕೆಲಸಗಳನ್ನು ಮಾಡಲು ಹಿಂತಿರುಗುತ್ತೇವೆಯೇ, ಅದು ನಮ್ಮ ಆದ್ಯತೆಯಲ್ಲ ಆದರೆ ಖಂಡಿತವಾಗಿಯೂ ಸಂಭವಿಸಬಹುದಾದ ವಿಷಯ" ಎಂದು ಅವರು ಹೇಳಿದರು.

ಇರಾನ್‌ನ ಪರಮಾಣು ಪರಮಾಣು... ಅನ್ನು ಒಳಗೊಂಡ 60 ದಿನಗಳ ಮಾತುಕತೆ ಪ್ರಕ್ರಿಯೆಯನ್ನು ಪ್ರಾರಂಭಿಸಿದ ತಿಳಿವಳಿಕೆ ಪತ್ರಕ್ಕೆ ಅಮೆರಿಕ ಮತ್ತು ಇರಾನ್ ಸಹಿಹಾಕಿದ ಕೆಲವು ದಿನಗಳ ನಂತರ ಈ ಹೇಳಿಕೆಗಳು ಬಂದಿವೆ.

## ನಿತ್ಯ ಪಂಚಾಂಗ 22.06.2026 ಸೋಮವಾರ



ಶ್ರೀಶಕ 1949 ಶ್ರೀ ಪರಾಭವ ನಾಮ ಸಂವತ್ಸರ, ಉತ್ತರಾಯಣ–ವಸಂತ/ಗ್ರೀಷ್ಮ ಋತು, ಚಾಂದ್ರಮಾನ, ವೈಶಾಖ – ಜ್ಯೇಷ್ಠ ಮಾಸ

ನಿಜ ಜ್ಯೇಷ್ಠ ಶುದ್ಧ, ಅಷ್ಟಮಿ, ಉತ್ತರಾ ನಕ್ಷತ್ರ, ಶುಕ್ಲಾದೇವಿ ಪೂಜಾ, ಕೊಲ್ಲೂರು ಮೂಕಾಂಬಿಕಾ ಜಯಂತಿ, ಹೊಸೂರು ರಥ, ಇಂಗಳೇಶ್ವರ ಸಿದ್ದಲಿಂಗೇಶ್ವರ ಪುಣ್ಯಾರಾಧನೆ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | ಸ.5.04–6.33 | 12.00–1.30 | 3.00–4.00 |
| ಸೋಮ | ಬೆ.7.20–9.04 | 10.30–12.00 | 1.30–12.00 |
| ಮಂಗಳ | ಮ.3.25–4.59 | 9.00–10.30 | 12.00–1.30 |
| ಬುಧ | ಮ.12.16–1.50 | 7.30–9.00 | 10.30–12.00 |
| ಗುರು | ಮ.1.50–3.29 | 6.00–7.30 | 9.00–10.30 |
| ಶುಕ್ರ | ಬೆ.10.42–12.16 | 3.00–4.30 | 7.30–9.00 |
| ಶನಿ | ಬೆ.9.07–10.41 | 1.30–3.00 | 6.00–7.30 |

# ಡಿ.ಕೆ, ಡಿ.ಕೆ ಘೋಷಣೆ, ಗರಂ ಆದ ಖರ್ಗೆ: ಕಾರ್ಯಕ್ರಮದಲ್ಲಿ ಜೈಕಾರ ಕೂಗಿದರೆ ಶಿಸ್ತುಕ್ರಮದ ಎಚ್ಚರಿಕೆ

**ಬೆಂಗಳೂರು, ಜೂ. 21–** ಕಾಂಗೆಸ್‌ನಲ್ಲಿ ಶಿಸ್ತು ಬಹಳ ಮುಖ್ಯ. ಕಾರ್ಯಕ್ರಮದ ನಡುವೆ ಯಾರಾದರು ವ್ಯಕ್ತಿಗತ ವರ್ಚಸ್ಸಿಗಾಗಿ ಘೋಷಣೆ ಕೂಗಿದರೆ, ಶಿಸ್ತುಕ್ರಮ ಕೈಗೊಳ್ಳುವುದಾಗಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಠಿಣ ಎಚ್ಚರಿಕೆ ನೀಡಿದ್ದಾರೆ.

ನಗರದ ಅರಮನೆ ಮೈದಾನದಲ್ಲಿ ನಡೆದ ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರು ಮಾತನಾಡುತ್ತಾ, ಡಿ. ಕೆ.ಶಿವಕುಮಾರ್ ಈ ಹಿಂದೆ ಆರೂವರೆ ವರ್ಷ ಪಕ್ಷದ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು. ಈಗ ಮುಖ್ಯಮಂತ್ರಿಯಾದ ಮೇಲೆ ಎನ್ನುತ್ತಿದ್ದಂತೆ ಸಭಾಂಗಣದಲ್ಲಿ ಇದ್ದ ಕಾರ್ಯಕರ್ತರು, ಮುಖಂಡರ ಪೈಕಿ ಡಿಕೆ, ಡಿಕೆ. ಎಂದು ಘೋಷಣೆ ಕೂಗಿದರು.



ವೇದಿಕೆಯಲ್ಲೇ ಇದ್ದ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ತಕ್ಷಣವೇ ಎದ್ದು ನಿಂತು ಘೋಷಣೆ ಕೂಗದಂತೆ ಕೈ ಸನ್ನೆ ಮಾಡಿದರು. ಘೋಷಣೆಗಳಿಂದ ಮುಜುಗರಕ್ಕೊಳಗಾದ ಮಲ್ಲಿಕಾರ್ಜುನ ಖರ್ಗೆ ಅವರು ನಿಮ್ಮದೆಲ್ಲಾ ಮುಗಿಯಿತೇ? ಮುಂದೆ ಇರುವ ಒಂದು ಗುಂಪಿನಲ್ಲಿ ಮಾತ್ರ ಈ ರೀತಿ ಜೈಕಾರ ಕೇಳಿ ಬರುತ್ತಿದೆ. ಇಲ್ಲಿ ನಿಂತು ಕೆಲವರು ಘೋಷಣೆ ಕೂಗಿದರೆ, ದೇಶವೇ ನಮ್ಮ ಕೈಗೆ ಬಂದಾಂತಾಗುತ್ತದೆಯೇ? 'ಯೂಸ್ ಲೆಸ್ ಫೆಲೋಸ್' ಎಂದು ಖಾರವಾಗಿ ಹೇಳಿದರು.

ಇದು ಒಬ್ಬ ವ್ಯಕ್ತಿಯ ಸಭೆಯಲ್ಲ, ಎಲ್ಲರೂ ಸೇರಿ ಪಕ್ಷವನ್ನು ಬಲಗೊಳಿಸಬೇಕು. ಒಬ್ಬರ ಹೆಸರನ್ನು ಮಾತ್ರ ಕೂಗಿದರೆ ಉಳಿದವರು ಕಸ ಗುಡಿಸಲು ಬಂದಿದ್ದಾರೆಯೇ? ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಕಾಂಗ್ರೆಸ್‌ನಲ್ಲಿ ಶಿಸ್ತು ಬಹಳ ಮುಖ್ಯ. 58 ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಬಹಳ ಏರುಪೇರುಗಳನ್ನು ನೋಡಿದ್ದೇನೆ. ಅನೇಕರು ಕಾಂಗ್ರೆಸ್‌ನಿಂದ ನಾಯಕರಾಗಿದ್ದಾರೆ. ಕಾಂಗ್ರೆಸ್‌ಗೆ ಅವರ ಕೊಡುಗೆ ಕಡಿಮೆ ಇದ್ದರೂ, ಪಕ್ಷ ಅವರಿಗೆ ಶಕ್ತಿ ನೀಡಿದೆ ಎಂದು ಹೇಳಿದರು.

ಈ ರೀತಿಯ ಘೋಷಣೆ ಕೂಗುವವರ ವಿರುದ್ಧ ದೃಶ್ಯಾವಳಿ ಆಧರಿಸಿ ಶಿಸ್ತು ಕ್ರಮ ಜರುಗಿಸುತ್ತೇನೆ. ಇದು ಅತ್ಯಂತ ಮಹತ್ವದ ಸಭೆ. ಶಿಸ್ತು ಪಾಲನೆ ಮಾಡಿ ಎಂದು ಹೇಳಿದರು.

ಇದೇ ವೇಳೆ ಬಿ.ಕೆ.ಹರಿಪ್ರಸಾದ್ ಮತ್ತು ಡಿ.ಕೆ.ಶಿವಕುಮಾರ್ ಅವರ ಜೋಡಿಯಿಂದ ಪಕ್ಷ ಸಂಘಟನೆ ಬಲಗೊಳ್ಳಲಿದೆ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಬಲ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಂತರ ತಮ್ಮ ಮಾತುಗಳಲ್ಲಿ ಡಿ. ಕೆ.ಶಿವಕುಮಾರ್ ಅವರನ್ನು ಯುವಕ ಎಂದು ಸಂಬೋಧಿಸಿದ ಖರ್ಗೆ ಅವರು ತಕ್ಷಣವೇ ತಿದ್ದಿಕೊಂಡು ಯುವಕ ಏನೂ ಅಲ್ಲ, ಮೊಮ್ಮಗಳು ಬಂದಿದ್ದಾಳೆ. ಆದರೆ ನೋಡಲು ಯುವಕರಂತೆ ಕಾಣುತ್ತಾರೆ. ಹಾಗೆಯೇ ನಡೆಯುತ್ತಾರೆ. ಯುವ ಸಮುದಾಯ ಡಿ. ಕೆ.ಶಿವಕುಮಾರ್ ಜೊತೆಗಿದೆ ಎಂದು ಹಾಸ್ಯ ಚಟಾಕಿ ಹಾರಿಸಿದರು.



ದೆಹಲಿಯ ಹೃದಯ ಭಾಗದಲ್ಲಿರುವ ಅಚ್ಚಹಸಿರ ಸುಂದರ ಮತ್ತು ಸ್ವಚ್ಛ ಪರಿಸರದ ದೆಹಲಿ ಕನ್ನಡ ಶಾಲೆಯ ಮೈದಾನದಲ್ಲಿ ವಿಶ್ವ ಯೋಗದಿನವನ್ನು ಬೆಳಗ್ಗೆ ಸಮೂಹಿಕ ಯೋಗಾಭ್ಯಾಸ ಮಾಡುವ ಮೂಲಕ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ಮತ್ತು ದೆಹಲಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ದೆಹಲಿ ಕನ್ನಡಿಗರೊಂದಿಗೆ ಅರ್ಥಪೂರ್ಣವಾಗಿ ಉತ್ತಮ ಅರೋಗ್ಯ ಕಾಳಜಿಯೊಂದಿಗೆ ಆಚರಿಸಲಾಯಿತು.



ದೆಹಲಿ ಕರ್ನಾಟಕ ಸಂಘದಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲಾಯಿತು.

## ಧರ್ಮಸ್ಥಳದಲ್ಲಿ ಭಕ್ತರ ಗಡಣ- ಹರಿಕೆಮಂಡೆ ಅಲ್ಲೂ ಸರದಿ



**ಮುಂಬಯಿ, ಜು.21:** ಭಾನುವಾರ ಧರ್ಮಸ್ಥಳಕ್ಕೆ ಅಧಿಕ ಸಂಖ್ಯೆಯಲ್ಲಿ ಭಕ್ತಾದಿಗಳು ಆಗಮಿಸಿ ದೇವರದರ್ಶನ ಪಡೆದರು. ಧರ್ಮಸ್ಥಳ, ಕನ್ಯಾಡಿ ಹಾಗೂ ಉಜಿರೆಯಲ್ಲಿ ಎಲ್ಲಾ ವಸತಿಗೃಹಗಳು ಭರ್ತಿಯಾಗಿದ್ದವು. ರಸ್ತೆಗಳಲ್ಲಿ ವಾಹನ ಸಂಚಾರದ ದಟ್ಟಣೆಯೂ ಅಧಿಕವಾಗಿತ್ತು. ಹೋಟೆಲ್‌ಗಳು, ಹರಿಕೆಮಂಡೆ (ಮುಡಿ–ತಲೆಕೂದಲು ತೆಗೆಯುವಲ್ಲಿ), ವಸತಿಗೃಹಗಳು ಎಲ್ಲೆಲ್ಲೂ ಸರದಿ ಸಾಲುಗಳು ರಾರಾಜಿಸುತ್ತಿದ್ದವು.

# ಧರ್ಮಸ್ಥಳದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಕುಮಾರಿ ಚಿನ್ಮಯಿ ಬೆಂಗಳೂರು ಅವರಿಗೆ 'ಯೋಗರತ್ನ' ಪ್ರಶಸ್ತಿ ಪ್ರದಾನ





ಬೆಂಗಳೂರಿನ ಕುಮಾರಿ ಚಿನ್ಮಯಿ ಅವರಿಗೆ "ಯೋಗರತ್ನ" ಪ್ರಶಸ್ತಿ ನೀಡಿ ಗೌರವಿಸಲಾಯಿತು.

**ಮುಂಬಯಿ (ಉಜಿರೆ), ಜು.21:** ನಮ್ಮ ಸನಾತನ ಸಂಸ್ಕೃತಿ ಮತ್ತು ಪರಂಪರೆಯೊಂದಿಗೆ ವಿಶ್ವಕ್ಕೆ ಭಾರತ ನೀಡಿದ ಅಮೂಲ್ಯ ಕೊಡುಗೆ 'ಯೋಗ' ಆಗಿದ್ದು ಜಾಗತಿಕ ಮಟ್ಟದಲ್ಲಿ ಇದಕ್ಕೆ ಹೆಚ್ಚಿನ ಪ್ರಚಾರ ಅಗತ್ಯವಿದೆ ಎಂದು ವಿಧಾನ ಪರಿಷತ್ ಸದಸ್ಯ ಕೆ.ಪ್ರತಾಪಸಿಂಹ ನಾಯಕ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ। ಡಿ.ವೀರೇಂದ್ರ ಹೆಗ್ಗಡೆ ಅವರು ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಸಾಂಕೇತಿಕವಾಗಿ ಚಾಲನೆಯನ್ನಿತ್ತರು. ನಾಯಕ್ ಅವರು ಭಾನುವಾರ ಧರ್ಮಸ್ಥಳದಲ್ಲಿ ಅಮೃತವರ್ಷಿಣಿ ಸಭಾಭವನದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಉದ್ಘಾಟನಾ ಸಮಾರಂಭದಲ್ಲಿ ಶುಭಾಶಂಸನೆಗೈದು, ನಮ್ಮ ಪಂಚೇಂದ್ರಿಯಗಳ ನಿಯಂತ್ರಣದೊಂದಿಗೆ ದೈಹಿಕ ಹಾಗೂ ಮಾನಸಿಕ ಆರೋಗ್ಯಭಾಗ್ಯ ರಕ್ಷಣೆಗೆ ಯೋಗ ಸಹಕಾರಿಯಾಗಿದೆ. ಆಧುನಿಕ ಜೀವನಶೈಲಿ, ಆಹಾರ–ವಿಹಾರ ವಿಧಾನದಿಂದಾಗಿ ನಾವು ಅನೇಕ ಒತ್ತಡಗಳಿಗೆ ಒಳಗಾಗುತ್ತಿದ್ದು ಸುಖ–ಶಾಂತಿ, ನೆಮ್ಮದಿಯ ಜೀವನಕ್ಕೆ ಯೋಗ ಸಹಕಾರಿಯಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ಮಟ್ಟದಲ್ಲಿ ಯೋಗಕ್ಕೆ ಪ್ರಚಾರ ನೀಡುವಲ್ಲಿ ಅಮೂಲ್ಯ ಕೊಡುಗೆ ನೀಡಿದ್ದಾರೆ ಎಂದರು.

ರಾಜೀವ್‌ಗಾಂಧಿ ಆರೋಗ್ಯ ವಿವಿ ಉಪಕುಲಪತಿ ಡಾ। ಭಗವಾನ್ ಬಿ.ಸಿ ಆನ್‌ಲೈನ್ ಮೂಲಕ ಸಂದೇಶ ನೀಡಿ, ಯೋಗಾಭ್ಯಾಸ ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವಾಗಬೇಕೆಂದು ಸಲಹಿ, ರಾಜೀವ್‌ಗಾಂಧಿ ಆರೋಗ್ಯ ವಿವಿಯ 400 ಕಾಲೇಜುಗಳಲ್ಲಿ 45000 ವಿದ್ಯಾರ್ಥಿಗಳು ಯೋಗಾಭ್ಯಾಸ ಮಾಡುತ್ತಿದ್ದಾರೆ ಎಂದರು.

ರಾಜೀವ್‌ಗಾಂಧಿ ಆರೋಗ್ಯ ವಿವಿಯ ಪಠ್ಯಕ್ರಮ ಅಭಿವೃದ್ಧಿ ಕೇಂದ್ರದ ಪ್ರಭಾರ ನಿರ್ದೇಶಕ ಡಾ। ಷಣ್ಮುಖಪ್ಪ ಮಾತನಾಡಿ, ಉಜಿರೆಯ ಎಸ್‌ಡಿಎಂ ಪ್ರಕೃತಿಚಿಕಿತ್ಸಾ ಮತ್ತು ಯೋಗವಿಜ್ಞಾನಗಳ ಕಾಲೇಜು ಆಶ್ರಯದಲ್ಲಿ ವರ್ಷಕ್ಕೊಂದು ಗ್ರಾಮವನ್ನು ದತ್ತು ತೆಗೆದುಕೊಂಡು ಗ್ರಾಮೀಣ ಪ್ರದೇಶದ ಜನರಿಗೆ ಯೋಗಾಭ್ಯಾಸದ ತರಬೇತಿ ನೀಡಬೇಕು ಎಂದು ಸಲಹೆ ನೀಡಿದರು ಹಾಗೂ ರಾಜ್ಯದಲ್ಲಿ 18 ಯೋಗವಿಜ್ಞಾನ ಮತ್ತು ಪ್ರಕೃತಿಚಿಕಿತ್ಸಾ ಪದವಿ ಕಾಲೇಜುಗಳಿದ್ದು ಉಜಿರೆ ಕಾಲೇಜು ಮತ್ತು ಶಾಂತಿವನ ಪ್ರಕೃತಿಚಿಕಿತ್ಸಾ ಆಸ್ಪತ್ರೆಯ ಸೇವೆ ಮತ್ತು ಸಾಧನೆಗೆ ಅಭಿನಂದಿಸಿದರು. ಹಾಗೂ ಉಜಿರೆಯ ಕಾಲೇಜ್‌ನಲ್ಲಿ ಅನಸ್ತೇಶಿಯಾ ಮತ್ತು ಅಕ್ಯುಪಂಕ್ಚರ್‌ನಲ್ಲಿ ಸ್ನಾತಕೋತ್ತರ ಪದವಿ ತರಗತಿಗಳಿಗೆ ಅನುಮತಿ ಕೋರಿದ್ದು ಸದ್ಯದಲ್ಲೆ ಅನುಮೋದನೆ ನೀಡಲಾಗುವುದು ಎಂದು ಅವರು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಬೆಂಗಳೂರಿನ ಕುಮಾರಿ ಚಿನ್ಮಯಿ ಅವರಿಗೆ 'ಯೋಗರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಶಾಂತಿವನ ಪ್ರಕೃತಿಚಿಕಿತ್ಸಾ ಆಸ್ಪತ್ರೆಯ ಮುಖ್ಯ ವೈದ್ಯಾಧಿಕಾರಿ ಡಾ। ಶಿವಪ್ರಸಾದ ಶೆಟ್ಟಿ ವರದಿ ಸಾದರಪಡಿಸಿ ಶಾಲಾ–ಕಾಲೇಜುಗಳಲ್ಲಿ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಯೋಗ ಶಿಬಿರ ನಡೆಸಿ, ಆರೋಗ್ಯ ರಕ್ಷಣೆ ಬಗ್ಗೆ ಅರಿವು, ಜಾಗೃತಿ ಮೂಡಿಸಲಾಗುತ್ತದೆ ಎಂದರು.

ಸಾಮೂಹಿಕ ಯೋಗ ಪ್ರದರ್ಶನ ನಡೆಸಲಾಗಿದ್ದು ಎಸ್‌ಡಿಎಂ ಯೋಗವಿಜ್ಞಾನಗಳ ಮತ್ತು ಪ್ರಕೃತಿಚಿಕಿತ್ಸಾ ಕಾಲೇಜ್‌ನ ಪ್ರಾಂಶುಪಾಲ ಡಾ। ಪ್ರಶಾಂತ ಶೆಟ್ಟಿ ಸ್ವಾಗತಿಸಿದರು. ಡಾ। ಅನನ್ಯ ಕಾರ್ಯಕ್ರಮ ನಿರ್ವಹಿಸಿದರು. ಉಪಪ್ರಾಂಶುಪಾಲೆ ಡಾ। ಸುಜಾತ ಕೆ.ಜೆ ಧನ್ಯವದಿಸಿದರು.

## ಅಡ್ಡಮತದಾನದ ಸತ್ಯಾಸತ್ಯತೆ ಪರಿಶೀಲನೆಗೆ ಧರ್ಮಸ್ಥಳದಲ್ಲಿ ಶಾಸಕಾಂಗ ಸಭೆ: ವಿಜಯೇಂದ್ರ




**ಬೆಂಗಳೂರು, ಜೂ.21:** ಇತ್ತೀಚೆಗೆ ನಡೆದ ವಿಧಾನ ಪರಿಷತ್ ಚುನಾವಣೆಯಲ್ಲಿ ನಡೆದಿದೆ ಎನ್ನಲಾದ ಅಡ್ಡ ಮತದಾನದ ಆಘಾತಕಾರಿ ಬೆಳವಣಿಗೆಯನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಬಿಜೆಪಿ ರಾಜ್ಯ ಘಟಕ ಸಜ್ಜಾಗಿದೆ.

ಅಡ್ಡ ಮತದಾನದ ಸತ್ಯಾಸತ್ಯತೆಯನ್ನು ಹೊರತರಲು ಅತಿ ಶೀಘ್ರದಲ್ಲೇ ಧರ್ಮಸ್ಥಳದಲ್ಲಿ ಬಿಜೆಪಿ ಶಾಸಕಾಂಗ ಪಕ್ಷದ ತುರ್ತು ಸಭೆ ಕರೆಯಲು ತೀರ್ಮಾನಿಸಲಾಗಿದೆ ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರಕಟಿಸಿದ್ದಾರೆ.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ವಿಜಯೇಂದ್ರ, ಈ ಜ್ವಲಂತ ಸಮಸ್ಯೆಯ ಕುರಿತು ಪ್ರತಿಪಕ್ಷ ನಾಯಕ ಆರ್.ಅಶೋಕ್ ಅವರೊಂದಿಗೆ ಸಮಾಲೋಚನೆ ನಡೆಸಲಿದ್ದೇನೆ. ನಾವೆಲ್ಲರೂ ದೇವರ ಮೇಲೆ ಅಪಾರ ನಂಬಿಕೆ ಉಳ್ಳವರಾಗಿದ್ದು, ಧರ್ಮಸ್ಥಳದ ಮಂಜುನಾಥ ಸ್ವಾಮಿಯ ಸನ್ನಿಧಿಯಲ್ಲಿ ಸಭೆ ನಡೆಸುವ ಮೂಲಕ ಸ್ವಂತ ತಾಯಿಗೆ ದ್ರೋಹ ಬಗೆದ ಶಾಸಕರು ಯಾರು ಮತ್ತು ಅದರ ಹಿಂದಿರುವ ಅಸಲಿ ಸತ್ಯವೇನು ಎಂಬುದು ಇಡೀ ನಾಡಿಗೆ ಮನವರಿಕೆಯಾಗಬೇಕಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ನಾಲ್ವರು ಶಾಸಕರು ಅಡ್ಡ ಮತದಾನ ಮಾಡಿದ್ದಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಪಕ್ಷದ ವಿರುದ್ಧ ಕೇಳಿಬರುತ್ತಿರುವ ತೀವ್ರ ಟೀಕೆಗಳನ್ನು ತಾವು ಗಮನಿಸಿರುವುದಾಗಿ ಹೇಳಿದ ವಿಜಯೇಂದ್ರ, ಈ ಅಡ್ಡ ಮತದಾನದ ಘಟನೆಯನ್ನು ನನ್ನ ಮನಸಾಕ್ಷಿ ಯಾವುದೇ ಕಾರಣಕ್ಕೂ ಒಪ್ಪುತ್ತಿಲ್ಲ. ಇದೇ ಘಟನೆಯನ್ನು ನೆಪವಾಗಿಟ್ಟುಕೊಂಡು ಕೆಲವರು ನಾಯಕತ್ವದ ಮೇಲೆ ಪರೋಕ್ಷ ದಾಳಿ ನಡೆಸಲು ಮತ್ತು ರಾಜಕೀಯ ಕುತಂತ್ರ ಹೂಡಲು ಯತ್ನಿಸುತ್ತಿದ್ದಾರೆ. ಆದ್ದರಿಂದ, ಪಕ್ಷದ ಗೌರವವನ್ನು ಉಳಿಸಲು ಹಾಗೂ ಕಾರ್ಯಕರ್ತರ ಮನಸ್ಸಿಗೆ ನೆಮ್ಮದಿ ನೀಡಲು ಈ ಇಡೀ ಪ್ರಹಸನದ ಸತ್ಯವನ್ನು ಸಾರ್ವಜನಿಕರ ಮುಂದೆ ಇಡುವುದು ಅನಿವಾರ್ಯವಾಗಿದೆ ಎಂದು ಅವರು ಪ್ರತಿಪಾದಿಸಿದ್ದಾರೆ.

ನಮ್ಮದು ಶಿಸ್ತಿನ ರಾಷ್ಟ್ರೀಯ ಪಕ್ಷ. ನಾವೆಲ್ಲರೂ ಶಾಸಕರಾಗಿ ಗೆದ್ದು ವಿಧಾನಸೌಧ ಪ್ರವೇಶಿಸಲು ಪಕ್ಷದ ಆಶೀರ್ವಾದ ಹಾಗೂ ಲಕ್ಷಾಂತರ ಕಾರ್ಯಕರ್ತರ ಹಗಲಿರುಳಿನ ಪರಿಶ್ರಮ ಕಾರಣವಾಗಿದೆ. ಇವತ್ತು ಮತದಾರರು ನರೇಂದ್ರ ಮೋದಿ ಅವರ ಮುಖ ನೋಡಿ ನಮಗೆ ಮತ ಹಾಕಿದ್ದಾರೆಯೇ ಹೊರತು, ನಮ್ಮ ವೈಯಕ್ತಿಕ ಯೋಗ್ಯತೆಯಿಂದಲ್ಲ. ನಮ್ಮ ಯೋಗ್ಯತೆಯನ್ನು ಒಂದು ಕಡೆ ಬದಿಗಿಟ್ಟು ಯೋಚಿಸಬೇಕು ಎಂದು ಎಚ್ಚರಿಕೆ ನೀಡಿದ್ದಾರೆ.

ಈ ನಡುವೆ, ಅಡ್ಡ ಮತದಾನದ ಆಳ–ಅಗಲವನ್ನು ಪರಿಶೀಲಿಸಲು ಬಿಜೆಪಿ ಪ್ರತ್ಯೇಕ 'ಸತ್ಯಶೋಧನಾ ಸಮಿತಿ'ಯನ್ನು ರಚಿಸಿದೆ. ಈ ಸಮಿತಿಯಲ್ಲಿ ಸಿ.ಟಿ.ರವಿ, ಮಹೇಶ್ ಟೆಂಗಿನಕಾಯಿ ಹಾಗೂ ಮಾಜಿ ಸಚಿವ ಮಹೇಶ್ ಇದ್ದು, ಇವರು ಶಾಸಕರ ನಡವಳಿಕೆಯ ಕುರಿತು ಸಮಗ್ರ ತನಿಖೆ ನಡೆಸಿ ವರದಿ ನೀಡಲಿದ್ದಾರೆ.

## ಅಡ್ಡಮತದಾನ ಮಾಡಿದವರು ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡುವೆ: ಆಶೋಕ್ ಕಿಡಿ



**ಬೆಂಗಳೂರು, ಜೂ.21:** ವಿಧಾನಪರಿಷತ್ ಚುನಾವಣೆಯಲ್ಲಿ ಅಡ್ಡಮತದಾನ ಮಾಡಿದವರು ಈ ಜನ್ಮದಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸದಂತೆ ಮಾಡುತ್ತೇನೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಗುಡುಗಿದ್ದಾರೆ.

ವಿಧಾನ ಪರಿಷತ್ ಚುನಾವಣೆಯಲ್ಲಿನ ಅಡ್ಡಮತದಾನ ಬಿಜೆಪಿಗೆ ತೀವ್ರ ಮುಜುಗರ ತಂದೊಡ್ಡಿದ್ದು ಈ ಬಗ್ಗೆ ಪ್ರತಿಪಕ್ಷ ನಾಯಕ ಆರ್. ಅಶೋಕ್ ಕೆಂಡಕಾರಿದ್ದಾರೆ. ಇನ್ನು ಅಡ್ಡಮತದಾನ ಮಾಡಿದ ಶಾಸಕರು ಯಾರು ಎಂಬುದನ್ನು ಪತ್ತೆ ಹಚ್ಚಲು ಬಿಜೆಪಿ ಈಗಾಗಲೇ ಸತ್ಯಶೋಧನ ಸಮಿತಿ ರಚನೆ ಮಾಡಿದೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಆರ್.ಅಶೋಕ್, ಅಡ್ಡಮತದಾನ ಮಾಡಿದ ವರನ್ನು ಸುಮ್ಮನೇ ಬಿಡುವುದಿಲ್ಲ ಎಂದಿದ್ದಾರೆ. ಬಿಜೆಪಿ ಹಾಗೂ ಜೆಡಿಎಸ್‌ನ 11 ಶಾಸಕರು ಅಡ್ಡಮತದಾನ ಮಾಡಿದ್ದಾರೆ. ಅವರು ಯಾರು ಎಂಬುದನ್ನು ಪತ್ತೆ ಹಚ್ಚುವುದೇ ಒಂದು ಸವಾಲಾಗಿದೆ ಎಂದರು. ಯಾರನ್ನೇ ಕೇಳಿದರೂ ಧರ್ಮಸ್ಥಳದಲ್ಲಿ ಬಂದು ನಾವು–ಆಣೆ– ಪ್ರಮಾಣ ಮಾಡುತ್ತೇವೆ ಎನ್ನುತ್ತಿದ್ದಾರೆ. ಅದೇ ನಮಗೂ ಆಶ್ಚರ್ಯವೆನಿಸಿದೆ ಎಂದರು. ಧರ್ಮಸ್ಥಳದಲ್ಲಿ ಪಕ್ಷದ ವೇದಿಕೆಯಲ್ಲಿಯೇ ಅಡ್ಡಮತದಾನ ಮಾಡಿದವರು ಯಾರೆಂಬುದನ್ನು ಪತ್ತೆ ಹಚ್ಚುತ್ತೇವೆ. ಅವರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಸರಿಯಾಗಿ ಬುದ್ಧಿ ಕಲಿಸುತ್ತೇವೆ.

ಅಡ್ಡಮತದಾನ ಮಾಡಿದವರನ್ನು ಮೊದಲು ಪತ್ತೆಹಚ್ಚಿ ಈ ಬಗ್ಗೆ ಕೇಂದ್ರದ ನಾಯಕರೊಂದಿಗೆ ಚರ್ಚಿಸುತ್ತೇವೆ. ಮುಂದೆ ಯಾರೂ ಯಾವತ್ತೂ ಇಂತಹ ತಪ್ಪು ಮಾಡಬಾರದು ಹಾಗೆ ಮಾಡುತ್ತೇವೆ ಎಂದು ಅಶೋಕ್ ಎಚ್ಚರಿಕೆ ಕೊಟ್ಟರು.

# 2028 ರಲ್ಲಿ ರಾಜ್ಯದಲ್ಲಿ ಮತ್ತೆ ಅಧಿಕಾರಕ್ಕೆ 2029ರಲ್ಲಿ ರಾಹುಲ್ ಪ್ರಧಾನಿ: ಸಿದ್ದರಾಮಯ್ಯ

**ಬೆಂಗಳೂರು, ಜೂ.21:** ನನ್ನ ಪ್ರಯತ್ನಗಳಿಗೆ ಉಪಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ ಶಿವಕುಮಾರ್ ಹೆಗಲಿಗೆ ಹೆಗಲುಕೊಟ್ಟು ದುಡಿದಿದ್ದಾರೆ. ನಾವು ಅನೇಕ ಹೋರಾಟಗಳನ್ನು ಮಾಡಿ ಪಕ್ಷ ಸಂಘಟನೆ ಮಾಡಿ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದೇವೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

2028ರಲ್ಲಿ ಮತ್ತೊಮ್ಮೆ ನಾವೇ ಅಧಿಕಾರಕ್ಕೆ ಬರುತ್ತೇವೆ. ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪಿದ್ದು, ಇದರಿಂದ ಜನರಲ್ಲಿ ಖುಷಿಯಿದೆ. ಕರ್ನಾಟಕದಲ್ಲಿ ನಡೆದ 5 ಉಪಚುನಾವಣೆಗಳಲ್ಲಿ ನಾವು ಗೆಲುವು ಸಾಧಿಸಿದ್ದೇವೆ. ಜನರ ಪ್ರೀತಿ, ವಿಶ್ವಾಸವನ್ನು ಉಳಿಸಿಕೊಂಡಿದ್ದೇವೆ ಎಂದು ಅರ್ಥ. 2023ರಲ್ಲಿ ಶಿವಕುಮಾರ್ ಅವರು ಅಧ್ಯಕ್ಷರಾಗಿ, ನಾನು ವಿರೋಧ ಪಕ್ಷದ ನಾಯಕನಾಗಿ ಚುನಾವಣೆ ಎದುರಿಸಿ ಪಕ್ಷಕ್ಕೆ 136 ಸ್ಥಾನಗಳಿಗೆ ಗೆಲುವು ತಂದುಕೊಟ್ಟಿದ್ದೇವೆ. ಇದು ಬರೀ ನಮ್ಮಿಬ್ಬರ ಗೆಲುವಲ್ಲ, ಬದಲಿಗೆ ನಿಮ್ಮೆಲ್ಲರ ಪ್ರಯತ್ನದಿಂದ ಗೆಲುವು ಸಾಧ್ಯವಾಗಿದೆ ಎಂದರು.

2029ರಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ರಾಹುಲ್ ಗಾಂಧಿ ಅವರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡುವ ಸಂಕಲ್ಪವನ್ನು ನೀವೆಲ್ಲರೂ ಮಾಡಬೇಕು. ಹರಿಪ್ರಸಾದ್ ಅವರ ನಾಯಕತ್ವದಲ್ಲಿ ಪಕ್ಷ ಸದೃಢವಾಗಲಿ, ಬಲವಾಗಿ ಬೆಳೆಯಲಿ ಎಂದು ಆಶಿಸುತ್ತಾ, ನನ್ನ ಸಹಕಾರವನ್ನು ಸಂಪೂರ್ಣವಾಗಿ ಅವರ ಜೊತೆ ಧಾರೆ ಎರೆಯುತ್ತೇನೆ ಎಂದು ಭರವಸೆ ನೀಡಿದರು.



ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ.ಹರಿಪ್ರಸಾದ್ ಅವರ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದ ಅವರು, ಬಿಜೆಪಿಯವರು ಒಂದು ಧರ್ಮ – ಒಂದು ರಾಷ್ಟ್ರ – ಒಂದು ಚುನಾವಣೆ ಎನುತ್ತಿದ್ದಾರೆ. ಸರ್ವಾಧಿಕಾರದ ಮೇಲೆ ನಂಬಿಕೆ ಇಟ್ಟುಕೊಂಡಿದ್ದಾರೆ. ಯಾಕಂದರೆ ಆರ್‌ಎಸ್‌ಎಸ್ನ ಸಂಸ್ಥಾಪಕ ಹೆಗ್ಡೆವಾರ್ ಅವರು ತಮ್ಮ ಸ್ನೇಹಿತರನ್ನು ವಿದೇಶಕ್ಕೆ ಕಳುಹಿಸಿ ಇಟಲಿಯ ಮುಸಲೋನಿ, ಜರ್ಮನಿಯ ಹಿಟ್ಲರ್ ಅವರ ಆಡಳಿತನ್ನು ಈ ದೇಶದಲ್ಲಿ ಹುಟ್ಟುಹಾಕಲು ಪ್ರಯತ್ನ ಮಾಡಿದ್ದರು. ಬಿಜೆಪಿಯವರಿಗಾಗಲಿ, ಆರ್‌ಎಸ್‌ಎಸ್ನವರಿಗಾಗಲಿ ನಮ್ಮ ಸಂವಿಧಾನದ ಬಗ್ಗೆ ನಂಬಿಕೆಯಿಲ್ಲ. ಈ ದೇಶದಲ್ಲಿ ಸಂವಿಧಾನದ ವಿರೋಧಿಗಳು ಯಾರಾದರೂ ಇದ್ದರೆ ಅದು ಆರ್‌ಎಸ್‌ಎಸ್ ಮತ್ತು ಬಿಜೆಪಿಯವರು ಎಂಬುದನ್ನು ನಾವು ಮರೆಯಲು ಸಾಧ್ಯವಿಲ್ಲ. ಅದಕ್ಕಾಗಿ ಹಿಂದೂರಾಷ್ಟ್ರ ಮಾಡಲು ಮುಂದಾಗಿದ್ದಾರೆ. ಅದನ್ನು ಮಾಡಲು ನಮ್ಮ ಕಾರ್ಯಕರ್ತರು ಬಿಡಬಾರದು. ನಾವು ಯಾವಾಗಲೂ ಬಹುತ್ವದ ಪರವಾಗಿ ಇರುವವರು. ಬಹುತ್ವವನ್ನು ರೂಪಿಸುವಂತಹ ಕೆಲಸವನ್ನು ಹಾಗೂ ಅದನ್ನು ಮುಂದುವರಿಸಿಕೊಂಡು ಹೋಗುವ ಕೆಲಸ ನಮ್ಮದಾಗಿದೆ ಎಂದರು.

ನೂತನ ಅಧ್ಯಕ್ಷ ಹರಿಪ್ರಸಾದ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಇಲ್ಲಿಯವರೆಗೆ ಅಧ್ಯಕ್ಷರಾಗಿ ಕೆಲಸ ಮಾಡಿದ ಡಿ.ಕೆ. ಶಿವಕುಮಾರ್ ಅವರಿಗೆ ಧನ್ಯವಾದವನ್ನು ತಿಳಿಸುತ್ತೇನೆ. ನಾವು ಪ್ರಣಾಳಿಕೆಯಲ್ಲಿ ಕೊಟ್ಟಿರುವ ಭರವಸೆಗಳನ್ನು ಈಡೇರಿಸುವಂತ ಪ್ರಾಮಾಣಿಕ ಕೆಲಸವನ್ನು ಮಾಡಿದ್ದೇವೆ. ಕಾಂಗ್ರೆಸ್ ಪಕ್ಷ ಮತ್ತು ಸ್ಥಳೀಯ ನಾಯಕರಾದ ನಾವೆಲ್ಲಾ ತೀರ್ಮಾನ ಮಾಡಿದ್ದಂತಹ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿ ಮಾಡಿದ್ದೇವೆ. ಕಳೆದ ಮೂರು ವರ್ಷಗಳಿಂದ 1 ಲಕ್ಷದ 40 ಸಾವಿರಕ್ಕೂ ಹೆಚ್ಚು ಕೋಟಿ ರೂಪಾಯಿಗಳನ್ನು ಗ್ಯಾರಂಟಿ ಯೋಜನೆಗಳಿಗೆ ಖರ್ಚು ಮಾಡಿದ್ದೇವೆ ಎಂದರು.

ವಿರೋಧ ಪಕ್ಷದವರು ನಮ್ಮಿಂದ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಲು ಸಾಧ್ಯವಿಲ್ಲ ಎನ್ನುತ್ತಿದ್ದರು. ಪ್ರಧಾನಿ ಆದಿಯಾಗಿ ಕರ್ನಾಟಕದ ವಿರೋಧ ಪಕ್ಷದವರು ಇದನ್ನು ಜಾರಿ ಮಾಡಿದರೆ ಖಜಾನೆ ಖಾಲಿ ಆಗುತ್ತದೆ, ಅಭಿವೃದ್ಧಿ ಕೆಲಸಕ್ಕೆ ಹಣವಿರುವುದಿಲ್ಲ ಎಂದು ಟೀಕಿಸುತ್ತಿದ್ದರು. ಆದರೆ ನಾವು ಯಾವುದೇ ಟೀಕಗಳಿಗೆ ಸೊಪ್ಪು ಹಾಕದೇ ಪ್ರಣಾಳಿಕೆಯಲ್ಲಿ ಘೋಷಣೆ ಮಾಡಿ ಎಲ್ಲಾ ಗ್ಯಾರಂಟಿಗಳನ್ನು, ಭರವಸೆಗಳನ್ನು ಈಡೇರಿಸುವಂತಹ ಕೆಲಸವನ್ನು ಮಾಡಿದ್ದೇವೆ. ಹರಿಪ್ರಸಾದ್ ಅವರ ನಿಷ್ಠೆ, ಸಿದ್ಧಾಂತಕ್ಕೆ ಬದ್ಧತೆ, ಕಾಂಗ್ರೆಸ್ ಕಾರ್ಯಕರ್ತನಾಗಿ ಅನೇಕ ಸ್ಥಾನಗಳಲ್ಲಿ ಕೆಲಸ ಮಾಡಿದ ಪರಿಣಾಮವಾಗಿ ಇವತ್ತು ಇಷ್ಟೊಂದು ಎತ್ತರಕ್ಕೆ ಬೆಳೆಯಲು ಸಾಧ್ಯವಾಗಿದೆ ಎಂದರು.

Chief reporter : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com

Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಜಾಗತಿಕ ಶಕ್ತಿಯಾಗಿ ಭಾರತ ರೂಪುಗೊಳ್ಳಲು ಸಮುದ್ರ ಬಲ ಮುಖ್ಯ: ಪ್ರಧಾನಿ

**ನವದೆಹಲಿ,ಜೂ.21:** ಕೋಲ್ಕತ್ತಾದಲ್ಲಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾನುವಾರ ಮೂರು ನೌಕಾ ವೇದಿಕೆಗಳಾದ ಐಎನ್‌ಎಸ್ ಅಗ್ರೇ, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋದಕ್‌ಗಳನ್ನು ಭಾರತೀಯ ನೌಕಾಪಡೆಗೆ ನಿಯೋಜಿಸಿದರು, ಮುಂದಿನ ದಶಕಗಳಲ್ಲಿ ಭಾರತದ ಆರ್ಥಿಕ ಬೆಳವಣಿಗೆ, ಕಾರ್ಯತಂತ್ರದ ಪ್ರಭಾವ ಮತ್ತು ರಾಷ್ಟ್ರೀಯ ಭದ್ರತೆಗೆ ಸಮುದ್ರ ಸಾಮರ್ಥ್ಯವು ಕೇಂದ್ರಬಿಂದುವಾಗಿದೆ ಎಂದು ಪ್ರತಿಪಾದಿಸಿದರು. ತ್ರಿ–ನಿಯೋಜಿತ ಸಮಾರಂಭವನ್ನುದ್ದೇಶಿಸಿ ಮಾತನಾಡಿದ ಮೋದಿ, ಮೂರು ಸ್ಥಳೀಯವಾಗಿ ನಿರ್ಮಿಸಲಾದ ಹಡಗುಗಳ ಸೇರ್ಪಡೆಯು ರಕ್ಷಣಾ ಉತ್ಪಾದನೆಯಲ್ಲಿ ದೇಶದ ಬೆಳೆಯುತ್ತಿರುವ ಸ್ವಾವಲಂಬನೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಅಭಿವೃದ್ಧಿ ಹೊಂದಿದ ರಾಷ್ಟ್ರವಾಗುವ ಭಾರತದ ಪ್ರಯಾಣದಲ್ಲಿ ಮತ್ತೊಂದು ಮೈಲಿಗಲ್ಲನ್ನು ಗುರುತಿಸಿದೆ ಎಂದು ಹೇಳಿದರು. "ಅಭಿವೃದ್ಧಿ ಸಮುದ್ರಗಳಿಗೆ ಸಂಬಂಧಿಸಿದೆ, ಭದ್ರತೆ ಸಮುದ್ರಗಳಿಗೆ ಸಂಬಂಧಿಸಿದೆ, ಸಮೃದ್ಧಿ ಸಮುದ್ರಗಳಿಗೆ ಸಂಬಂಧಿಸಿದೆ" ಎಂದು ಪ್ರಧಾನಿ ಹೇಳಿದರು, ಜಾಗತಿಕ ವ್ಯಾಪಾರ, ದತ್ತಾಂಶ ಸಂಪರ್ಕ, ನಿರ್ಣಾಯಕ ಖನಿಜಗಳು ಮತ್ತು ಭವಿಷ್ಯದ ಇಂಧನ ಸಂಪನ್ಮೂಲಗಳು ಕಡಲ ಕ್ಷೇತ್ರಕ್ಕೆ ಹೆಚ್ಚು ಹೆಚ್ಚು ಸಂಬಂಧ ಹೊಂದಿವೆ ಎಂದು ಹೇಳಿದರು. "ಒಂದು ರಾಷ್ಟ್ರದ ಸಮುದ್ರ ಬಲವು ಬಲವಾಗಿದ್ದಷ್ಟೂ ಅದರ ಆರ್ಥಿಕ ಮತ್ತು ಕಾರ್ಯತಂತ್ರದ ಪ್ರಭಾವವು ಬಲವಾಗಿರುತ್ತದೆ." ಅಂತರರಾಷ್ಟ್ರೀಯ ಯೋಗ ದಿನ ಮತ್ತು ವಿಶ್ವ ಹೈಡ್ರೋಗ್ರಫಿ ದಿನದ ಜೊತೆಗೆ ಈ ಕಾರ್ಯಾರಂಭ ನಡೆದಿದ್ದು, ಭಾರತದ ಅತ್ಯಂತ ಮುಂದುವರಿದ ಹೈಡ್ರೋಗ್ರಾಫಿಕ್ ಸರ್ವೇ ನೌಕೆ ಎಂದು ವಿವರಿಸಲಾದ ಐಎನ್‌ಎಸ್ ಸಂಶೋಧಕ್ ನೌಕೆಯ ಸೇರ್ಪಡೆ ವಿಶೇಷವಾಗಿ ಮಹತ್ವದ್ದಾಗಿದೆ ಎಂದು ಪ್ರಧಾನಿ ಹೇಳಿದರು. ಭಾರತೀಯ ನೌಕಾಪಡೆ, ವಿಜ್ಞಾನಿಗಳು, ಎಂಜಿನಿಯರ್‌ಗಳು, ಕಾರ್ಮಿಕರು ಮತ್ತು ಯೋಜನೆಗಳಲ್ಲಿ ಭಾಗಿಯಾಗಿರುವ ಎಲ್ಲರನ್ನು ಅಭಿನಂದಿಸಿದ ಮೋದಿ, ಮೂರು ಹಡಗುಗಳು ಆತ್ಮನಿರ್ಭರ ಭಾರತ, ಸುರಕ್ಷಿತ ಭಾರತ ಮತ್ತು ಅಭಿವೃದ್ಧಿ ಹೊಂದಿದ ಭಾರತಕ್ಕೆ ದೇಶದ ಬದ್ಧತೆಯನ್ನು ಪ್ರತಿನಿಧಿಸುತ್ತವೆ ಎಂದು ಹೇಳಿದರು. ಇತ್ತೀಚಿನ ವರ್ಷಗಳಲ್ಲಿ ಸ್ವದೇಶಿ ವಿಮಾನವಾಹಕ ನೌಕೆ ಐಎನ್‌ಎಸ್ ವಿಕ್ರಾಂತ್ ಕಾರ್ಯಾರಂಭ ಮಾಡುವುದನ್ನು ಉಲ್ಲೇಖಿಸಿದ ಮೋದಿ, ಅಂದಿನಿಂದ ಇಂದಿನ ಅವಧಿಯು ಹೊಸ ನೌಕಾ ಸ್ವತ್ತುಗಳ ಸೇರ್ಪಡೆಗೆ ಮಾತ್ರವಲ್ಲದೆ ಭಾರತದ ಸ್ಥಳೀಯ ರಕ್ಷಣಾ ಉತ್ಪಾದನಾ ಸಾಮರ್ಥ್ಯಗಳ ತ್ವರಿತ ವಿಸ್ತರಣೆಗೆ ಸಾಕ್ಷಿಯಾಗಿದೆ ಎಂದು ಹೇಳಿದರು. "ಐಎನ್‌ಎಸ್ ವಿಕ್ರಾಂತ್‌ನಿಂದ ಇಂದಿನವರೆಗಿನ ಪ್ರಯಾಣವು ಕೇವಲ ಹೊಸ ಯುದ್ಧನೌಕೆಗಳ ಬಗ್ಗೆ ಅಲ್ಲ. ಇದು ಭಾರತದ ಬೆಳೆಯುತ್ತಿರುವ ಸ್ವಾವಲಂಬನೆಯ ಪ್ರಯಾಣವೂ ಆಗಿದೆ" ಎಂದು ಅವರು ಹೇಳಿದರು. ದೇಶೀಯ ಕೈಗಾರಿಕಾ ಪರಿಣತಿ, ಎಂಜಿನಿಯರಿಂಗ್ ಕೌಶಲ್ಯ ಮತ್ತು ಶ್ರಮವನ್ನು ಬಳಸಿಕೊಂಡು ಈ ಮೂರು ಹಡಗುಗಳನ್ನು ಭಾರತದಲ್ಲಿ ವಿನ್ಯಾಸಗೊಳಿಸಲಾಗಿದೆ ಮತ್ತು ನಿರ್ಮಿಸಲಾಗಿದೆ ಎಂದು ಪ್ರಧಾನಿ ಒತ್ತಿ ಹೇಳಿದರು. "ಭಾರತವು ರಕ್ಷಣಾ ವಲಯದಲ್ಲಿ ಕೇವಲ ಖರೀದಿದಾರನಾಗಿ ಉಳಿಯಲು ಬಯಸುವುದಿಲ್ಲ. ನಮ್ಮ ಮಿಲಿಟರಿ ಬಲವನ್ನು ಜಗತ್ತಿಗೆ ಮಾರುಕಟ್ಟೆಯಾಗಿ ಇಳಿಸಲು ಸಾಧ್ಯವಿಲ್ಲ. ನಮ್ಮ ಶಕ್ತಿಯ ಗುರುತು ಮಾರುಕಟ್ಟೆಯಾಗಿರುವುದರಲ್ಲಿ ಅಲ್ಲ, ಬದಲಾಗಿ ನಮ್ಮ ಸ್ವಾವಲಂಬನೆಯಲ್ಲಿದೆ" ಎಂದು ಅವರು ಹೇಳಿದರು. ಸ್ಥಳೀಯ ರಕ್ಷಣಾ ಉತ್ಪಾದನೆಯನ್ನು ಬಲಪಡಿಸುವ ಸರ್ಕಾರದ ಪ್ರಯತ್ನಗಳನ್ನು ಎತ್ತಿ ತೋರಿಸಿದ ಮೋದಿ, ಇತ್ತೀಚಿನ ವರ್ಷಗಳಲ್ಲಿ 40 ಕ್ಕೂ ಹೆಚ್ಚು ಭಾರತದಲ್ಲಿ ತಯಾರಿಸಿದ ಯುದ್ಧನೌಕೆಗಳು ಮತ್ತು ಜಲಾಂತರ್ಗಾಮಿ ನೌಕೆಗಳನ್ನು ನೌಕಾಪಡೆಗೆ ಸೇರಿಸಲಾಗಿದೆ, ಆದರೆ 45 ಪ್ರಮುಖ ನೌಕಾ



ವೇದಿಕೆಗಳು ಪ್ರಸ್ತುತ ನಿರ್ಮಾಣ ಹಂತದಲ್ಲಿವೆ ಎಂದು ಹೇಳಿದರು. ಸಾಗರ ವಲಯವನ್ನು ಉದ್ಯೋಗ ಮತ್ತು ಕೈಗಾರಿಕಾ ಬೆಳವಣಿಗೆಯ ಪ್ರಮುಖ ಚಾಲಕ ಎಂದು ಕರೆದ ಪ್ರಧಾನಿ, ಉಕ್ಕು, ಎಲೆಕ್ಟ್ರಾನಿಕ್ಸ್, ಯಂತ್ರೋಪಕರಣಗಳು ಮತ್ತು ಘಟಕ ತಯಾರಿಕೆ ಸೇರಿದಂತೆ ಬಹು ಕೈಗಾರಿಕೆಗಳಲ್ಲಿ ಹಡಗು ನಿರ್ಮಾಣವು ಬೇಡಿಕೆಯನ್ನು ಉತ್ಪಾದಿಸುತ್ತದೆ ಎಂದು ಹೇಳಿದರು. ಭಾನುವಾರ ಕಾರ್ಯಾರಂಭ ಮಾಡಿದ ಮೂರು ನೌಕಾ ಹಡಗುಗಳ ನಿರ್ಮಾಣಕ್ಕೆ 200ಕ್ಕೂ ಹೆಚ್ಚು ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳು ಕೊಡುಗೆ ನೀಡಿವೆ ಎಂದು ಅವರು ಗಮನಿಸಿದರು.

"ಮುಂಬರುವ ವರ್ಷಗಳಲ್ಲಿ, ಭಾರತದ ಕಡಲ ವಲಯವು ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಸಾಮರ್ಥ್ಯವನ್ನು ಹೊಂದಿದೆ. ನಾವು ಇದನ್ನು ಅಭಿವೃದ್ಧಿ ಹೊಂದಿದ ಭಾರತದ ಉದ್ಯೋಗ ಎಂಜಿನ್ ಎಂದು ನೋಡುತ್ತೇವೆ" ಎಂದು ಅವರು ಹೇಳಿದರು. ಹಡಗು ನಿರ್ಮಾಣ, ಹಡಗು ದುರಸ್ತಿ, ಹಡಗು ಮರುಬಳಕೆ ಮತ್ತು ನಿರ್ವಹಣೆ, ದುರಸ್ತಿ ಮತ್ತು ಕೂಲಂಕುಷ ಪರೀಕ್ಷೆ ಸೇವೆಗಳಲ್ಲಿನ ಸುಧಾರಣೆಗಳ ಮೂಲಕ ಕಡಲ ಆರ್ಥಿಕತೆಯನ್ನು ಬಲಪಡಿಸಲು ಸರ್ಕಾರ ಸಮಗ್ರ ಕಾರ್ಯತಂತ್ರವನ್ನು ಪ್ರಾರಂಭಿಸಿದೆ ಎಂದು ಮೋದಿ ಹೇಳಿದರು. ಇತ್ತೀಚೆಗೆ ಘೋಷಿಸಲಾದ 70,000 ಕೋಟಿ ರೂ.ಗಳ ಪ್ರೋತ್ಸಾಹಕ ಪ್ಯಾಕೇಜ್ ಅನ್ನು ಭಾರತದ ಕಡಲ ಭವಿಷ್ಯ ಮತ್ತು ಕೈಗಾರಿಕಾ ವಿಸ್ತರಣೆಯಲ್ಲಿ ಹೂಡಿಕೆ ಎಂದು ಅವರು ಬಣ್ಣಿಸಿದರು.

ಸಾಗರಮಾಲಾ ಕಾರ್ಯಕ್ರಮದಂತಹ ಉಪಕ್ರಮಗಳ ಮೂಲಕ ಬಂದರುಗಳನ್ನು ಆಧುನೀಕರಿಸುವುದು, ಒಳನಾಡಿನ ಜಲಮಾರ್ಗಗಳನ್ನು ವಿಸ್ತರಿಸುವುದು, ಲಾಜಿಸ್ಟಿಕ್ಸ್ ಮೂಲಸೌಕರ್ಯವನ್ನು ಸುಧಾರಿಸುವುದು ಮತ್ತು ಸಂಪರ್ಕವನ್ನು ಹೆಚ್ಚಿಸುವ ಪ್ರಯತ್ನಗಳನ್ನು ಪ್ರಧಾನಿ ಎತ್ತಿ ತೋರಿಸಿದರು. ಈ ಕ್ರಮಗಳು ವ್ಯಾಪಾರ ವೆಚ್ಚವನ್ನು ಕಡಿಮೆ ಮಾಡಲು, ಕೈಗಾರಿಕಾ ಬೆಳವಣಿಗೆಯನ್ನು ವೇಗಗೊಳಿಸಲು ಮತ್ತು ಕರಾವಳಿ ಪ್ರದೇಶಗಳಲ್ಲಿ ಹೊಸ ಅವಕಾಶಗಳನ್ನು ಸೃಷ್ಟಿಸಲು ಸಹಾಯ ಮಾಡುತ್ತವೆ ಎಂದು ಅವರು ಹೇಳಿದರು.

ರಕ್ಷಣಾ ತಯಾರಿಕೆ ಬಗ್ಗೆ ಪ್ರಸ್ತಾಪಿಸಿದ ಮೋದಿ, ಭಾರತವು ವಿಶ್ವದ ಅತಿದೊಡ್ಡ ರಕ್ಷಣಾ ಆಮದುದಾರರಲ್ಲಿ ಒಂದರಿಂದ ಉದಯೋನ್ಮುಖ ರಕ್ಷಣಾ ತಯಾರಿಕ ಮತ್ತು ರಫ್ತುದಾರನಾಗಿ ರೂಪಾಂತರಗೊಂಡಿದೆ ಎಂದು ಹೇಳಿದರು. 2014 ಕ್ಕಿಂತ ಮೊದಲು ವಾರ್ಷಿಕ ರಕ್ಷಣಾ ಉತ್ಪಾದನೆಯು ಸುಮಾರು 40,000 ಕೋಟಿ ರೂ.ಗಳಿಂದ ಸುಮಾರು 1.8 ಲಕ್ಷ ಕೋಟಿ ರೂ.ಗಳಿಗೆ ಏರಿದೆ ಎಂದು ಅವರು ಹೇಳಿದರು. ಆದರೆ ರಕ್ಷಣಾ ರಫ್ತು 700 ಕೋಟಿ ರೂ.ಗಳಿಂದ ಸುಮಾರು 40,000 ಕೋಟಿ ರೂ.ಗಳಿಗೆ ಬೆಳೆದಿದೆ. ಭಾರತೀಯ ನಿರ್ಮಿತ ರಕ್ಷಣಾ ಉಪಕರಣಗಳು ಈಗ 80 ಕ್ಕೂ ಹೆಚ್ಚು ದೇಶಗಳನ್ನು ತಲುಪಿವೆ.

"ಇದು ಕೇವಲ ಆರಂಭ" ಎಂದು ಅವರು ಹೇಳಿದರು. "ಕಳೆದ 12 ವರ್ಷಗಳಲ್ಲಿ ಸಾಧಿಸಲಾದ ಪ್ರಗತಿಯು ನೀತಿಗಳು ಸ್ಪಷ್ಟವಾದಾಗ, ನಿರ್ದೇಶನ ಸರಿಯಾಗಿದ್ದಾಗ ಮತ್ತು ನಾವು ಒಟ್ಟಾಗಿ ಕೆಲಸ ಮಾಡಿದಾಗ, ಅಂತಹ ಬೃಹತ್ ಪರಿವರ್ತನೆ ಸಂಭವಿಸಬಹುದು ಎಂದು ತೋರಿಸುತ್ತದೆ."

"ಭಾರತ ಸಾಗುತ್ತಿರುವ ಹೊಸ ಕಡಲ ಯುಗದಲ್ಲಿ, ಪಶ್ಚಿಮ ಬಂಗಾಳದ ಪಾತ್ರ ಬಹಳ ಮುಖ್ಯವಾಗಿರುತ್ತದೆ" ಎಂದು ಅವರು ಹೇಳಿದರು. ಭಾರತವು ಯಾವಾಗಲೂ ಸಮುದ್ರಗಳನ್ನು ಸಹಕಾರ ಮತ್ತು ಸಂಪರ್ಕದ ಮಾಧ್ಯಮವಾಗಿ ನೋಡುತ್ತಿದ್ದರೂ, ಶಾಂತಿಯನ್ನು ಕಾಪಾಡಲು ಮತ್ತು ಸಮೃದ್ಧಿಯನ್ನು ರಕ್ಷಿಸಲು ಶಕ್ತಿಯ ಅಗತ್ಯವನ್ನು ಅದು ಗುರುತಿಸುತ್ತದೆ ಎಂದು ಪ್ರತಿಪಾದಿಸುವ ಮೂಲಕ ಮೋದಿ ಮುಕ್ತಾಯಗೊಳಿಸಿದರು. "ಸಮೃದ್ಧಿಯನ್ನು ರಕ್ಷಿಸಲು ಭದ್ರತೆ ಅತ್ಯಗತ್ಯ. ಮತ್ತು ಭವಿಷ್ಯವನ್ನು ನಿರ್ಮಿಸಲು ಸ್ವಾವಲಂಬನೆ ಅತ್ಯಗತ್ಯ" ಎಂದು ಅವರು ಹೇಳಿದರು, ಐಎನ್‌ಎಸ್ ಅಗ್ರೇ, ಐಎನ್‌ಎಸ್ ದುನಗಿರಿ ಮತ್ತು ಐಎನ್‌ಎಸ್ ಸಂಶೋಧಕ್ ತನ್ನದೇ ಆದ ಸಾಮರ್ಥ್ಯಗಳನ್ನು ನಂಬುವ ಮತ್ತು ಜಾಗತಿಕ ವೇದಿಕೆಯಲ್ಲಿ ನವೀಕೃತ ಶಕ್ತಿ ಮತ್ತು ದೃಢಸಂಕಲ್ಪದೊಂದಿಗೆ ಮುನ್ನಡೆಯುತ್ತಿರುವ ಆತ್ಮವಿಶ್ವಾಸದ ಭಾರತವನ್ನು ಸಂಕೇತಿಸುತ್ತವೆ ಎಂದು ಹೇಳಿದರು. ಆತ್ಮನಿರ್ಭರ ಭಾರತ ಉಪಕ್ರಮದ ಅಡಿಯಲ್ಲಿ ಕಡಲ ಭದ್ರತೆಯನ್ನು ಹೆಚ್ಚಿಸಲು ಮತ್ತು ಸ್ಥಳೀಯ ರಕ್ಷಣಾ ತಯಾರಿಕ ಬಲಪಡಿಸಲು ಭಾರತದ ವಿಶಾಲವಾದ ಒತ್ತಾಯದ ಭಾಗವಾಗಿ ಈ ಕಾರ್ಯಾರಂಭ ಸಮಾರಂಭವು ರೂಪುಗೊಳ್ಳುತ್ತದೆ. ಈ ಮೂರು ಹಡಗುಗಳು ಭಾರತದ ದೇಶೀಯ ಹಡಗು ನಿರ್ಮಾಣ ಪರಿಸರ ವ್ಯವಸ್ಥೆಯ ಬೆಳೆಯುತ್ತಿರುವ ಪ್ರಬುದ್ಧತೆಯನ್ನು ಪ್ರದರ್ಶಿಸುವಾಗ ನೌಕಾಪಡೆಯ ಕಾರ್ಯಾಚರಣೆಯ ಸಾಮರ್ಥ್ಯಗಳನ್ನು ಹೆಚ್ಚಿಸುವ ನಿರೀಕ್ಷೆಯಿದೆ.

### ಮೂರು ನೌಕೆಗಳ ನಿಯೋಜನೆ







# ಯೋಗವು ಆರೋಗ್ಯಕರ, ಸಮತೋಲಿತ ಜೀವನಕ್ಕೆ ಅತ್ಯಂತ ವಿಶ್ವಾಸಾರ್ಹ ಸಾಧನ: ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್

**ಬೆಂಗಳೂರು, ಜೂನ್ 21:** ಭಾರತದ ಸಾವಿರಾರು ವರ್ಷಗಳಷ್ಟು ಹಳೆಯದಾದ ಯೋಗ ಪರಂಪರೆಗೆ ಜಾಗತಿಕ ಮನ್ನಣೆ ತಂದುಕೊಟ್ಟಿರುವ ಅಂತರರಾಷ್ಟ್ರೀಯ ಯೋಗ ದಿನವು ಇಂದು ವಿಶ್ವದ ಅತಿದೊಡ್ಡ ಆರೋಗ್ಯ ಮತ್ತು ಕ್ಷೇಮ ಅಭಿಯಾನಗಳಲ್ಲಿ ಒಂದಾಗಿ ರೂಪುಗೊಂಡಿದೆ ಎಂದು ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು ಹೇಳಿದರು.

ಆಯುಷ್ ಇಲಾಖೆಯ ವತಿಯಿಂದ ಬೆಂಗಳೂರಿನ ವಿಧಾನಸೌಧದ ಮುಂಭಾಗದಲ್ಲಿ ಆಯೋಜಿಸಲಾದ 12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆ 2026 ಕಾರ್ಯಕ್ರಮದಲ್ಲಿ ಭಾಗವಹಿಸಿ ಯೋಗಾಭ್ಯಾಸ ಮಾಡಿದ ಅವರು, ಬಳಿಕ ಮಾತನಾಡಿದರು.

ಭಾರತದ ಪ್ರಾಚೀನ ಸಂಪ್ರದಾಯದ ಅಮೂಲ್ಯ ಕೊಡುಗೆಯಾದ ಯೋಗವು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಉತ್ತೇಜಿಸುವ ಅತ್ಯಂತ ವಿಶ್ವಾಸಾರ್ಹ ಸಾಧನವಾಗಿದೆ. ಯೋಗವು ಮನಸ್ಸು ಮತ್ತು ದೇಹದ ಏಕತೆ, ಆಲೋಚನೆ ಮತ್ತು ಕ್ರಿಯೆಯ ಸಮನ್ವಯ, ಸಂಯಮ ಮತ್ತು ತೃಪ್ತಿ, ಮನುಷ್ಯ ಮತ್ತು ಪ್ರಕೃತಿಯ ನಡುವಿನ ಸಾಮರಸ್ಯ ಹಾಗೂ ಆರೋಗ್ಯ ಮತ್ತು ಯೋಗಕ್ಷೇಮದ ಸಮಗ್ರ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ, ಎಂದು ರಾಜ್ಯಪಾಲರು ತಿಳಿಸಿದರು.

ಇಂದಿನ ಸ್ಪರ್ಧಾತ್ಮಕ ಮತ್ತು ಒತ್ತಡದ ಜೀವನಶೈಲಿಯು ಅನೇಕ ದೈಹಿಕ ಮತ್ತು ಮಾನಸಿಕ ಸವಾಲುಗಳನ್ನು ಸೃಷ್ಟಿಸಿದ್ದು, ಅಂತಹ ಸಂದರ್ಭದಲ್ಲಿ ಯೋಗವು ಆರೋಗ್ಯಕರ ದೇಹ, ಶಾಂತ ಮನಸ್ಸು ಮತ್ತು ಸಕಾರಾತ್ಮಕ ದೃಷ್ಟಿಕೋನವನ್ನು ಒದಗಿಸುತ್ತದೆ ಎಂದು ಅವರು ಹೇಳಿದರು.

ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಉಪಕ್ರಮದ ಮೇರೆಗೆ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯು 2014ರಲ್ಲಿ ಜೂ.21 ಅನ್ನು ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿರುವುದು ದೇಶದ ಪ್ರತಿಯೊಬ್ಬ ನಾಗರಿಕನಿಗೂ ಹೆಮ್ಮೆಯ ವಿಷಯವಾಗಿದೆ.




ಇಂದು 190ಕ್ಕೂ ಹೆಚ್ಚು ದೇಶಗಳಲ್ಲಿ ಲಕ್ಷಾಂತರ ಜನರು ಯೋಗವನ್ನು ಅಭ್ಯಾಸ ಮಾಡುತ್ತಿದ್ದು, ಇದು ಭಾರತದ ಜ್ಞಾನ, ಸಂಸ್ಕೃತಿ ಮತ್ತು ವಸುಧೈವ ಕುಟುಂಬಕಂ ಎಂಬ ಮನೋಭಾವಕ್ಕೆ ದೊರೆತ ಜಾಗತಿಕ ಮಾನ್ಯತೆಯಾಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಅಭಿವೃದ್ಧಿ ಹೊಂದಿದ ಭಾರತದ ನಿರ್ಮಾಣಕ್ಕಾಗಿ ಆರೋಗ್ಯವಂತ, ಶಕ್ತಿಯುತ ಹಾಗೂ ಮಾನಸಿಕವಾಗಿ ಸದೃಢ ಯುವಜನತೆ ಅಗತ್ಯವಾಗಿದ್ದು, ಈ ದಿಕ್ಕಿನಲ್ಲಿ ಯೋಗವು ಪರಿಣಾಮಕಾರಿ ಸಾಧನವಾಗಿದೆ. ಯುವಕರು ಪ್ರತಿದಿನ ಸ್ವಲ್ಪ ಸಮಯವನ್ನು ಯೋಗಕ್ಕೆ ಮೀಸಲಿಟ್ಟರೆ ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳುವುದರ ಜೊತೆಗೆ ತಮ್ಮ ವ್ಯಕ್ತಿತ್ವವನ್ನು ಮತ್ತಷ್ಟು ಉನ್ನತ ಮಟ್ಟಕ್ಕೆ ಕೊಂಡೊಯ್ಯಬಹುದು ಎಂದು ರಾಜ್ಯಪಾಲರು ಕರೆ ನೀಡಿದರು.

ಈ ವರ್ಷದ ಅಂತರರಾಷ್ಟ್ರೀಯ ಯೋಗ ದಿನದ ಧ್ಯೇಯವಾಕ್ಯವಾದ ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ ವಯೋವೃದ್ಧರನ್ನು ದೈಹಿಕವಾಗಿ ಸಕ್ರಿಯರಾಗಿ, ಮಾನಸಿಕವಾಗಿ ಆರೋಗ್ಯವಂತರಾಗಿ ಮತ್ತು ಸ್ವಾವಲಂಬಿಗಳಾಗಿ ರೂಪಿಸುವಲ್ಲಿ ಯೋಗದ ಮಹತ್ವವನ್ನು ಪ್ರತಿಪಾದಿಸುತ್ತದೆ ಎಂದು ಅವರು ತಿಳಿಸಿದರು. ನಾನು ಸ್ವತಃ ಯೋಗ ಮತ್ತು ಪ್ರಾಣಾಯಾಮವನ್ನು ಅಳವಡಿಸಿಕೊಂಡಿದ್ದೇನೆ ಮತ್ತು ಅದರ ಪರಿಣಾಮವಾಗಿ ಆರೋಗ್ಯವಾಗಿದ್ದೇನೆ ಎಂದು ರಾಜ್ಯಪಾಲರು ಹೇಳಿದರು. ಯೋಗ, ಪ್ರಾಣಾಯಾಮ ಮತ್ತು ಧ್ಯಾನವನ್ನು ನಮ್ಮ ದೈನಂದಿನ ಜೀವನದ ಅವಿಭಾಜ್ಯ ಅಂಗವನ್ನಾಗಿ ಮಾಡಿಕೊಳ್ಳಬೇಕಾದ ಅಗತ್ಯವಿದ್ದು, ಪ್ರತಿದಿನ ಕೆಲವೇ ನಿಮಿಷಗಳ ಯೋಗಾಭ್ಯಾಸವು ಅನೇಕ ರೋಗಗಳಿಂದ ರಕ್ಷಿಸಿ ಜೀವನದಲ್ಲಿ ಹೊಸ ಚೈತನ್ಯವನ್ನು ತುಂಬುತ್ತದೆ ಎಂದು ಅವರು ಹೇಳಿದರು. ಯೋಗದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಮತ್ತು ಅದರ ಪ್ರಚಾರಕ್ಕೆ ಕರ್ನಾಟಕ ಸರ್ಕಾರ ಕೈಗೊಂಡಿರುವ ವಿವಿಧ ನವೀನ ಕಾರ್ಯಕ್ರಮಗಳನ್ನು ಶ್ಲಾಘಿಸಿದ ರಾಜ್ಯಪಾಲರು, ಈ ನಿಟ್ಟಿನಲ್ಲಿ ಮುಖ್ಯಮಂತ್ರಿಗಳು, ಸಚಿವರು, ಅಧಿಕಾರಿಗಳು, ಯೋಗ ಸಂಸ್ಥೆಗಳು, ಸ್ವಯಂಸೇವಾ ಸಂಘಟನೆಗಳು ಹಾಗೂ ಯೋಗ ಸಾಧಕರನ್ನು ಅಭಿನಂದಿಸಿದರು.

ಸರ್ವೇ ಭವಂತು ಸುಖಿನಃ, ಸರ್ವೇ ಸಂತು ನಿರಾಮಯಾಃ ಎಂಬ ಸಂದೇಶದೊಂದಿಗೆ ರಾಜ್ಯಪಾಲರು ರಾಜ್ಯದ ಜನತೆಗೆ ಅಂತರರಾಷ್ಟ್ರೀಯ ಯೋಗ ದಿನದ ಶುಭಾಶಯಗಳನ್ನು ಕೋರಿದರು.

ಈ ಸಂದರ್ಭದಲ್ಲಿ ಸಚಿವರಾದ ಯು.ಟಿ.ಖಾದರ್, ನಟಿ ಸುಧಾರಾಣಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

# ಮೇಕೆದಾಟು ಎರಡೂ ರಾಜ್ಯಗಳಿಗೆ ಅನುಕೂಲಕರ ತಕರಾರು ಮಾಡುವುದು ಸರಿಯಲ್ಲ: ಎಚ್.ಡಿ.ಕೆ

**ಮಂಡ್ಯ,ಜೂ.21:** ಕರ್ನಾಟಕದಲ್ಲಿ ಬರ ಪರಿಸ್ಥಿತಿ ಸೃಷ್ಟಿಯಾಗಿರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಹೀಗಿದ್ದರೂ ನೆರೆಯ ತಮಿಳುನಾಡು ಕಾವೇರಿ ವಿಚಾರದಲ್ಲಿ ಖ್ಯಾತ ತೆಗೆದಿರುವುದು ಸರಿಯಲ್ಲ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಖಾತೆ ಸಚಿವರಾದ ಎಚ್.ಡಿ. ಕುಮಾರಸ್ವಾಮಿ ಅವರು ತೀವ್ರ ಬೇಸರ ವ್ಯಕ್ತಪಡಿಸಿದರು.

ಮಂಡ್ಯದಲ್ಲಿ ಅಂತರಾಷ್ಟ್ರೀಯ ಯೋಗ ದಿನಾಚರಣೆಯ ನಂತರ ಮಾಧ್ಯಮಗಳ ಜೊತೆ ಮಾತನಾಡಿದ ಕೇಂದ್ರ ಸಚಿವರು; ತಮಿಳುನಾಡು ಕ್ಯಾತೆ ತೆಗೆಯುತ್ತಿರುವುದು ಇದೇ ಮೊದಲಲ್ಲ. ಕಳೆದ 50 ವರ್ಷದಿಂದಲೂ ಕಾವೇರಿ ವಿಚಾರದಲ್ಲಿ ಸಮಸ್ಯೆ ಸೃಷ್ಟಿ ಮಾಡುತ್ತಿದೆ. ತಮಿಳುನಾಡು ರಾಜ್ಯಕ್ಕೆ ನಿಗದಿಗಿಂತ ಎರಡು ಪಟ್ಟು ನೀರು ಕೊಟ್ಟಿದ್ದು ಇದೆ. ಅವರು ಅದನ್ನು ನೆನಪು ಮಾಡಿಕೊಳ್ಳುವುದಿಲ್ಲ. ಜಲಾಶಯಗಳು ತುಂಬಿದಾಗ ಯಥೇಚ್ಛವಾಗಿ ಆ ರಾಜ್ಯಕ್ಕೆ ನೀರು ಹರಿದು ಹೋಗಿದೆ. ಮಳೆ ಆಗದೆ ಜಲಾಶಯಗಳು ಖಾಲಿ ಬಿದ್ದಾಗ ಆ ರಾಜ್ಯವು ನಮ್ಮ ಮೇಲೆ ನೀರಿಗಾಗಿ ಒತ್ತಡ ಇರುವುದು ಸೂಕ್ತವಲ್ಲ ಎಂದು ಹೇಳಿದರು.

ವಾಸ್ತವ ಪರಿಸ್ಥಿತಿಯನ್ನು ತಮಿಳುನಾಡಿನವರು ಅರ್ಥ ಮಾಡಿಕೊಳ್ಳಬೇಕು. ನೆರೆಹೊರೆ ರಾಜ್ಯಗಳಲ್ಲಿ ವಾಸಮಾಡುವ ನಾವು ನಾವು ಅಣ್ಣ–ತಮ್ಮಂದಿರ ರೀತಿ ಇರಬೇಕು. ಒಕ್ಕೂಟ ವ್ಯವಸ್ಥೆಯಲ್ಲಿ ತಿಕ್ಕಾಟ ನಡೆಸುವುದು ಸರಿಯಲ್ಲ. ಇರುವ ಪರಿಸ್ಥಿತಿಯನ್ನು ಅರಿತು ಪರಸ್ಪರ ಹಂಚಿಕೊಂಡು ನಡೆದರೆ ಎರಡು ರಾಜ್ಯಗಳಿಗೂ ಉತ್ತಮ ಎಂಬುದನ್ನು ತಮಿಳುನಾಡು ತಿಳಿದುಕೊಳ್ಳಬೇಕು. ಹೊರತುಪಡಿಸಿ ಕಾಲು ಕೆರೆದು ಜಗಳಕ್ಕೆ ಬರುವುದು ಒಳ್ಳೆಯ ನಡೆ ಅಲ್ಲ ಎಂದು ಕುಮಾರಸ್ವಾಮಿ ಅವರು ಅಭಿಪ್ರಾಯಪಟ್ಟರು. ಕರ್ನಾಟಕಕ್ಕೆ ಎಲ್ಲಾ ಕಡೆಗಳಿಂದಲೂ ನಿರಂತರವಾಗಿ ಅನ್ಯಾಯ ಆಗುತ್ತದೆ. ನಮ್ಮ ರಾಜ್ಯದ ಜನರ ಹಣದಲ್ಲಿ ಕೃಷ್ಣರಾಜಸಾಗರ, ಕಬಿನಿ, ಹಾರಂಗಿ, ಹೇಮಾವತಿ ಸೇರಿದಂತೆ ಎಲ್ಲಾ ಅಣೆಕಟ್ಟುಗಳನ್ನು ನಿರ್ಮಾಣ ಮಾಡಿದ್ದೇವೆ. ನಮ್ಮ ಹಣದಲ್ಲಿ ಕಷ್ಟಪಟ್ಟು ಅಣೆಕಟ್ಟೆ ಕಟ್ಟಿಕೊಂಡರೆ ಅವುಗಳನ್ನು ಪಕ್ಕದ ರಾಜ್ಯಗಳಿಗೆ ನೀರು ಬಿಳುವ ಯಂತ್ರಗಳನ್ನಾಗಿ ಮಾಡಿಕೊಂಡಿದ್ದೇವೆ. ಅಂತಹ ಪರಿಸ್ಥಿತಿ ಸೃಷ್ಟಿಯಾಗಲು ರಾಜ್ಯದ ವೈಫಲ್ಯವು ಇದೆ ಎಂದು ಸಚಿವರು ಬೇಸರ ವ್ಯಕ್ತಪಡಿಸಿದರು.

ದೇವೇಗೌಡರು ಈ ದೇಶದ ಪ್ರಧಾನಿ ಆಗುವವರೆಗೂ ನೀರಾವರಿ ವಿಷಯದಲ್ಲಿ ಆಗಿದ್ದ ಅನ್ಯಾಯ ಸರಿಪಡಿಸುವ ಕೆಲಸಗಳು ಆಗಿರಲಿಲ್ಲ. ಈ ರಾಜ್ಯದ ವಿಧಾನಸಭೆಯ ಸದಸ್ಯರಾಗಿದ್ದಾಗಲೇ ಅವರು ಸದನದ ಒಳಗೆ ಮತ್ತು ಹೊರಗೆ ನಿರಂತರ ಹೋರಾಟ ಮಾಡಿ ಕಬಿನಿ, ಹಾರಂಗಿ ಮತ್ತು ಹೇಮಾವತಿ ಅಣೆಕಟ್ಟುಗಳ ನಿರ್ಮಾಣಕ್ಕೆ ಕಾರಣರಾದರು. ಕೆಲವರು ಇದೇ ವಿಷಯವನ್ನು ರಾಜಕೀಯಕ್ಕಾಗಿ ಬಳಕೆ ಮಾಡಿಕೊಳ್ಳುತ್ತಿರುವುದು ಜನರಿಗೆ ಮಾಡುತ್ತಿರುವ ಅನ್ಯಾಯವಾಗಿದೆ. ನಮ್ಮ ಡ್ಯಾಂಗಳು ಪಕ್ಕದ ತಮಿಳುನಾಡಿಗೆ ನೀರು ಬಿಡುವ ಡ್ಯಾಂಗಳಾಗಿ ಬದಲಾಗಿವೆ ಎಂದು ದೂರಿದರು.

ಮೇಕೆದಾಟು ಯೋಜನೆಗೆ ತಮಿಳುನಾಡು ಅಡ್ಡಗಾಲು ಹಾಕುವ ನಡೆಯನ್ನು ಒಪ್ಪಲು ಸಾಧ್ಯವೇ ಇಲ್ಲ. ನಮ್ಮ ರಾಜ್ಯದ ಪಾಲಿನ ನೀರನ್ನು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕಿದೆ. ಅತಿ ಮುಖ್ಯವಾಗಿ ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕೆ ಈ ಅಣೆಕಟ್ಟೆ ನಿರ್ಮಾಣ ಅತ್ಯಂತ ಅಗತ್ಯವಾಗಿದೆ. ಈಗಾಗಲೇ ರಾಜ್ಯವು ಕೇಂದ್ರ ಸರ್ಕಾರಕ್ಕೆ ಯೋಜನಾ ಸಮಗ್ರ ವರದಿ ಸಲ್ಲಿಸಿದೆ. ತಮಿಳುನಾಡು ರಾಜ್ಯದ ಸಹಮತ ಅಗತ್ಯವಿದೆ ಎಂದು ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರು ಹೇಳಿದರು.

ಮೇಕೆದಾಟು ಅನುಷ್ಠಾನಕ್ಕೆ ಬಂದರೆ ಎರಡು ರಾಜ್ಯಗಳಿಗೆ ಲಾಭವಾಗಲಿದೆ. ಅಣೆಕಟ್ಟುಗಳಲ್ಲಿ ನೀರು ತುಂಬಿದ ಮೇಲೆ ಹೆಚ್ಚುವರಿ ನೀರು ಆ ರಾಜ್ಯಕ್ಕೆ ಹರಿದು ಹೋಗುತ್ತದೆ. ಅದನ್ನು ತಡೆಯಲು ಆಗುವುದಿಲ್ಲ. ಈ ಸರಳ ವಿಚಾರವನ್ನು ತಮಿಳುನಾಡು ಕಗ್ಗಂಟನ್ನಾಗಿ ಮಾಡುತ್ತಿದೆ ಎಂದು ಅವರು ಬೇಸರ ವ್ಯಕ್ತಪಡಿಸಿದರು.

ಕುಡಿಯುವ ನೀರಿಗೆ ಮೇಕೆದಾಟು ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದೇವೆ ಎಂದು ನಾವು ಪದೇ ಪದೇ ಹೇಳುತ್ತಿದ್ದೇವೆ. ಅಷ್ಟೇ ಏಕೆ ಡಿಪಿಆರ್ ನಲ್ಲಿಯು ನಮೂದಿಸಿದ್ದೇವೆ. ವಸ್ತುಸ್ಥಿತಿ ಹೀಗಿದ್ದ ಮೇಲೆ ನರರಾಜ್ಯ ತಕರಾರು ಮಾಡುತ್ತಿರುವುದು ಸರಿಯಲ್ಲ. ತಮಿಳುನಾಡಿನ ರಾಜಕೀಯ ಪಕ್ಷಗಳು ಕರ್ನಾಟಕದ ಮೇಲೆ ದಬ್ಬಾಳಿಕೆ ನಡೆಸುವುದನ್ನು ನಿಲ್ಲಿಸಬೇಕು ಎಂದು ಅವರು ತೀಕ್ಷ್ಣವಾಗಿ ಪ್ರಶ್ನೆ ಒಂದಕ್ಕೆ ಉತ್ತರಿಸಿದರು.

### ನೀಟ್ ಪರೀಕ್ಷಾರ್ಥಿಗಳಿಗೆ ಶುಭಕೋರಿದ ಕೇಂದ್ರ ಸಚಿವರು

ವೈದ್ಯಕೀಯ ಕೋರ್ಸ್ ಗಳಿಗೆ ಪ್ರವೇಶ ನೀಡುವ ನೀಟ್ ಪರೀಕ್ಷೆ ಬರೆದ ವಿದ್ಯಾರ್ಥಿಗಳಿಗೆ ಶುಭ ಕೋರಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಪರೀಕ್ಷೆಯನ್ನು ಸುಸೂತ್ರವಾಗಿ ಯಾವುದೇ ಸಮಸ್ಯೆ ಇಲ್ಲದಂತೆ ನಡೆಸಲು ಕೇಂದ್ರ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಂಡಿದೆ ಎಂದರು. ಕಳೆದ ಎರಡು ವರ್ಷದಲ್ಲಿ ನೀಟ್ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆ ಆಗಿದೆ. ಕೆಲವು ದಿನಗಳ ಹಿಂದೆ ನಡೆದ ಘಟನೆಯಿಂದ ಪರೀಕ್ಷಾರ್ಥಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಅವರ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಸಾಕಷ್ಟು ಮುನ್ನೆಚ್ಚರಿಕೆ ವಹಿಸಿದೆ. ವಿಶೇಷವೆಂದರೆ ಪ್ರಧಾನಮಂತ್ರಿಗಳ ಕಾರ್ಯಾಲಯವೇ ಈ ಬಗ್ಗೆ ನಿಗಾ ವಹಿಸಿದೆ. ಯಾವುದೇ ಗೊಂದಲಕ್ಕೆ ಅವಕಾಶ ಕೊಡದಂತೆ ಪರೀಕ್ಷೆ ನಡೆಸಲಾಗುತ್ತಿದೆ ಎಂದು ಸಚಿವರು ಹೇಳಿದರು. ಪರೀಕ್ಷೆಗಳು ನಡೆಸುವ ಸಂದರ್ಭದಲ್ಲಿ ಹಲವಾರು ಬಾರಿ ಗೊಂದಲಗಳು ಆಗಿವೆ. ಹಿಂದಿನ ಅನುಭವಗಳನ್ನು ಗಮನದಲ್ಲಿ ಇಟ್ಟುಕೊಂಡು ಈ ಬಾರಿ ಸಾಕಷ್ಟು ಮುಂಜಾಗ್ರತೆ ವಹಿಸಲಾಗಿದೆ. ವೈದ್ಯಕೀಯ ಕೋರ್ಸ್ ಗಳನ್ನು ಪಡೆಯಲು ಪರೀಕ್ಷೆ ಬರೆದಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಒಳ್ಳೆಯದಾಗಲಿ ಎಂದು ಸಚಿವರು ಹಾರೈಸಿದರು.

# ಚುನಾವಣಾ ಆಯೋಗ ಜನರ ಮತದಾನದ ಹಕ್ಕು ಕಸಿಯುತ್ತಿದೆ: ಕೆಪಿಸಿಸಿ ಅಧ್ಯಕ್ಷ ಹರಿಪ್ರಸಾದ್ ಕಿಡಿ

**ಬೆಂಗಳೂರು,ಜೂ.21:** ಈ ದೇಶದ ಎಲ್ಲರಿಗೂ ಮತದಾನದ ಹಕ್ಕು ನೀಡಿದ ಪಕ್ಷ ನಮ್ಮದು. ಜನರಿಗೆ ನೀಡಿದ ಹಕ್ಕನ್ನು ಚುನಾವಣಾ ಆಯೋಗ ಕಿತ್ತುಕೊಳ್ಳುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷರಾಗಿ ಪದಗ್ರಹಣ ಮಾಡಿದ ನಂತರ ಮಾತನಾಡಿದ ಅವರು, ನಮ್ಮ ಹಿರಿಯ ನಾಯಕರ ಮಾರ್ಗದರ್ಶನದಲ್ಲಿ ಹಾಗೂ ಕಾರ್ಯಕರ್ತರ ಬೆಂಬಲದೊಂದಿಗೆ ಕಾಂಗ್ರೆಸ್ ಪಕ್ಷವನ್ನು ಸೈದ್ಧಾಂತಿಕವಾಗಿ ಮತ್ತಷ್ಟು ಬಲಿಷ್ಠಗೊಳಿಸುತ್ತೇನೆ. ಈ ಜವಾಬ್ದಾರಿ ನನಗೆ ಅಧಿಕಾರವಲ್ಲ, ಪಕ್ಷ ಮತ್ತು ಜನರ ಸೇವೆ ಮಾಡುವ ಒಂದು ಪವಿತ್ರ ಅವಕಾಶ. ದೇಶದ ಚುನಾವಣಾ ವ್ಯವಸ್ಥೆ ಹಾಳು ಮಾಡಲಾಗುತ್ತಿದೆ. ಸ್ಥಳಿಯ ಪಕ್ಷಗಳನ್ನು ಮುಳುಗಿಸಲಾಗುತ್ತಿದೆ. ಕಾಂಗ್ರೆಸ್ ಪಕ್ಷ ಈ ಕೆಲಸ ಎಂದೂ ಮಾಡಿಲ್ಲ. ಬಿಜೆಪಿ ಒನ್ ನೇಷನ್ ಒನ್ ರಿಲಿಜಿಯನ್ ಅಡಿ ಅನೇಕ ಆಲೋಚನೆ ತಂದು ಜನರನ್ನು ಒಡೆದು ಆಳುತ್ತಿದೆ ಎಂದರು.

ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳು ದುರ್ಬಲವಾಗಲು ಬಿಡಬಾರದು. ಆರ್ ಎಸ್ ಎಸ್, ಬಿಜೆಪಿಯವರು ಪುಕ್ಕಲರು. ಇವರು ಜೀವನ ಪರ್ಯಂತ ನೆಹರು ಅವರ ಅವಹೇಳನ ಮಾಡುತ್ತಲೇ ಇರುತ್ತಾರೆ. ಆದರೆ ಅವರ ಹತ್ತಿರಕ್ಕೂ ಬರಲು ಆಗುವುದಿಲ್ಲ. ನೆಹರು ಅವರು ರಾಷ್ಟ್ರ ನಿರ್ಮಾಣದ ದೃಷ್ಟಿಯನ್ನು ಹೊಂದಿದ್ದರು.ಅನೇಕ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದರು. ಆದರೆ ಮೋದಿ ಅವರು ಟ್ರಂಪ್ ಮುಂದೆ ಮಂಡಿಯೂರಿದ್ದಾರೆ ಎಂದರು.

ನಮ್ಮ ವಿರೋಧಿಗಳಾದ ಬಿಜೆಪಿ, ಆರ್ ಎಸ್ ಎಸ್ ಅವರು ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿಲ್ಲ. ಅವರು ಸಾಂವಿಧಾನಿಕ ಸಂಸ್ಥೆಗಳನ್ನು ತಮ್ಮ ಕೈಯಾಳಾಗಿಸಿಕೊಂಡಿದ್ದಾರೆ. ಆರ್ ಎಸ್ ಎಸ್ ನ ರಾಜಕೀಯ ಘಟಕ ಬಿಜೆಪಿ. ದೇಶದ ಸಂವಿಧಾನ, ಸ್ವಾತಂತ್ರ್ಯ ಹೋರಾಟ, ಧ್ವಜ ಸೇರಿದಂತೆ ಎಲ್ಲದರ ವಿರುದ್ಧ ಇದ್ದವರು ಆರ್ ಎಸ್ ಎಸ್ ನವರು. ಈಗ ಸಂವಿಧಾನವನ್ನು ಮುಗಿಸುವ ಕೆಲಸ ಮಾಡುತ್ತಿದ್ದಾರೆ. ಎಸ್ ಐಆರ್ ನಿಂದ ದೊಡ್ಡ ಅನಾಹುತ ಆಗುತ್ತಿದೆ ಎಂದರು.

ಬೆಂಗಳೂರಿನ ಅರಮನೆ ಮೈದಾನದಲ್ಲಿ ಲಕ್ಷಾಂತರ ಕಾಂಗ್ರೆಸ್ ಕಾರ್ಯಕರ್ತರ ಸಮ್ಮುಖದಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷನಾಗಿ ಇಂದು ಅತ್ಯಂತ ಮಹತ್ವದ ಜವಾಬ್ದಾರಿಯನ್ನು ಸ್ವೀಕರಿಸಿದ್ದೇನೆ. ಪಕ್ಷದ ವರಿಷ್ಠರು ನನ್ನ ಮೇಲೆ ನಂಬಿಕೆ ಇಟ್ಟು ಈ ಜವಾಬ್ದಾರಿಯನ್ನು ನೀಡಿರುವುದು ನನಗೆ ಗೌರವದ ಸಂಗತಿಯಷ್ಟೇ ಅಲ್ಲ, ಇನ್ನಷ್ಟು ಹೊಣೆಗಾರಿಕೆಯಿಂದ ಕೆಲಸ ಮಾಡುವ ಪ್ರೇರಣೆಯಾಗಿದೆ ಎಂದರು.

ನಾಡಿನ ಮೂಲೆಮೂಲೆಗಳಿಂದ ಆಗಮಿಸಿ ತಮ್ಮ ಪ್ರೀತಿ, ವಿಶ್ವಾಸ ಮತ್ತು ಬೆಂಬಲವನ್ನು ವ್ಯಕ್ತಪಡಿಸಿದ ಪಕ್ಷದ ಎಲ್ಲಾ ಮುಖಂಡರು, ಜನಪ್ರತಿನಿಧಿಗಳು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಕಾಂಗ್ರೆಸ್ ಅಭಿಮಾನಿಗಳಿಗೆ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಈ ಐತಿಹಾಸಿಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಶ್ರಮಿಸಿದ ಪ್ರತಿಯೊಬ್ಬ ಕಾರ್ಯಕರ್ತನ ಪರಿಶ್ರಮಕ್ಕೂ ನಾನು ಋಣಿಯಾಗಿದ್ದೇನೆ. ನಿಮ್ಮೆಲ್ಲರ ಪ್ರೀತಿ ಮತ್ತು ವಿಶ್ವಾಸವೇ ನನ್ನ ಶಕ್ತಿ. ಕಾಂಗ್ರೆಸ್ ಪಕ್ಷದ ಸಿದ್ಧಾಂತಗಳನ್ನು ಮತ್ತಷ್ಟು ಬಲಪಡಿಸಿ, ಸಂಘಟನೆಯನ್ನು ಗಟ್ಟಿಗೊಳಿಸಿ, ಜನರ ಆಶಯಗಳಿಗೆ ಸ್ಪಂದಿಸುವ ಪಕ್ಷವಾಗಿ ರೂಪಿಸಲು ನಿಮ್ಮೆಲ್ಲರ ಸಹಕಾರದೊಂದಿಗೆ ನಿರಂತರವಾಗಿ



ಶ್ರಮಿಸುತ್ತೇನೆ ಎಂದರು.

ಕಾಂಗ್ರೆಸ್ ಪಕ್ಷದ ಧರ್ಮ ತ್ರಿವರ್ಣಧ್ವಜ, ನಮ್ಮ ಪವಿತ್ರ ಗ್ರಂಥ ಸಂವಿಧಾನ, ನಮ್ಮ ಜಾತಿ ಕಾಂಗ್ರೆಸ್ ಪಕ್ಷ. ನಮ್ಮ ದೇಶದಲ್ಲಿ ಅಧಿಕೃತ ಧರ್ಮವಿಲ್ಲ. ಎಲ್ಲಾ ಧರ್ಮಕ್ಕೂ ಸಮಾನ ಅವಕಾಶ ನೀಡಿದ್ದು ನಮ್ಮ ಕಾಂಗ್ರೆಸ್ ಸರ್ಕಾರ ನೀಡಿದ ಸಂವಿಧಾನ. ಹೂವಿನ ಹಾರ, ಶಾಲಿನ ಬದಲು ಅದೇ ಹಣ ಪಕ್ಷಕ್ಕೆ ನೀಡಿ. ಅದೇ ನೀವು ನನಗೆ ನೀಡವ ಕೊಡುಗೆ. ಬಿಜೆಪಿಯವರು ಧರ್ಮಾಧಾರಿತ ರಾಜಕೀಯ ಮಾಡಿಕೊಂಡು ಅಶಾಂತಿ ಸೃಷ್ಟಿ ಮಾಡುತ್ತಿದೆ.

ಕುವೆಂಪು ಅವರು ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ ಎಂದು ಕರೆ ನೀಡಿದ್ದರು. ಮೌಢ್ಯತೆಯ ಮಾರಿಯನು ಹೊರ ದೂಡಬನ್ನಿ. ಬಡತನವ ಬುಡಮಟ್ಟ ಕೀಳಬನ್ನಿ. ಓ ಬನ್ನಿ ಸಹೋದರರೇ ಬೇಗ ಬನ್ನಿ ಎಂಬ ರಸಋಷಿಯ ಮಾತನ್ನು ನನಸು ಮಾಡಿರುವುದು ನಮ್ಮ ಕಾಂಗ್ರೆಸ್ ಪಕ್ಷ. ಸರ್ವಜನಾಂಗದ ಶಾಂತಿಯ ತೋಟ, ರಸಿಕರ ಕಂಗಳ ಸೆಳೆಯುವ ನೋಟ, ಹಿಂದೂ ಕ್ರೈಸ್ತ ಮುಸಲ್ಮಾನ ಪಾರಸಿಕ ಜೈನರ ಉದ್ಯಾನ. ಈ ದೇಶದಲ್ಲಿ ಕೋಮುವಾದ ಹರಡಿಸೋಕೆ ಯಾವುದೇ ಕಾರಣಕ್ಕೂ ನಾವು ಬಿಡಬಾರದು ಎಂದರು.

ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಸಂಕಲ್ಪ ಮಾಡಬೇಕು. ಎಲ್ಲಾ ಶೋಷಿತರ ಪರವಾದ ಹೋರಾಟಗಳಿಗೆ ಕೈ ಜೋಡಿಸಬೇಕು. ನಾವು ಎಚ್ಚರ ತಪ್ಪಿದರೆ ನಿರ್ನಾಮ ಮಾಡಲು ವಿರೋಧಿಗಳು ಕಾಯುತ್ತಿದ್ದಾರೆ. ಧರ್ಮಾಧಾರಿತ ರಾಜಕಾರಣ ಮಾಡಲು ಅವಕಾಶ ನೀಡಬಾರದು. ಗೋಡ್ಸೆ ಈ ದೇಶದ ಮೊಟ್ಟಮೊದಲ ಭಯೋತ್ಪಾದಕ, ಆತ ಮಹಾತ್ಮ ಗಾಂಧಿ ಅವರನ್ನು ಕೊಂದ. ಆತ ದೊಡ್ಡ ಕೊಲೆಗಾರ ಅದನ್ನು ಸಾರ್ವಜನಿಕವಾಗಿ ಬಿಜೆಪಿಯವರು ಹೇಳಲ್ಲ. ಅಂಬೇಡ್ಕರ್ ಅವರು ಹೇಳುತ್ತಾರೆ, ಜೀವನ ಮಾಡಲು ರಾಜಕೀಯಕ್ಕೆ ಬರಬೇಡಿ, ರಾಜಕೀಯಕ್ಕೆ ಬಂದರೆ ದೀನ ದಲಿತರ ಜೀವನ ಬದಲಾವಣೆ ಮಾಡಲು ರಾಜಕೀಯಕ್ಕೆ ಬನ್ನಿ ಎಂದಿದ್ದಾರೆ. ಪ್ರತಿದಿನ ಬಡವರನ್ನು ನೆನಪಿಸಿಕೊಳ್ಳಿ, ಅವರ ಪರ ಕೆಲಸ ಮಾಡಿ ಎಂದು ಮಹಾತ್ಮ ಗಾಂಧಿ ಹೇಳಿದ್ದಾರೆ. ಆದರೆ ಮೋದಿಯವರು ಕೇವಲ ಅದಾನಿ, ಅಂಬಾನಿಯನ್ನು ನೆನಪಿಸಿಕೊಳ್ಳುತ್ತಾರೆ ಎಂದು ವ್ಯಂಗ್ಯವಾಡಿದರು.

ಸಂಜಯ್ ಗಾಂಧಿ ಅವರ ಜೊತೆ ಜೈಲಿನಲ್ಲಿದ್ದೆ. ನಾನು ಗಾಂಧಿ ಕುಟುಂಬದ ಆರು ಜನರ ಜೊತೆ ಕೆಲಸ ಮಾಡಿದ್ದೇನೆ. ದೇಶಕ್ಕಾಗಿ ಪ್ರಾಣ ಬಿಟ್ಟಿದ್ದರೆ ಅದು ಕಾಂಗ್ರೆಸ್ ಪಕ್ಷದ ನಾಯಕರು ಮಾತ್ರ. ಇಂದಿರಾಗಾಂಧಿ, ರಾಜೀವ್ ಗಾಂಧಿ ಇದಕ್ಕೆ ಉದಾಹರಣೆ. ಸೋನಿಯಾಗಾಂಧಿ ಅಧಿಕಾರ ತ್ಯಾಗ ಮಾಡಿದರು. ಆಹಾರ ಭದ್ರತಾ ಯೋಜನೆ, ನರೇಗಾ ಹೀಗೆ ಹಲವಾರು ಜನಪರ ಯೋಜನೆಗಳನ್ನು ಬಿಜೆಪಿ ಬುಡಮೇಲು ಮಾಡುತ್ತಿದೆ.

ಕರ್ನಾಟಕ ಇಡೀ ದೇಶಕ್ಕೆ, ಪ್ರಪಂಚಕ್ಕೆ ಮಾದರಿ. ಈ ರಾಜ್ಯದ ಕೊಡುಗೆ ಇಡೀ ದೇಶಕ್ಕೆ ಹೆಚ್ಚಿದೆ. ಸಾಮಾಜಿಕ ನ್ಯಾಯದ ನೆಲ. ನನಗೆ ಸಹಕಾರ ನೀಡಿದರೆ ಕಾಂಗ್ರೆಸ್ ಪಕ್ಷದ ಬೆಳವಣಿಗೆಗೆ ಕೊಡುಗೆ ನೀಡಿದಂತೆ. ವಿದ್ಯಾರ್ಥಿ, ಯುವ ಘಟಕ ಹೋರಾಟದ ಮನೋಭಾವ ಬೆಳೆಸಿಕೊಳ್ಳಬೇಕು. ಅನೇಕ ಧರ್ಮಗಳನ್ನು ಹೊಂದಿರುವ ದೇಶ ನಮ್ಮದು. ಈ ದೇಶದಲ್ಲಿ ಸೌಹಾರ್ದತೆ ಮೂಡಿಸಿದ ಪಕ್ಷ ಕಾಂಗ್ರೆಸ್. ಸಂವಿಧಾನವನ್ನು ರಕ್ಷಣೆ ಮಾಡಿಕೊಂಡು ಈ ದೇಶವನ್ನ ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ. ನಾವು ಹಿರಿಯ ನಾಗರಿಕರಾಗಿದ್ದೇವೆ. ಯುವಕರು ಹೋರಾಟಕ್ಕೆ ಮುಂದಾಗಬೇಕು ಎಂದರು.

ಇದು ನನ್ನ ಜೀವನದ ಮಹತ್ವದ ದಿನ. ಇದು ಅಧಿಕಾರ ಅಲ್ಲ ಜವಾಬ್ದಾರಿ. 141 ವರ್ಷದಿಂದ ಈ ದೇಶದ ಸೇವೆ ಮಾಡಿರುವ ಪವಿತ್ರ ಪಕ್ಷ ಕಾಂಗ್ರೆಸ್. ಇದರ ಸೇವೆ ಮಾಡುವ ಅವಕಾಶವನ್ನು ನನಗೆ ಸೋನಿಯಾಗಾಂಧಿ, ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಪ್ರಿಯಾಂಕ ಗಾಂಧಿ ಅವರು ಅವಕಾಶ ನೀಡಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ತಮ್ಮ ಜೀವನವನ್ನೇ ಮುಡುಪಾಗಿಟ್ಟಿರುವ, ತಮ್ಮ ರಕ್ತದಲ್ಲೇ ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಅಳವಡಿಸಿಕೊಂಡಿರುವ ಡಿ. ಕೆ.ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿರುವ ಪಕ್ಷದ ಹಿರಿಯ ನಾಯಕರಿಗೆ ಧನ್ಯವಾದಗಳು ಎಂದರು.

# ಯೋಗ ಮನಸ್ಸು, ದೇಹ,ಆತ್ಮವನ್ನು ಸಂಪರ್ಕಿಸುವ ಜೀವನ ವಿಧಾನ: ದೆಹಲಿ ಸಿಎಂ ರೇಖಾ ಗುಪ್ತಾ

**ನವದೆಹಲಿ, ಜೂ.21:** ಅಂತರರಾಷ್ಟ್ರೀಯ ಯೋಗ ದಿನದ ಸಂದರ್ಭದಲ್ಲಿ, ದೆಹಲಿಯ ಜೀವವೈವಿಧ್ಯ–ಸಮೃದ್ಧ ಅಸೋಲಾ ಭಟ್ಟಿ, ನೀಲಿ ಜೀಲ್‌ನಲ್ಲಿರುವ ಪ್ರಶಾಂತ ನೈಸರ್ಗಿಕ ಪರಿಸರದ ನಡುವೆ, ಮುಖ್ಯಮಂತ್ರಿ ರೇಖಾ ಗುಪ್ತಾ ನಾಗರಿಕರೊಂದಿಗೆ ಸಾಮೂಹಿಕ ಯೋಗ ಅಧಿವೇಶನದಲ್ಲಿ ಭಾಗವಹಿಸಿದರು.

ಒಂದು ದೆಹಲಿ, ಒಂದು ಯೋಗ' ಎಂಬ ವಿಷಯದ ಅಡಿಯಲ್ಲಿ, ರೇಖಾ ಗುಪ್ತಾ ಸರ್ಕಾರವು ಭಾನುವಾರ ರಾಷ್ಟ್ರ ರಾಜಧಾನಿಯ ಎಲ್ಲಾ 70 ವಿಧಾನಸಭಾ ಕ್ಷೇತ್ರಗಳಲ್ಲಿ ಏಕಕಾಲದಲ್ಲಿ ಯೋಗ ಕಾರ್ಯಕ್ರಮಗಳನ್ನು ಆಯೋಜಿಸಿತು. ವಿದ್ಯಾರ್ಥಿಗಳು, ಯುವಕರು, ಮಹಿಳೆಯರು ಮತ್ತು ಹಿರಿಯ ನಾಗರಿಕರು ಸೇರಿದಂತೆ ವಿವಿಧ ಹಂತಗಳಿಂದ ಬಂದ ಸಾವಿರಾರು ನಾಗರಿಕರು ನಗರದಾದ್ಯಂತ ನಡೆದ ಕಾರ್ಯಕ್ರಮಗಳಲ್ಲಿ ಉತ್ಸಾಹದಿಂದ ಭಾಗವಹಿಸಿದರು. 2014 ರಲ್ಲಿ, ಪ್ರಧಾನಿ ನರೇಂದ್ರ ಮೋದಿ ಅವರು ವಿಶ್ವಸಂಸ್ಥೆಯಲ್ಲಿ ಅಂತರರಾಷ್ಟ್ರೀಯ ಯೋಗ ದಿನವನ್ನು ಆಚರಿಸಲು ಪ್ರಸ್ತಾಪಿಸಿದರು, ಇದು ಜಾಗತಿಕ ಸಮುದಾಯದಿಂದ ಅಭೂತಪೂರ್ವ ಬೆಂಬಲವನ್ನು ಪಡೆಯಿತು ಎಂದು ಅವರು ಗಮನಿಸಿದರು.



ಅಸೋಲಾ ಪ್ರದೇಶ ಮತ್ತು ದಕ್ಷಿಣ ರಿಡ್ಜ್‌ನಲ್ಲಿ ನಡೆಸಲಾಗುತ್ತಿರುವ ತೋಟಗಾರಿಕೆ ಚಟುವಟಿಕೆಗಳ ಪ್ರಗತಿಯನ್ನು ಮುಖ್ಯಮಂತ್ರಿ ಪರಿಶೀಲಿಸಿದರು. ಪ್ರಧಾನಮಂತ್ರಿಯವರ 'ಏಕ್ ಪೇಡ್ ಮಾ ಕೆ ನಾಮ್' ಅಭಿಯಾನದಿಂದ ಸ್ಫೂರ್ತಿ ಪಡೆದು, ದೆಹಲಿಯ ಎಲ್ಲಾ ನಾಗರಿಕರು ಮರಗಳನ್ನು ನೆಡುವ ಪ್ರತಿಜ್ಞೆ ಮಾಡುವಂತೆ ಗುಪ್ತಾ ಕರೆ ನೀಡಿದರು. ಯೋಗ ಮತ್ತು ಪ್ರಕೃತಿ ಎರಡರೊಂದಿಗಿನ ಬಲವಾದ ಸಂಪರ್ಕವು ಆರೋಗ್ಯಕರ, ಸಮತೋಲಿತ ಮತ್ತು ಸಮೃದ್ಧ ಜೀವನದ ಅಡಿಪಾಯವನ್ನು ರೂಪಿಸುತ್ತದೆ ಎಂದು ಸಿಎಂ ರೇಖಾ ಗುಪ್ತಾ ಹೇಳಿದರು.

ಯೋಗವು ಕೇವಲ ದೈಹಿಕ ವ್ಯಾಯಾಮದ ಒಂದು ರೂಪವಲ್ಲ, ಆದರೆ ಒಬ್ಬರ ಪ್ರಜ್ಞೆ ಮತ್ತು ಜೀವನಶೈಲಿಯನ್ನು ರೂಪಿಸುವಾಗ ದೇಹ, ಮನಸ್ಸು ಮತ್ತು ಆತ್ಮದ ನಡುವೆ ಸಮತೋಲನವನ್ನು ತರುವ ಸಂಪೂರ್ಣ ಜೀವನ ವಿಧಾನವಾಗಿದೆ ಎಂದು ಗುಪ್ತಾ ಹೇಳಿದ್ದಾರೆ. ಯೋಗವು ಭಾರತದ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿದ್ದು, ಇಡೀ ರಾಷ್ಟ್ರಕ್ಕೆ ಹೆಮ್ಮೆಯ ವಿಷಯವಾಗಿದೆ ಎಂದು ಸಿಎಂ ಹೇಳಿದರು.

ಏತನ್ಮಧ್ಯೆ, ಕ್ಯಾಬಿನೆಟ್ ಸಚಿವ ಮಂಜಿಂದರ್ ಸಿಂಗ್ ಸಿರ್ಸಾ, ದಕ್ಷಿಣ ದೆಹಲಿ ಸಂಸದ ರಾಮವೀರ್ ಸಿಂಗ್ ಬಿಧೂರಿ, ಸಂಬಂಧಪಟ್ಟ ಇಲಾಖೆಗಳ ಹಿರಿಯ ಅಧಿಕಾರಿಗಳು, ವಿದ್ಯಾರ್ಥಿಗಳು, ಯೋಗ ಬೋಧಕರು ಮತ್ತು ಹೆಚ್ಚಿನ ಸಂಖ್ಯೆಯ ನಾಗರಿಕರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ನವದೆಹಲಿಯಲ್ಲಿ ಭಾನುವಾರ ನಡೆದ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಸಂದರ್ಭದಲ್ಲಿ ನಟ ಅಕ್ಷಯ್ ಕುಮಾರ್ ಅವರೊಂದಿಗೆ ಕೇಂದ್ರ ಕ್ರೀಡಾ ಸಚಿವ ಮನ್ಸುಖ್ ಮಾಂಡವಿಯಾ ಪಾಲ್ಗೊಂಡಿದ್ದರು.

# ಶಂಕಿತ ಅಪರಾಧಿಗಳ ಪತ್ತೆಗೆ ಬಂತು ಹೈಟೆಕ್ ಆ್ಯಪ್

**ನವದೆಹಲಿ,ಜೂ.21:** ಭಾರತೀಯ ಪೊಲೀಸ್ ವ್ಯವಸ್ಥೆಯು ಈಗ ಸಂಪೂರ್ಣ ಹೈಟೆಕ್ ರೂಪ ಪಡೆದುಕೊಳ್ಳುತ್ತಿದೆ. ಇನ್ಮುಂದೆ ರಸ್ತೆಯಲ್ಲಿ ಸಿಗುವ ಶಂಕಿತ ವ್ಯಕ್ತಿ ಅಪರಾಧಿಯೇ ಅಥವಾ ಅಲ್ಲವೇ ಎಂಬುದನ್ನು ಪೊಲೀಸರು ಕೇವಲ 35 ಸೆಕೆಂಡುಗಳಲ್ಲಿ ಪತ್ತೆಹಚ್ಚಬಹುದು.

ದೇಶಾದ್ಯಂತ ಇರುವ 1.3 ಕೋಟಿಗೂ ಹೆಚ್ಚು ಅಪರಾಧಿಗಳ ಬೆರಳಚ್ಚು ಡೇಟಾಬೇಸ್ ಅನ್ನು ಪೊಲೀಸರ ಸ್ಮಾರ್ಟ್‌ಫೋನ್‌ಗೇ ತಂದುಕೊಡುವ ಅತ್ಯಾಧುನಿಕ ಅಭಿಜ್ಞಾನ್ ಆ್ಯಪ್ ಅನ್ನು ಕೇಂದ್ರ ಸರ್ಕಾರ ಬಿಡುಗಡೆ ಮಾಡಿದೆ. ರಸ್ತೆ ಬದಿಯಲ್ಲೇ ಶಂಕಿತರ ಹಿನ್ನೆಲೆಯನ್ನು ಜಾಲಾಡಬಲ್ಲ ಈ ತಂತ್ರಜ್ಞಾನ, ತನಿಖಾ ಸಂಸ್ಥೆಗಳ ಪಾಲಿಗೆ ಹೊಸ ಬ್ರಹ್ಮಾಸ್ತ್ರವಾಗಿ ಹೊರಹೊಮ್ಮಿದೆ.

ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ ಅಭಿವೃದ್ಧಿಪಡಿಸಿರುವ ಅತ್ಯಾಧುನಿಕ ಅಭಿಜ್ಞಾನ್ ಮೊಬೈಲ್ ಅಪ್ಲಿಕೇಶನ್ ಅನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಲೋಕಾರ್ಪಣೆಗೊಳಿಸಿದ್ದಾರೆ. ದೆಹಲಿಯಲ್ಲಿ ನಡೆದ 26ನೇ ಅಖಿಲ ಭಾರತ ಬೆರಳಚ್ಚು ಸಮ್ಮೇಳನದಲ್ಲಿ ಈ ಅಪ್ಲಿಕೇಶನ್ ಲೋಕಾರ್ಪಣೆಗೊಳಿಸಲಾಯಿತು.

**ಏನಿದು ಅಭಿಜ್ಞಾನ್ ಆ್ಯಪ್?**

ಇದು ಪೊಲೀಸರು ಮತ್ತು ತನಿಖಾ ಸಂಸ್ಥೆಗಳಿಗಾಗಿ ಸಿದ್ಧಪಡಿಸಲಾದ ವಿಶೇಷ ಮೊಬೈಲ್ ಆ್ಯಪ್ ಆಗಿದೆ. ಪೊಲೀಸರು ರಸ್ತೆಯಲ್ಲಿ ಅಥವಾ ವಾಹನ ತಪಾಸಣೆ ನಡೆಸುವಾಗ ಶಂಕಿತ ವ್ಯಕ್ತಿಯ ಹೆಬ್ಬೆರಳಿನ ಗುರುತನ್ನು ಸ್ಕ್ಯಾನ್ ಮಾಡಿದರೆ, ಕೇವಲ 35 ಸೆಕೆಂಡುಗಳಲ್ಲಿ ಆ ವ್ಯಕ್ತಿ ಈ ಹಿಂದೆ ಯಾವುದಾದರೂ ಅಪರಾಧ ಮಾಡಿದ್ದಾನೆಯೇ ಎಂಬ ಸಂಪೂರ್ಣ ಮಾಹಿತಿ ಮೊಬೈಲ್ ಪರದೆಯ ಮೇಲೆ ಕಾಣಿಸಿಕೊಳ್ಳುತ್ತದೆ.

ಈ ಆಪ್ ರಾಷ್ಟ್ರೀಯ ಸ್ವಯಂಚಾಲಿತ ಬೆರಳಚ್ಚು ಗುರುತಿನ ವ್ಯವಸ್ಥೆಗೆ ಸಂಪರ್ಕ ಹೊಂದಿದೆ. ಇದರಲ್ಲಿ ದೇಶದ ಸುಮಾರು 1.29 ಕೋಟಿ ಅಪರಾಧಿಗಳ ಬೆರಳಚ್ಚು ದಾಖಲೆಗಳಿವೆ. ಇದರಿಂದಾಗಿ ಬೇರೆ ರಾಜ್ಯಗಳಿಗೆ ಓಡಿಹೋಗುವ ಅಥವಾ ಹೆಸರು, ರೂಪ ಬದಲಾಯಿಸಿಕೊಂಡು ಓಡಾಡುವ ಹಳೆಯ ಅಪರಾಧಿಗಳನ್ನು ತಕ್ಷಣವೇ ಗುರುತಿಸಲು ಸಾಧ್ಯವಾಗುತ್ತದೆ. ಮನುಷ್ಯನ ಬೆರಳಚ್ಚು ಎಂದಿಗೂ ಬದಲಾಗುವುದ ಕಾರಣ ಅಪರಾಧಿಗಳು ಎಲ್ಲೇ ಅಡಗಿ ಕೃತ್ಯ ನಡೆಸಿದರೂ ಸುಲಭವಾಗಿ ಸಿಕ್ಕಿ ಬೀಳಲಿದ್ದಾರೆ. ಅಭಿಜ್ಞಾನ್ ಆ್ಯಪ್ ಜೊತೆಗೆ, ಅಪರಾಧ ಮುಕ್ತ ಭಾರತ ನಿರ್ಮಾಣಕ್ಕಾಗಿ ಇನ್ನೂ ಮೂರು ಪ್ರಮುಖ ಡಿಜಿಟಲ್ ವ್ಯವಸ್ಥೆಗಳನ್ನು ಅಮಿತ್ ಶಾ ಬಿಡುಗಡೆ ಮಾಡಿದ್ದಾರೆ.

# ಹಾರ್ಮುಜ್ ಜಲಸಂಧಿಯಲ್ಲಿ ಅಮೆರಿಕ ಸ್ವಂತ ಸುಂಕ ವಿಧಿಸುವುದಾಗಿ ಟ್ರಂಪ್ ಬೆದರಿಕೆ

**ವಾಷಿಂಗ್ಟನ್, ಜೂ.21 :** ಇತ್ತೀಚೆಗೆ ಸಹಿ ಹಾಕಲಾದ ಒಡಂಡಿಕೆ ಪತ್ರದಡಿಯಲ್ಲಿ ಸ್ಥಾಪಿಸಲಾದ 60 ದಿನಗಳ ಮಾತುಕತೆ ಅವಧಿಯೊಳಗೆ ಇರಾನ್ ಜೊತೆ ಅಂತಿಮ ಒಪ್ಪಂದ ಮಾಡಿಕೊಳ್ಳದಿದ್ದರೆ ಹಾರ್ಮುಜ್ ಜಲಸಂಧಿಯ ಮೂಲಕ ಸಾಗಣೆಗೆ ವಾಷಿಂಗ್ಟನ್ ತನ್ನದೇ ಆದ ಸುಂಕಗಳನ್ನು ವಿಧಿಸಬಹುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಎಚ್ಚರಿಸಿದ್ದಾರೆ. ಕ್ಯಾಂಪ್ ಡೇವಿಡ್‌ನಿಂದ ಟ್ರೂತ್ ಸೋಷಿಯಲ್‌ನಲ್ಲಿ ಬರೆಯುತ್ತಾ, ಪ್ರಸ್ತುತ ವ್ಯವಸ್ಥೆಯು ಕಾರ್ಯತಂತ್ರದ ಜಲಮಾರ್ಗದ ಮೂಲಕ 60 ದಿನಗಳವರೆಗೆ ಸುಂಕರಹಿತ ಮಾರ್ಗವನ್ನು ಖಾತರಿಪಡಿಸುತ್ತದೆ, ಆದರೆ ಮಾತುಕತೆಗಳು ವಿಫಲವಾದರೆ ಅದು ಬದಲಾಗಬಹುದು ಎಂದು ಅವರು ಸೂಚಿಸಿದರು.



"60 ದಿನಗಳ ಅವಧಿ ಮುಗಿದ ನಂತರ ಯಾವುದೇ ಸುಂಕಗಳು ಇರುವುದಿಲ್ಲ, ಒಪ್ಪಂದವು ಪೂರ್ಣಗೊಳ್ಳದಿದ್ದರೆ, ಅವುಗಳನ್ನು ಅಮೆರಿಕಾ ವಿಧಿಸುತ್ತದೆ ಎಂದು ಟ್ರಂಪ್ ಬರೆದಿದ್ದಾರೆ. "ಹಿಂದಿನ, ವರ್ತಮಾನ ಮತ್ತು ಭವಿಷ್ಯದ ವೆಚ್ಚಗಳ ಮರುಪಾವತಿ ಉದ್ದೇಶಗಳಿಗಾಗಿ ಮಧ್ಯಪ್ರಾಚ್ಯದ ದೇಶಗಳಿಗೆ ಗಾರ್ಡಿಯನ್ ಏಂಜೆಲ್ ಆಗಿ ಸಲ್ಲಿಸಿದ ಸೇವೆಗಳಿಗೆ" ಹಣ ಇರುತ್ತದೆ ಎಂದು ಅವರು ಹೇಳಿದರು.

ಸಾರಿಗೆ ಶುಲ್ಕದ ವಿಷಯವು ಒಪ್ಪಂದದ ಅತ್ಯಂತ ವಿವಾದಾತ್ಮಕ ಭಾಗಗಳಲ್ಲಿ ಒಂದಾಗಿದೆ. 60 ದಿನಗಳ ಮಾತುಕತೆ ಅವಧಿಯಲ್ಲಿ ಟೋಲ್–ಫ್ರೀ ಮಾರ್ಗವನ್ನು ಕಾಯ್ದುಕೊಳ್ಳಲು ಇರಾನ್ ಒಪ್ಪಿಕೊಂಡಿದ್ದರೂ, ಟೆಹ್ರಾನ್ನ ಅಧಿಕಾರಿಗಳು ದೇಶದ ಪ್ರಬಲ ದೇವಪ್ರಭುತ್ವ ಕಾವಲುಗಾರ ಐಆರ್‌ಜಿಸಿಯೊಂದಿಗೆ ಸಮನ್ವಯ ಸಾಧಿಸುವ ಅಗತ್ಯವಿದೆ ಮತ್ತು ಮಧ್ಯಂತರ ಅವಧಿ ಮುಗಿದ ನಂತರ ಶುಲ್ಕಗಳನ್ನು ವಿಧಿಸಬಹುದು ಎಂದು ಸೂಚಿಸಿದ್ದಾರೆ.

# ಯೋಗಿ ನರೇಂದ್ರನ ಆಧ್ಯಾತ್ಮಿಕ ಮಣ್ಣಿಗೆ, ನಾಯಕ ನರೇಂದ್ರನ ಯೋಗಿಕ ಹೆಜ್ಜೆ

**ಕೊಲ್ಕತ್ತಾ,ಜೂ.21:** ಕೊಲ್ಕತ್ತಾ ಮತ್ತು ಬಂಗಾಳದ ಮಣ್ಣು ದೇಶಕ್ಕೆ, ಜಗತ್ತಿಗೆ, ಸಮಾಜಕ್ಕೆ ಹಾಗೂ ಆಧ್ಯಾತ್ಮಿಕ ಲೋಕಕ್ಕೆ ಕಳೆದ ನೂರಾರು ವರ್ಷಗಳಿಂದ ಅನೇಕ ವೈಚಾರಿಕ ಸಂಪನ್ಮೂಲಗಳನ್ನು, ಸಾಂಸ್ಕೃತಿಕ ನೆಲೆಗಳನ್ನು, ಸಾಹಿತ್ಯಿಕ ಸಾಧಕರನ್ನು ಮತ್ತು ಪ್ರಬುದ್ಧ ಆಧ್ಯಾತ್ಮಿಕ ಮಾರ್ಗದರ್ಶನವನ್ನು ನೀಡಿದೆ.

ಈ ನೆಲದ ಮಹನೀಯ ಆಧ್ಯಾತ್ಮಿಕ ಸಾಧಕರಾದ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಪರಮಹಂಸ ಯೋಗಾನಂದರಿಂದ ಹಿಡಿದು ಖ್ಯಾತ ಸಾಮಾಜಿಕ ಸುಧಾರಕರಾದ ರಾಜಾರಾಮ ಮೋಹನ ರಾಯ್, ಈಶ್ವರಚಂದ್ರ ವಿದ್ಯಾಸಾಗರ, ಮದರ್ ತೆರೇಸಾ, ರವೀಂದ್ರನಾಥ ಠಾಗೋರರವರವರೆಗೆ ಸಮಾಜದ ಸುಧಾರಣೆಗೆ ಮಹತ್ತರ ಕೊಡುಗೆ ನೀಡುತ್ತಾ, ಆಧುನಿಕ ಭಾರತದ ಮಹತ್ತರ ಬೆಳವಣಿಗೆಗೆ ಬುನಾದಿ ಹಾಕಿಕೊಟ್ಟ ರವೀಂದ್ರನಾಥ ಠಾಗೋರ್, ಸರ್ ಜಗದೀಶ್ ಚಂದ್ರ ಬೋಸ್, ಸತ್ಯೇಂದ್ರನಾಥ ಬೋಸ್, ಅಪೇಂದ್ರನಾಥ ಬ್ರಹ್ಮಚಾರಿ, ಸತ್ಯಜಿತ್ ರೇ, ಸುಭಾಷ್‌ಚಂದ್ರ ಬೋಸರವರೆಗೆ ಈ ಪುಣ್ಯಭೂಮಿಯ ಸಾಧಕರು ಜಾಗತಿಕ ಮಟ್ಟದಲ್ಲಿ ಭಾರತದ ವಸುಧೈವ ಕುಟುಂಬದ ಆಶಯವನ್ನು ಬೆಳೆಯುತ್ತಾ, ಬೆಳೆಸುತ್ತಾ, ಬೀರುತ್ತಾ ಬಂದಿದ್ದಾರೆ.

ಆರೋಗ್ಯಕರ ವೃದ್ಧಾಪ್ಯಕ್ಕಾಗಿ ಯೋಗ (Yoga for Healthy Ageing) ಎಂಬ ಧ್ಯೇಯವಾಕ್ಯದೊಂದಿಗೆ ಭಾರತ ಸರ್ಕಾರದ ಅತಿದೊಡ್ಡ ಕಾರ್ಯಕ್ರಮಗಳಲ್ಲಿ ಒಂದಾದ 12ನೇಯ ಅಂತರಾಷ್ಟ್ರೀಯ ಯೋಗ ದಿನವನ್ನು ಆಚರಿಸುವ ಮೂಲಕ ಮಹಾನಗರ ಕೊಲ್ಕತ್ತಾ ಸಾಕ್ಷಿಯಾಗಲಿದ್ದು, ಅಂತಹ ಒಂದು ಯೋಗ ಪಾರಂಪರಿಕ ನಾಡಿನಲ್ಲಿಂದು Celebrate Homecoming of Yoga ಎನ್ನುವ ಧ್ಯೇಯದಡಿಯಲ್ಲಿ ಪಶ್ಚಿಮ ಬಂಗಾಳ ಸರ್ಕಾರದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ದೇಶದ ಯಶಸ್ವಿ ಪ್ರಧಾನ ಮಂತ್ರಿ ನರೇಂದ್ರ ಮೋದಿಜಿಯವರ ನೇತೃತ್ವದಲ್ಲಿ ಭಾಗವಹಿಸುತ್ತಿದ್ದಾರೆ., ಇಡೀ ದೇಶ ಮತ್ತು ಜಗತ್ತು ಇಂದು ಕೊಲ್ಕತ್ತಾದ ಕಡೆಗೆ ತಿರುಗಿ ನೋಡುವಂತೆ ಭಾರತ ಸರ್ಕಾರ ಮತ್ತು ಪಶ್ಚಿಮ ಬಂಗಾಳ ಸರ್ಕಾರಗಳು ಜೊತೆಗೂಡಿ 12ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಹಲವಾರು ವಿಭಿನ್ನ ಪರಿಕಲ್ಪನೆಗಳೊಂದಿಗೆ ಆಚರಿಸುತ್ತಿವೆ.

ಯೋಗ, ಅದರ ಅರ್ಥವೇ ಹೇಳುವಂತೆ ಅದು ಕೇವಲ ದೈಹಿಕ ಕಸರತ್ತು ಅಥವಾ ಆಸನಗಳಲ್ಲ; ಅದು ಪ್ರಕೃತಿ ಮತ್ತು ಮನುಷ್ಯನ ನಡುವಿನ ಆಳವಾದ ಸಂಬಂಧದ ಸಂಕೇತವಾಗಿ ಮನಸ್ಸು ಮತ್ತು ದೇಹದ ಸಮತೋಲನ ಹಾಗೂ ಸಾಮರಸ್ಯಗಳೊಂದಿಗೆ ಜೋಡಿಸಿ, ಆರೋಗ್ಯವನ್ನು ದೀರ್ಘಾಯುಷ್ಯದ ಕಡೆಗೆ ಕೊಂಡೊಯ್ಯುವ ಸಾಧನವಾಗಿದೆ. ಇಂದು ಆಡಳಿತಾತ್ಮಕ ಶಿಸ್ತು ಮೂಡಿಸುವ ಇಂತಹ ಅಂತರರಾಷ್ಟ್ರೀಯ ದಿನಾಚರಣೆಗಳ ಮೂಲಕ ಯುದ್ಧ, ಕಲಹ ಹಾಗೂ ರಾಜಕೀಯ ಗೊಂದಲಗಳಿಂದ ಕಳೆದುಹೋಗಿರುವ ಜಗತ್ತಿನ ಸೂಕ್ಷ್ಮವಾದ ವಿಷಯವಾದ ಸ್ವಾಸ್ಥ್ಯ ವ್ಯವಸ್ಥೆಗೆ, ಜಾಗತಿಕ ಏಕತೆ ಮತ್ತು ಶಾಂತಿಯ ಸಂದೇಶವನ್ನು ನೀಡುತ್ತಿರುವುದು ಇದೇ ಭಾರತೀಯ ಪಾರಂಪರಿಕ ಚಿಕಿತ್ಸಾ ಪರಂಪರೆಯಾದ ಯೋಗ ಪದ್ಧತಿಯಾಗಿದೆ.



> ಇಂದು ವಿಶ್ವದಲ್ಲಿ ದೇಶದ ಯೋಗ ಪದ್ಧತಿಯು ಬೆಳೆಯುತ್ತಿರುವ ಒಂದು ವೇಗ ಜಗತ್ತು ಅದಕ್ಕೆ ಆಕರ್ಷಿಸಿ, ಅಪ್ಪಿಕೊಳ್ಳುತ್ತಿರುವ ರೀತಿಯನ್ನು ನೋಡಿದರೆ ಯೋಗವು ಮುಂದೊಂದು ದಿನ ಜಗತ್ತಿನ ಶಾಂತಿ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಪ್ರಮಾಣದ ಕೊಡುಗೆಯನ್ನು ನೀಡುವಲ್ಲಿ ಯಾವುದೇ ರೀತಿಯ ಸಂದೇಹವಿಲ್ಲ ಇದು ಭಾರತವು ಜಗತ್ತಿಗೆ ನೀಡಿದಂತಹ ಹಲವಾರು ಕೊಡುಗೆಯಲ್ಲಿ ಕೊಡುಗೆಗಳಲ್ಲಿ ಮುಂಚಿನ ಸ್ಥಾನದಲ್ಲಿ ನಿಲ್ಲಬಹುದು ಎನ್ನಬಹುದು.

**ಯೋಗ ದಿನದ ಹಿನ್ನೆಲೆ:** ನರೇಂದ್ರ ಮೋದಿಯವರು 2014 ರಲ್ಲಿ ದೇಶದ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮಾಡಿದ ಮೊದಲ ಕೆಲಸ ಎಂದರೆ ಸಾವಿರಾರು ವರ್ಷಗಳ ಅಭ್ಯಾಸ, ಶಕ್ತಿ, ಇತಿಹಾಸ, ಹಿನ್ನೆಲೆಗಳಿಂದ ಕೂಡಿದ ದೇಶೀಯ ಪಾರಂಪರಿಕ ಚಿಕಿತ್ಸಾ ಪದ್ಧತಿಯಾದ ಯೋಗವನ್ನು ವಿಶ್ವಸಂಸ್ಥೆಯ ಮೂಲಕ ಅಂತರಾಷ್ಟ್ರೀಯ ಮಟ್ಟಕ್ಕೆ ಭಾರತದ ಒಂದು ಗುರುತನ್ನಾಗಿ ತೆಗೆದುಕೊಂಡು ಹೋಗಲು ಜೂನ್ 21ನ್ನು ಅಂತರಾಷ್ಟ್ರೀಯ ಯೋಗ ದಿವಸವನ್ನಾಗಿ ಗುರುತಿಸಿ ಅದಕ್ಕೆ ಒಂದು ವೈಶ್ವಿಕ ಮನ್ನಣೆ ನೀಡಬೇಕೆಂದು ಸೆಪ್ಟೆಂಬರ್ 27, 2014ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ 69ನೇ ಅಧಿವೇಶನದ ಉದ್ಘಾಟನಾ ಭಾಷಣದಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಪರಿಕಲ್ಪನೆಯನ್ನು ಪ್ರಸ್ತಾಪಿಸಿದರು. ಡಿಸೆಂಬರ್ 11, 2014ರಂದು, ವಿಶ್ವಸಂಸ್ಥೆಯು 69/131 ಈ ನಿರ್ಣಯವನ್ನು ಅಂಗೀಕರಿಸಿತು. ಜೂನ್ 21 ಅನ್ನು ದಾಖಲೆಯ 175 ಸದಸ್ಯ ರಾಷ್ಟ್ರಗಳ ಬೆಂಬಲದೊಂದಿಗೆ ಅಂತರರಾಷ್ಟ್ರೀಯ ಯೋಗ ದಿನವೆಂದು ಘೋಷಿಸಿತು. ಯಾವುದೇ ವಿರೋಧವಿಲ್ಲದೆ ಯೋಗಪರವಾಗಿ ಬಂದ ಜಾಗತಿಕ ದೇಶಗಳ ಬೆಂಬಲ ಜಗತ್ತು ಅರಿತಿರುವ ಯೋಗದ ಮಹತ್ವವನ್ನು ತೋರಿಸುತ್ತದೆ. ಅಲ್ಲಿಂದ ಇಲ್ಲಿಯವರೆಗೂ ಕಳೆದ 12 ವರ್ಷಗಳ 12 ಯೋಗ ದಿನಾಚರಣೆಯ ಆವೃತ್ತಿಗಳು ದೇಶದ ಪ್ರಮುಖ ನಗರಗಳಲ್ಲಿ ಹಾಗೂ ಅಂತರರಾಷ್ಟ್ರೀಯ ಮಟ್ಟದ ಬಹುತೇಕ ದೇಶಗಳ ರಾಜಧಾನಿಗಳು, ಐತಿಹಾಸಿಕ ಕಟ್ಟಡಗಳು, ಪಾರಂಪರಿಕ ನೆಲೆಗಳು ಮತ್ತು ಕಚೇರಿಗಳಲ್ಲಿ ಭಾರತದ ಯೋಗವನ್ನು ಇಂದು ಪ್ರಸಾರ, ಪ್ರಚಾರ ಹಾಗೂ ಭಾರತದ ಪಾರಂಪರಿಕ ಚಿಕಿತ್ಸಾ ಪದ್ಧತಿಯಾಗಿ ಯಶಸ್ವಿಯಾಗಿ ಕೊಂಡೊಯ್ಯುತ್ತಿವೆ.

**ಪ್ರಮುಖ ಆದಾಯ ಮೂಲವಾಗಿ ಯೋಗ:** ಭಾರತೀಯ ಯೋಗವು ಇಂದು ಜಾಗತಿಕ ಮಟ್ಟದಲ್ಲಿ ಬೃಹತ್ ಆರ್ಥಿಕ ಮತ್ತು ಸಮಗ್ರ ಆರೋಗ್ಯ ಆಂದೋಲನವಾಗಿ ಮಾರ್ಪಟ್ಟಿದ್ದು, ಜಾಗತಿಕ ಯೋಗ ಮಾರುಕಟ್ಟೆ ಮೌಲ್ಯವು ಅಂದಾಜು 125.82 ಶತಕೋಟಿ ಡಾಲರ್ (ಸುಮಾರು 10.5 ಲಕ್ಷ ಕೋಟಿ) ತಲುಪುವ ಮುನ್ಸೂಚನೆ ಹೊಂದಿದೆ ಹಾಗೂ ಭಾರತೀಯ ಯೋಗ ಮಾರುಕಟ್ಟೆಯು 42,000 ಕೋಟಿಗೆ ವಿಸ್ತರಿಸಿದೆ. ಯುವ ಪೀಳಿಗೆ ಸೇರಿದಂತೆ ಸಾರ್ವಜನಿಕರಲ್ಲಿ ಯೋಗದ ಆಸಕ್ತಿ ಗಣನೀಯವಾಗಿ ಹೆಚ್ಚುತ್ತಿರುವುದಕ್ಕೆ ಸಾಕ್ಷಿಯೆಂಬಂತೆ, ಕಳೆದ ವರ್ಷದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಂದು ಭಾರತದಾದ್ಯಂತ 23 ಕೋಟಿಗೂ ಅಧಿಕ ಜನ ಪಾಲ್ಗೊಂಡು ಯೋಗ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ್ದರು. ಇದರೊಂದಿಗೆ, ಜಗತ್ತಿನಾದ್ಯಂತ 191ಕ್ಕೂ ಹೆಚ್ಚು ದೇಶಗಳ 1,300ಕ್ಕೂ ಅಧಿಕ ಪ್ರಮುಖ ಸ್ಥಳಗಳಲ್ಲಿ 26 ಕೋಟಿಗೂ ಹೆಚ್ಚು ಜನ ಈ ಯೋಗ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ, ಸಾಮೂಹಿಕ ಯೋಗ ಪ್ರದರ್ಶನ ಹಾಗೂ ಸೂರ್ಯ ನಮಸ್ಕಾರಗಳಲ್ಲಿ ಬೃಹತ್ ಗಿನ್ನೆಸ್ ವಿಶ್ವ ದಾಖಲೆಗಳನ್ನು ನಿರ್ಮಿಸಿ ಭಾರತದ ಸಾಂಸ್ಕೃತಿಕ ಹಿರಿಮೆಯನ್ನು ಜಾಗತಿಕ ವೇದಿಕೆಯಲ್ಲಿ ಮತ್ತೊಮ್ಮೆ ಸಾಬೀತುಪಡಿಸಿದ್ದಾರೆ.

ಕೇಂದ್ರ ಆಯುಷ್ಯ ಮಂತ್ರಾಲಯ ಮತ್ತು ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ ಇವುಗಳ ಜಂಟಿ ಆಯೋಜನೆಗಳೊಂದಿಗೆ ಮಾರ್ಚ್ 13 ರಂದು ನವದೆಹಲಿಯ ವಿಜ್ಞಾನ ಭವನದಲ್ಲಿ ಉದ್ಘಾಟನೆಗೊಂಡ ಅಂತಾರಾಷ್ಟ್ರೀಯ ಯೋಗ ದಿನದ 100 ದಿನಗಳ ಮುನ್ನಾದಿನದಿಂದ 'ಯೋಗ ಮಹೋತ್ಸವವು' ಪ್ರತಿದಿನ ದೇಶದ ಒಂದೊಂದು ನಗರ, ಸಂಸ್ಥೆಗಳಲ್ಲಿ ಆಚರಿಸುವ ಮೂಲಕ ಈ ಅಭಿಯಾನವು ಪ್ರಸ್ತುತ ಕೊಲ್ಕತ್ತಾದಲ್ಲಿ 'ಆರೋಗ್ಯಕರ ವಯೋವೃದ್ಧಿ ಮತ್ತು ಸಮಗ್ರ ಸ್ವಾಸ್ಥ್ಯ' (Yoga for Healthy Ageing) ಎಂಬ ವಿನೂತನ ಪರಿಕಲ್ಪನೆಯೊಂದಿಗೆ ಮುಕ್ತಾಯ ಹಂತ ತಲುಪಿದೆ. ಈ ಬಾರಿಯ ಜಾಗತಿಕ ಅಭಿಯಾನದಲ್ಲಿ ಭಾರತ ಸರ್ಕಾರ, ದೇಶದ ಎಲ್ಲ ರಾಜ್ಯ ಸರ್ಕಾರಗಳು, ಸೇನಾ ವಿಭಾಗಗಳು, ರಾಯಭಾರಿ ಕಚೇರಿಗಳು, ಖಾಸಗಿ ಸಂಸ್ಥೆಗಳು ಈ ಒಂದು ವೈಶ್ವಿಕ ಆಂದೋಲನದಲ್ಲಿ ಭಾಗವಹಿಸಿ ಬೃಹತ್ ಯಶಸ್ವಿಗೆ ತಮ್ಮ ಪಾತ್ರ ಮೆರೆಯಲಿವೆ. ಸ್ವತಃ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರು ದೇಶದ ಪ್ರತಿ ಪಂಚಾಯತಿಗಳ ಮುಖ್ಯಸ್ಥರಿಗೆ ಪತ್ರ ಬರೆಯುವ ಮೂಲಕ ಹರಘರ್ ಯೋಗ ತಲುಪುವ ಸಂದೇಶ ನೀಡಿದ್ದಾರೆ. ಅದರೊಂದಿಗೆ ಮೋದಿಯವರು ಕಳೆದವಾರ ಅಹಮದಾಬಾದಿನಲ್ಲಿ ಆಯೋಜಿಸಲಾಗಿದ್ದ ಅಂತರಾಷ್ಟ್ರೀಯ ಯೋಗಾಸನ ಒಲಂಪಿಕ್ ಸ್ಪರ್ಧೆಯಲ್ಲಿ ಪದಕಗಳನ್ನು ಗೆದ್ದ ಯೋಗಪಟುಗಳೊಂದಿಗೆ ಕೊಲ್ಕತ್ತಾದ ರೆಡ್ ರೋಡಿನಲ್ಲಿ ಭಾರತ ಸರ್ಕಾರದ ಆಯುಷ್ಯ ಮಂತ್ರಾಲಯದಿಂದ ರೂಪಿಸಲಾದ 45 ನಿಮಿಷಗಳ ಕಾಲ ಸಾಮಾನ್ಯ ಯೋಗ ಶಿಷ್ಟಾಚಾರವನ್ನು ಅಭ್ಯಾಸ ಮಾಡಲಿದ್ದಾರೆ. ಒಟ್ಟಾರೆಯಾಗಿ ಕೊಲ್ಕತ್ತಾದಲ್ಲಿ ಆಯೋಜಿಸಲಾಗಿರುವ ಬೃಹತ್ ಕಾರ್ಯಕ್ರಮದಲ್ಲಿ ದೇಶೀಯ ಮತ್ತು ವಿದೇಶಿ ಪ್ರತಿನಿಧಿಗಳ ಬೃಹತ್ ಸಹಭಾಗಿತ್ವದೊಂದಿಗೆ 'ಅತಿ ಹೆಚ್ಚು ದೇಶಗಳ ಜನರ ಸಾಮೂಹಿಕ ಯೋಗ' ಹಾಗೂ ಹೂಗ್ಲಿ ನದಿಯಲ್ಲಿ 500 ನೂರಕ್ಕೂ ಅಧಿಕ ದೋಣಿಯಲ್ಲಿ ಒಂದೇ ಸಮಯಕ್ಕೆ ಯೋಗ ಮಾಡುವ ಮೂಲಕ ವಿಶ್ವದಾಖಲೆ ನಿರ್ಮಿಸುವ ಗುರಿಯಿದೆ. ಇದು ಭಾರತೀಯ ಯೋಗ ಪರಂಪರೆಯ ಹಿರಿಮೆಯನ್ನು ಜಾಗತಿಕ ಮಟ್ಟದಲ್ಲಿ ಮತ್ತೊಮ್ಮೆ ಸಾಬೀತುಪಡಿಸಲಿದೆ.

- **ಯಲ್ಲಾಲಿಂಗ ಕೊಪ್ಪದ** । ಮೊರಾರ್ಜಿ ದೇಸಾಯಿ ರಾಷ್ಟ್ರೀಯ ಯೋಗ ಸಂಸ್ಥೆ, ಆಯುಷ್ಯ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ

### ಜೈನಕಾಶಿ ಮೂಡಬಿದಿರೆ ಇದರ ಸ್ವಸ್ತಿಶ್ರೀ ಭಟ್ಟಾರಕ ಭವನದಲ್ಲಿ ಯೋಗ ಪ್ರಾತ್ಯಕ್ಷಿಕೆ

# ಯೋಗಾಸನಗೈದ ಡಾ.ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾಸ್ವಾಮೀಜಿ

**ಮುಂಬಯಿ, ಜೂ.21:** ಅಂತರಾಷ್ಟ್ರೀಯ ಯೋಗ ದಿನದ ಪ್ರಯುಕ್ತ ಧವಳತ್ರಯ ಜೈನ ಕಾಶಿ ಟ್ರಸ್ಟ್ ಹಾಗೂ ಶ್ರೀ ಜೈನ ಮಠ ಮೂಡುಬಿದಿರೆ ವತಿಯಿಂದ ವಿಶ್ವ ಯೋಗ ದಿನಾಚರಣೆ ನಡೆಸಲಾಯಿತು. ಆ ನಿಮಿತ್ತ ಭಾನುವಾರ ಶ್ರೀ ದಿಗಂಬರ ಜೈನಮಠ, ಜೈನಕಾಶಿ ಮೂಡಬಿದಿರೆ ಮಹಾಕ್ಷೇತ್ರದ ಜೈನ ಮಹಾಸಂಸ್ಥಾನದ ಪೀಠಾಧ್ಯಕ್ಷ ಭಾರತ ಭೂಷಣ ಜಗದ್ಗುರು ಸ್ವಸ್ತಿಶ್ರೀ ಜಗದ್ಗುರು ಸ್ವಸ್ತಿಶ್ರೀ ಡಾ। ಭಟ್ಟಾರಕ ಚಾರುಕೀರ್ತಿ ಪಂಡಿತಾಚಾರ್ಯವರ್ಯ ಮಹಾ ಸ್ವಾಮೀಜಿ ಅವರ ನೇತೃತ್ವದಲ್ಲಿ ಜೈನಕಾಶಿ ಮೂಡಬಿದಿರೆ ಇಲ್ಲಿನ ಜೈನ ಮಠದ ಸ್ವಸ್ತಿಶ್ರೀ ಭಟ್ಟಾರಕ ಭವನದಲ್ಲಿ ಯೋಗ ನೆರವೇರಿಸಿದರು.

ದೆಹಲಿ ಬೆಂಗಳೂರು ಮುಂತಾದ ಕಡೆಯಿಂದ ಬಂದ ಯಾತ್ರಾರ್ಥಿಗಳು ಶ್ರೀಗಳೊಂದಿಗೆ ಯೋಗ ಅಭ್ಯಾಸ ನಡೆಸಿದರು. ಈ ಸಂಧರ್ಭ ಸ್ವಾಮೀಜಿ ವಿವಿಧ ಆಸನಗಳ ಮಾಹಿತಿ ನೀಡಿದರು. ಪದ್ಮಾಸನಾ, ಪರ್ವತಾಸನ, ಅನುಲೋಮ ವಿಲೋಮ ತಿಳಿಸಿ, ಉಚ್ಚ ಅಭ್ಯಾಸ ಆಸನಗಳಾದ ಮಯೂರ ಆಸನ, ಗೋರಕ್ಷಾ ಆಸನ, ಗರುಡಾಸನ, ಬ್ರಹ್ಮ ಚರ್ಯ ಆಸನ, ರಾಜ ಶೀರ್ಷಾಸನಾ, ಸರ್ವಾಂಗಸನ ಭಂಗಿಗಳ ಪ್ರಾತ್ಯಕ್ಷಿಕೆ ಮಾಡಿ ತೋರಿಸಿದರು.



ಯೋಗ ಮೂಲಕ ದೇಹ ಮನಸ್ಸುಗಳ ಹೊಂದಾಣಿಕೆ ಹಾಗೂ ಇವುಗಳಿಂದ ಶಾಂತಿ, ಆರೋಗ್ಯ ಲಭ್ಯವಾಗುದು. ಲೋಕ ಕಲ್ಯಾಣ ಭಾವನೆ ಅಡಗಿರುವ ಯೋಗ ಪ್ರತಿನಿತ್ಯ ಹತ್ತು ನಿಮಿಷಗಳಾದರೂ ಯೋಗ, ವ್ಯಾಯಾಮ ಅಭ್ಯಾಸ ಮಾಡಿ ಎಂದು ಡಾ। ಭಟ್ಟಾರಕ ಚಾರುಕೀರ್ತಿಶ್ರೀಗಳು ಸಲಹಿದರು.

ಕಳೆದ ಎರಡು ದಿನಗಳಿಂದ ಯೋಗ ಶಿಬಿರ ನಡೆಸಿದ್ದು ಸ್ವಸ್ತಿಶ್ರೀ ಜೈನ ವಸತಿ ಪದವಿ ಪೂರ್ವ ಕಾಲೇಜ್‌ನ ವಿದ್ಯಾಥಿಗಳು ಬೆಳಿಗ್ಗೆ ಒಂದು ಗಂಟೆ ಯೋಗ ಶಿಬಿರದಲ್ಲಿ ಮತ್ತಿತರರು ಭಾಗವಹಿಸಿದ್ದು, ಪ್ರಾಂಶುಪಾಲರು ಹಾಗೂ ಅಧ್ಯಾಪಕ ವೃಂದವು ಯೋಗ ಅಭ್ಯಾಸ ನಡೆಸಿದರು.

# ವಸಂತ್ ವಿಹಾರ್ ಚಾರಿಟಬಲ್ ಟ್ರಸ್ಟ್‌ನ ಡ್ಬ್ಲ್ಯುಇ ಕ್ಲಬ್ ತಿಲಕ್ ನಗರದ ಬಿಎಂಸಿ ಶಾಲೆಗೆ ಕಂಪ್ಯೂಟರ್ ಕೊಡುಗೆ

**ಮುಂಬೈ. ಜು.21:** 2026–27ನೇ ಸಾಲಿನ ಶಾಲಾ ಉದ್ಘಾಟನೆಗೆ ವಸಂತ್ ವಿಹಾರ್ ಚಾರಿಟೇಬಲ್ ಟ್ರಸ್ಟ್‌ನ ಡ್ಬ್ಲ್ಯುಇ ಕ್ಲಬ್ ಸದಸ್ಯರನ್ನು ಆಹ್ವಾನಿಸಲಾಯಿತು. ಆನ್ ಆನ್ ಕೊನೆಯದು ಸೋಮವಾರ (ಜೂನ್.15) ಬಿಎಂಸಿ ಶಾಲೆಯಲ್ಲಿ ತಿಲಕ ನಗರ್ ಫಾರ್ ಶಾಲಾ ಪ್ರವೇಶೋತ್ಸವದಲ್ಲಿ ಶಾಲಾ ಸಿಬ್ಬಂದಿ ಮತ್ತು ಶಿಕ್ಷಕರು ಮನವಿ/ವಿನಂತಿಯನ್ನು ಸಲ್ಲಿಸಿದರು, ವಸಂತ್ ವಿಹಾರ್‌ನ ನಮ್ಮ ಡ್ಬ್ಲ್ಯುಇ ಕ್ಲಬ್ ಕಂಪ್ಯೂಟರ್ ಮತ್ತು ಪ್ರಿಂಟರ್ ಅನ್ನು ಪ್ರಾಯೋಜಿಸಲು/ದಾನ ಮಾಡಲು ಸಾಧ್ಯವಾದರೆ, ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಯಾವುದೇ ಪತ್ರ ಅಥವಾ ದಾಖಲೆಯನ್ನು ಮುದ್ರಿಸಲು 10 ನಿಮಿಷ ಪ್ರಯಾಣಿಸಬೇಕಾಗುತ್ತದೆ.

4 ರಿಂದ 5 ದಿನಗಳಲ್ಲಿ, ಕ್ಲಬ್ ಚೆಂಬೂರಿನ ತಿಲಕ್ ನಗರದ ಬಿಎಂಸಿ ಶಾಲೆಗೆ ಕಂಪ್ಯೂಟರ್, ಪ್ರಿಂಟರ್ ಮತ್ತು ಎ 4 ಗಾತ್ರದ ಕಾಗದದ ಬಂಡಲ್ ಅನ್ನು ಕೊಡುಗೆಯಾಗಿ ನೀಡಿತು. ಇದನ್ನು ವಸಂತ ವಿಹಾರ್‌ನ ಡ್ಬ್ಲ್ಯುಇ ಕ್ಲಬ್‌ನ ಸದಸ್ಯರೂ ಆಗಿರುವ ಡ್ಬ್ಲ್ಯುಇ ಜಿಲ್ಲಾಧ್ಯಕ್ಷ 2025–26 ಡ್ಬ್ಲ್ಯುಇ ವರ್ಷಾ ವೋರಾ ಉದ್ಘಾಟಿಸಿದರು ಎಂದು ಕ್ಲಬ್ ಅಧ್ಯಕ್ಷ ಡ್ಬ್ಲ್ಯುಇ ಹಿರಾಲ್ ಸಾಂಘ್ವಿ ಹೆಮ್ಮೆಯಿಂದ ಹೇಳುತ್ತಾರೆ. ಸದಸ್ಯರಾದ ಡ್ಬ್ಲ್ಯುಇ ಪಲ್ಲವಿ ಚಂದ್ನಾ, ಡ್ಬ್ಲ್ಯುಇಲೀಲಾದೇವಿ ಮತ್ತು ಡ್ಬ್ಲ್ಯುಇ ಮಾಲಾ ಶೆಟ್ಟಿ ಪಿಡಿಪಿ, ಪ್ರಾಯೋಜಕರನ್ನು ಪಡೆದರು: 1. ಮಾಲಾ ಶೆಟ್ಟಿ ಅವರ ಪುತ್ರ ಸರೋಷ್ ಶೆಟ್ಟಿ ಮತ್ತು 2ರ ಸಹೋದ್ಯೋಗಿ ವಿಷ್ಣು ವೇಲ್ಕುರು ಯುಎಸ್‌ಎ, ಯೋಜನೆಯನ್ನು ಸಂಯೋಜಿಸಿದ ರಾಧಿಕಾ ನಾರಾಯಣ್, ಯುಎಸ್‌ಎ, ರೂ. 21780/– ವೆಚ್ಚವಾಗಿದೆ. ಸಿಬ್ಬಂದಿ ಕೂಡ ಉದ್ಘಾಟನೆಯಲ್ಲಿ ಭಾಗವಹಿಸಿದರು.







ನಾವು ಮಾಲಾ ಶೆಟ್ಟಿ ಈ ಯೋಜನೆಯನ್ನು ಹಂಚಿಕೊಳ್ಳಲು ಸಂತೋಷ, ಸಂತೋಷ ಮತ್ತು ಹೆಮ್ಮೆಪಡುತ್ತೇವೆ: ತಿಲಕ್ ನಗರದ ಬಿಎಂಸಿ ಶಾಲೆಯಲ್ಲಿ ಕಂಪ್ಯೂಟರ್ ಮತ್ತು ಪ್ರಿಂಟರ್ ಅನ್ನು ದಾನ ಮಾಡುವುದು, ಅವರ ತಂದೆ ದಿವಂಗತ ಕೆ.ಎಂ. ಆಳ್ವಾ 1956 ರಲ್ಲಿ ಬಿಎಂಸಿ ಕಟ್ಟಡ ನಿರ್ಮಾಣವಾದಾಗ ಕನ್ನಡ ಮಾಧ್ಯಮವನ್ನು ಪ್ರಾರಂಭಿಸಿದರು ಜೊತೆಗೆ ಸುಧಾರಣೆಗೆ ಸಾಕಷ್ಟು ಕೆಲಸ ಮಾಡಿದರು; ನಮ್ಮದೇ ಆದ ಕೋಟ್ಯಾನ್ ವಿದ್ಯಾರ್ಥಿಗಳಿಗೆ ಕಲಿಸುವ ಮೂಲಕ ಭಾನುವಾರ ಹಿಂದಿ ತರಗತಿಗಳನ್ನು ಸಹ ಪ್ರಾರಂಭಿಸಿದರು, ಇಂದು ಈ ದೇಣಿಗೆಯನ್ನು ಅವರ ಸ್ಮರಣಾರ್ಥ ಮಾಡಲಾಗಿದೆ. ಸುತ್ತಲೂ ಇರುವ ಕ್ಲಬ್.

# ವೈವಿಧ್ಯದಲ್ಲಿ ಏಕತೆ ಭಾರತದ ಅತ್ಯಂತ ದೊಡ್ಡಶಕ್ತಿ: ರಾಜ್ಯಪಾಲ ಗೆಹ್ಲೋತ್

**ಬೆಂಗಳೂರು, ಜೂ.21:** 'ಏಕ್ ಭಾರತ್ ಶ್ರೇಷ್ಠ ಭಾರತ್' ಪರಿಕಲ್ಪನೆಯಡಿ ಆಯೋಜಿಸಲಾಗುವ ಕಾರ್ಯಕ್ರಮಗಳು ರಾಷ್ಟ್ರೀಯ ಏಕತೆಯನ್ನು ಬಲಪಡಿಸುವುದರ ಜೊತೆಗೆ ವಿವಿಧ ರಾಜ್ಯಗಳ ನಡುವಿನ ಸಾಂಸ್ಕೃತಿಕ ವಿನಿಮಯವನ್ನು ಉತ್ತೇಜಿಸುತ್ತವೆ ಎಂದು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋತ್ ಅವರು ಹೇಳಿದ್ದಾರೆ.

ಲೋಕಭವನದ ಸಮ್ಮೇಳನ ಸಭಾಂಗಣದಲ್ಲಿ ಆಯೋಜಿಸಲಾದ ಬಿಹಾರ, ಒಡಿಶಾ, ಹಿಮಾಚಲ ಪ್ರದೇಶ, ಗುಜರಾತ್, ಮಹಾರಾಷ್ಟ್ರ, ಸಿಕ್ಕಿಂ, ಗೋವಾ, ತೆಲಂಗಾಣ ಹಾಗೂ ಪಶ್ಚಿಮ ಬಂಗಾಳ ರಾಜ್ಯಗಳ ಸ್ಥಾಪನಾ ದಿನದ ಸ್ಮರಣೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಈ ರಾಜ್ಯಗಳ ಜನತೆಗೆ ಶುಭಾಶಯಗಳನ್ನು ಕೋರಿದ ರಾಜ್ಯಪಾಲರು, ವಿವಿಧ ರಾಜ್ಯಗಳ ಸ್ಥಾಪನಾ ದಿನಗಳನ್ನು ಇತರ ರಾಜ್ಯಗಳಲ್ಲಿಯೂ ಆಚರಿಸುವ ಪರಂಪರೆಯನ್ನು ಉತ್ತೇಜಿಸಿರುವ ಪ್ರಧಾನಮಂತ್ರಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಕೃತಜ್ಞತೆ ಸಲ್ಲಿಸಿದರು. ಈ ಉಪಕ್ರಮವು ಸಾಮಾಜಿಕ ಏಕೀಕರಣ ಮತ್ತು ಸಾಂಸ್ಕೃತಿಕ ಆದಾನ–ಪ್ರದಾನಕ್ಕೆ ಉತ್ತೇಜನ ನೀಡಿದೆ ಎಂದು ಅವರು ಹೇಳಿದರು.



'ಏಕ್ ಭಾರತ್ ಶ್ರೇಷ್ಠ ಭಾರತ್' ಪರಿಕಲ್ಪನೆಯು ಪರಸ್ಪರ ಅರ್ಥೈಸಿಕೊಳ್ಳುವಿಕೆ ಮತ್ತು ರಾಷ್ಟ್ರೀಯ ಏಕತೆಯ ಭಾವನೆಯನ್ನು ಮತ್ತಷ್ಟು ಗಟ್ಟಿಗೊಳಿಸುತ್ತದೆ. ಭಾರತದ ಪ್ರತಿಯೊಂದು ರಾಜ್ಯವೂ ತನ್ನದೇ ಆದ ವಿಶಿಷ್ಟ ಭಾಷೆ, ಸಂಸ್ಕೃತಿ, ಪರಂಪರೆ ಹಾಗೂ ಜನಪದ ಕಲೆಗಳನ್ನು ಹೊಂದಿದ್ದು, ಈ ವೈಶಿಷ್ಟ್ಯ ಭಾರತೀಯ ಸಂಸ್ಕೃತಿಯ ವೈವಿಧ್ಯ ಮತ್ತು ಸಮೃದ್ಧಿಯನ್ನು ಪ್ರತಿಬಿಂಬಿಸುತ್ತವೆ ಎಂದು ಅವರು ಅಭಿಪ್ರಾಯಪಟ್ಟರು.

'ಬಿಹಾರವು ಜ್ಞಾನ, ಶಿಕ್ಷಣ ಮತ್ತು ಆಧ್ಯಾತ್ಮಿಕ ಪರಂಪರೆಯ ತಾಣವಾಗಿದ್ದು, ಒಡಿಶಾ ತನ್ನ ಪ್ರಾಚೀನ ಸಾಂಸ್ಕೃತಿಕ ಪರಂಪರೆ ಹಾಗೂ ಜಗನ್ನಾಥರ ಪವಿತ್ರ ಸಂಪ್ರದಾಯಕ್ಕಾಗಿ ಪ್ರಸಿದ್ಧವಾಗಿದೆ. ಹಿಮಾಚಲ ಪ್ರದೇಶವು ತನ್ನ ನೈಸರ್ಗಿಕ ಸೌಂದರ್ಯ ಹಾಗೂ ಪರಿಸರ ಸಂರಕ್ಷಣೆಯ ಬದ್ಧತೆಗೆ ಹೆಸರುವಾಸಿಯಾಗಿದೆ. ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳು ದೇಶದ ಆರ್ಥಿಕ, ಕೈಗಾರಿಕಾ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮಹತ್ತರ ಕೊಡುಗೆ ನೀಡಿವೆ. ಸಿಕ್ಕಿಂ ಸುಸ್ಥಿರ ಅಭಿವೃದ್ಧಿ ಮತ್ತು ಸಾವಯವ ಕೃಷಿ ಕ್ಷೇತ್ರಗಳಲ್ಲಿ ಮಾದರಿ ರಾಜ್ಯವಾಗಿದ್ದು, ಗೋವಾ ತನ್ನ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಪ್ರವಾಸೋದ್ಯಮದ ಮೂಲಕ ವಿಶ್ವದ ಗಮನ ಸೆಳೆದಿದೆ. ತೆಲಂಗಾಣ ಮಾಹಿತಿ ತಂತ್ರಜ್ಞಾನ, ನವೋದ್ಯಮ ಮತ್ತು ಕೃಷಿ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ್ದು, ಪಶ್ಚಿಮ ಬಂಗಾಳವು ಸಾಹಿತ್ಯ, ಕಲೆ, ವಿಜ್ಞಾನ ಹಾಗೂ ರಾಷ್ಟ್ರೀಯ ಜಾಗೃತಿಗೆ ನೀಡಿರುವ ಅಪೂರ್ವ ಕೊಡುಗೆಗಳ ಮೂಲಕ ದೇಶಕ್ಕೆ ಕೀರ್ತಿ ತಂದಿದೆ' ಎಂದು ಹೇಳಿದರು.

'2047ರೊಳಗೆ ವಿಕಸಿತ ಭಾರತದ ಗುರಿಯನ್ನು ಸಾಧಿಸಲು ಎಲ್ಲಾ ರಾಜ್ಯಗಳ ಸಹಕಾರ ಮತ್ತು ಸಮನ್ವಯ ಅತ್ಯಗತ್ಯ ಎಂದು ರಾಜ್ಯಪಾಲ ಗೆಹ್ಲೋತ್ ಹೇಳಿದರು. ದೇಶದ ಅಭಿವೃದ್ಧಿಯಲ್ಲಿ ಪ್ರತಿಯೊಂದು ರಾಜ್ಯವೂ ಮಹತ್ವದ ಪಾತ್ರ ವಹಿಸುತ್ತಿದ್ದು, ಸಮರ್ಥ ಮತ್ತು ಶಕ್ತಿಶಾಲಿ ಭಾರತ ನಿರ್ಮಾಣಕ್ಕೆ ಎಲ್ಲರೂ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು' ಎಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ವಿವಿಧ ರಾಜ್ಯಗಳ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಅನಾವರಣಗೊಳಿಸುವ ವರ್ಣರಂಜಿತ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಪ್ರಗತಿ ಮತ್ತು ನೇಹಾ ಅವರ ಪ್ರಾರ್ಥನಾ ನೃತ್ಯ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.

ಬಳಿಕ ಪಶ್ಚಿಮ ಬಂಗಾಳವನ್ನು ಪ್ರತಿನಿಧಿಸುವ ಧುನೂಚಿ ನೃತ್ಯ, ರವೀಂದ್ರ ಸಂಗೀತ, ರಬೀಂದ್ರಿಕ್ ಬಂಗಾಳ ನೃತ್ಯ ಹಾಗೂ ಕಥಕ್ ಯುಗಳ ನೃತ್ಯ, ಒಡಿಶಾದ ಒಡಿಸ್ಸಿ ನೃತ್ಯ ಮತ್ತು ಸಂಬಲ್ಪುರಿ ನೃತ್ಯ, ಹಿಮಾಚಲ ಪ್ರದೇಶದ ಎಕೋಸ್ ಆಫ್ ಹಿಲ್ಸ್ ಹಾಗೂ ಏಕ್ ಪಹಾಡಿ ವಿರಾಸತ್, ತೆಲಂಗಾಣದ ಜಾನಪದ ನೃತ್ಯ ಮತ್ತು ಸಾಂಪ್ರದಾಯಿಕ ಗೀತೆ, ಮಹಾರಾಷ್ಟ್ರದ ಸಾಂಪ್ರದಾಯಿಕ ಗೀತೆ, ಲಾವಣಿ ನೃತ್ಯ ಹಾಗೂ ಢೋಲ ತಾಶಾ ಪ್ರದರ್ಶನಗಳು ಪ್ರೇಕ್ಷಕರ ಮೆಚ್ಚುಗೆ ಗಳಿಸಿದವು.

ರಾಜ್ಯಗಳ ವೈವಿಧ್ಯಮಯ ಕಲೆ, ಸಂಸ್ಕೃತಿ ಮತ್ತು ಪರಂಪರೆಯನ್ನು ಅನಾವರಣಗೊಳಿಸಿದ ಕಲಾವಿದರ ಅದ್ಭುತ ಪ್ರದರ್ಶನಗಳನ್ನು ಶ್ಲಾಘಿಸಿದ ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರು, ಎಲ್ಲ ಕಲಾವಿದರಿಗೆ ಹಾಗೂ ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದ ಸಂಘಟಕರಿಗೆ ಅಭಿನಂದನೆ ಸಲ್ಲಿಸಿದರು.



12ನೇ ಅಂತರರಾಷ್ಟ್ರೀಯ ಯೋಗ ದಿನಾಚರಣೆಯ ಅಂಗವಾಗಿ ಭಾನುವಾರ ಬೆಂಗಳೂರಿನ ವಿಧಾನಸೌಧದಲ್ಲಿ ಸಾವಿರಾರು ಯೋಗಾಸಕ್ತರು ಮತ್ತು ಉತ್ಸಾಹಿಗಳು ಪ್ರದರ್ಶನ ನೀಡಿದರು.

# ಕರಾವಳಿ – ಮಲೆನಾಡು ಪ್ರವಾಸೋದ್ಯಮ ಪ್ರಚಾರ ರಾಯಭಾರಿಯಾಗಿ ರಿಷಬ್ ಶೆಟ್ಟಿ: ನೆಟ್ಟಿಗರಿಂದ ತೀವ್ರ ಆಕ್ಷೇಪ

**ಬೆಂಗಳೂರು,ಜೂ.21:** ಕರಾವಳಿ ಮತ್ತು ಮಲೆನಾಡು ಪ್ರವಾಸೋದ್ಯಮ ಪ್ರಚಾರ ರಾಯಭಾರಿಯಾಗಿ ನಟ ರಿಷಬ್ ಶೆಟ್ಟಿ ಅವರನ್ನು ರಾಜ್ಯ ಸರ್ಕಾರ ನೇಮಕ ಮಾಡಿರುವುದು ಭಾರೀ ಟೀಕೆಗೆ ಗುರಿಯಾಗಿದೆ. ರಿಷಬ್ ಶೆಟ್ಟಿ ಅವರು ಬಹಿರಂಗವಾಗಿಯೇ ಕಾಂಗ್ರೆಸ್ ನಾಯಕರನ್ನು ಟೀಕಿಸಿರುವಾಗ ಡಿ.ಕೆ. ಶಿವಕುಮಾರ್ ನೇತೃತ್ವದ ಸರ್ಕಾರ ಇಂತಹ ನಿರ್ಧಾರ ತೆಗೆದುಕೊಂಡಿರುವುದು ನಗೆಪಾಟಲಿಗೆ ಈಡಾಗಿದೆ.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಡಿ. ಕೆ.ಶಿವಕುಮಾರ್ ಅಧ್ಯಕ್ಷತೆಯಲ್ಲಿ ಶುಕ್ರವಾರ ಕರಾವಳಿ ಪ್ರವಾಸೋದ್ಯಮ ಸಭೆ ನಡೆಸಲಾಯಿತು. ಸಭೆಯಲ್ಲಿ ಕೆಲವು ತೀರ್ಮಾನಗಳನ್ನು ಕೈಗೊಳ್ಳಲಾಗಿದೆ. ಸರ್ಕಾರ ನಿರ್ಧಾರ ಹೊರಬಿದ್ದ ಬಳಿಕ ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ಪ್ರತಿಕ್ರಿಯೆ ನೀಡಿದ್ದಾರೆ.

ಪತ್ರಕರ್ತ ನವೀನ್ ಸೂರಿಂಜೆ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ನಟ ರಿಷಬ್ ಶೆಟ್ಟಿ ಎಂಬವರು ಸಂಘಪರಿವಾರದ ವ್ಯಕ್ತಿ. ಹಿಂದುತ್ವದ ರಾಯಭಾರಿಯನ್ನು ಕರಾವಳಿಯ ಪ್ರವಾಸೋದ್ಯಮ ರಾಯಭಾರಿ ಎಂದು ನೇಮಿಸುವುದು ಅಪಾಯಕಾರಿ. ಅದಕ್ಕಿಂತ ನೇರವಾಗಿ ಕಲ್ಲಡ್ಕ ಭಟ್ಟರನ್ನೇ ಕರಾವಳಿ ಪ್ರವಾಸೋದ್ಯಮದ ರಾಯಭಾರಿಯನ್ನಾಗಿಸೋದು ಒಳ್ಳೆಯದು ಎಂದು ಟೀಕಿಸಿದ್ದಾರೆ.

ಮುಂದುವರಿದು, ರಿಷಬ್ ಶೆಟ್ಟಿಯ ಹಿಂದುತ್ವದ ಸಾಂಸ್ಕೃತಿಕ ರಾಜಕಾರಣ, ದಲಿತ ವಿರೋಧಿ ಸಾಂಸ್ಕೃತಿಕ ರಾಜಕಾರಣ ಕಾಂಗ್ರೆಸ್ಸಿಗರಿಗೆ ಸುಲಭದಲ್ಲಿ ಅರ್ಥವಾಗಲ್ಲ. ಆದರೆ, ತಮ್ಮ ಪಕ್ಷದ ನಾಯಕನನ್ನು ಅವಹೇಳನ ಮಾಡಿದ ಬಗ್ಗೆಯಾದರೂ ಅವರ ಮನಸ್ಸಿನೊಳಗೊಂದು ಕಹಿ ಇರಬೇಕಿತ್ತು (ಕಹಿ ಅಂದರೆ ದ್ವೇಷ ಅಂತ ಅರ್ಥ ಅಲ್ಲ. ತುಳುವಿನಲ್ಲಿ ಕಯಿಪೆ ಅಂತಾರೆ. ಒಂಥರಾ ಸ್ವಾಭಿಮಾನದ ಕೋಪ). ನರೇಂದ್ರ ಮೋದಿಯವರನ್ನು ಅದ್ಭುತ ನಾಯಕ ಎನ್ನುವ ರಿಷಬ್ ಶೆಟ್ಟಿ, ರಾಹುಲ್ ಗಾಂಧಿಯ ಬಗ್ಗೆ ನೋ ಕಮೆಂಟ್ಸ್ ಎಂದು ನೀಚ ನಗು ವ್ಯಕ್ತಪಡಿಸುತ್ತಾರೆ (ನೀಚ ನಗು ಎಂದರೆ ಇನ್ನೊಬ್ಬರನ್ನು ತುಚ್ಚೀಕರಿಸುವ ನಗು). ಕಾಂಗ್ರೆಸ್ಸಿಗರಲ್ಲಿ ಸ್ವಾಭಿಮಾನ ಇದ್ದಿದ್ದರೆ ನಟ ರಿಷಬ್ ಶೆಟ್ಟಿಯನ್ನು ಹತ್ತಿರಕ್ಕೂ



ಸೇರಿಸಿ ಕೊಳ್ಳುತ್ತಿರಲಿಲ್ಲ ಎಂದು ಕುಟುಕಿದ್ದಾರೆ.

ಬರೆಹಗಾರ ಶಶಿಧರ್ ಹೆಮ್ಮಾಡಿ ಅವರು, ಮೋದಿ ಭಕ್ತ, ಕಾಂಗ್ರೆಸ್ ವಿರೋಧಿ, ಕೋಮುವಾದಿಗಳ ಡಾರ್ಲಿಂಗ್, ತುಳುನಾಡಿನ ದೈವಗಳನ್ನು ತನ್ನ ಮನಸ್ಸಿಗೆ ಬಂದಂತೆ ಚಿತ್ರಿಸಿ ದುಡ್ಡು ಮಾಡಿದ ರಿಷಬ್ ಶೆಟ್ಟಿಯನ್ನು ಡಿಕೆಶಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಕರಾವಳಿಯ ಪ್ರವಾಸೋದ್ಯಮಕ್ಕೆ ಬ್ರಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿದೆ. ಇದು ಸಿದ್ದರಾಮಯ್ಯನ ಕಾಂಗ್ರೆಸ್ ಸರ್ಕಾರಕ್ಕೂ ಡಿಕೆಶಿ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೂ ಇರುವ ಸೈದ್ಧಾಂತಿಕ ಭಿನ್ನತೆ. ನನ್ನ ಕರಾವಳಿಗೆ ಈತ ಪ್ರವಾಸೋದ್ಯಮದ ರಾಯಭಾರಿ. ಇದು ಕಾಂಗ್ರೆಸ್ ಸರ್ಕಾರದ ಭಾರೀ ದುರಂತ ಎಂದು ಬೇಸರ ಹೊರಹಾಕಿದ್ದಾರೆ.

ಬರೆಹಗಾರ ಎಸ್.ಎ.ರಹಿಮಾನ್ ಮಿತ್ತೂರು, ಕರಾವಳಿಯ ಪ್ರವಾಸೋ ದ್ಯಮ ರಾಯಭಾರಿಯಾಗಿ ನೇಮಿಸಲು ಕಾಂಗ್ರೆಸ್ ಸರಕಾರಕ್ಕೆ ಕರಾವಳಿಯಲ್ಲಿ ಕಾಂಗ್ರೆಸ್ಸಿಗರ ಕೊರತೆ ಎದುರಾಗಿರಬೇಕು. ಬಹಿರಂಗವಾಗಿ ಸಂಘ ಪರಿವಾರವನ್ನು ಬೆಂಬಲಿಸುವ ಅಪ್ಪಟ ಸಂಘಿ ರಿಷಬ್ ಶೆಟ್ಟಿಯನ್ನು ಕರಾವಳಿಯ ಪ್ರವಾಸೋದ್ಯಮ ರಾಯಭಾರಿಯಾಗಿ ನೇಮಿಸುವಷ್ಟು ಈ ಸರಕಾರ ಬರಗೆಟ್ಟು ಹೋಗಿದೆ ಎಂದರೆ ನಂಬಲಾಗುತ್ತಿಲ್ಲ. ಇದನ್ನೆಲ್ಲ ನೋಡುವಾಗ ಕರ್ನಾಟಕ ಸರಕಾರವು ಸಂಘ ಪರಿವಾರದ ಆಣತಿಯಂತೆ ನಡೆಯುತ್ತಿದೆ ಎನ್ನುವುದು ಮೇಲ್ನೋಟಕ್ಕೆ ಸಾಬೀತಾಗುತ್ತಿದೆ. ಇಂತಹವರನ್ನೆಲ್ಲ ನೇಮಿಸಿ ಇನ್ನು ಇವರು ಕರಾವಳಿಯಲ್ಲಿ ಪಕ್ಷವನ್ನು ಬಲಪಡಿಸುವುದಂತೆ ಎಂದು ವ್ಯಂಗ್ಯವಾಡಿದ್ದಾರೆ.

ಹೋರಾಟಗಾರ ದೀಪುಗೌಡ್ರು, ರಾಜ್ಯ ಸರ್ಕಾರ ರಿಷಬ್ ಶೆಟ್ಟಿಯನ್ನು ಕರಾವಳಿ ಪ್ರವಾಸೋದ್ಯಮದ ರಾಯ ಭಾರಿಯನ್ನಾಗಿ ಆಯ್ಕೆ ಮಾಡಿದೆ. ಆ ಮೂಲಕ ರಾಹುಲ್ ಗಾಂಧಿ ಹುಟ್ಟು ಹಬ್ಬಕ್ಕೆ ಉತ್ತಮ ಉಡುಗೊರೆ ಯನ್ನೇ ನೀಡಿದೆ ಎಂದು ಕುಟುಕಿದ್ದಾರೆ.

ರಾಜಕೀಯ ವಿಮರ್ಶಕ ಜಯಚಂದ್ರ ಅವರು, ರಾಹುಲ್ ಗಾಂಧಿ ಅವರು ಮನಸಾರೆ ಇಚ್ಚಿಸಿ ಆಯ್ಕೆ ಮಾಡಿದ ರಾಜ್ಯ ಸರ್ಕಾರ ರಿಷಬ್ ಶೆಟ್ಟಿಯನ್ನು ಕರಾವಳಿ ಪ್ರವಾಸೋದ್ಯಮದ ರಾಯಭಾರಿ ಯನ್ನಾಗಿ ಆಯ್ಕೆ ಮಾಡಿದೆ. ಆ ಮೂಲಕ ರಾಹುಲ್ ಗಾಂಧಿ ಹುಟ್ಟು ಹಬ್ಬಕ್ಕೆ ಉತ್ತಮ ಉಡುಗೊರೆಯನ್ನೇ ನೀಡಿದೆ ಎಂದಿದ್ದಾರೆ.

ಅಹಿಂದ ಬೆಂಬಲಿಗ ಹೃದಯ್ ಗೌಡ ಪ್ರತಿಕ್ರಿಯಿಸಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಇದೆಯೋ ಅಥವಾ ಬಿಜೆಪಿ ಮನಸ್ಥಿತಿ ಸರ್ಕಾರ ಇದೆಯೋ ಕರಾವಳಿ ಮತ್ತು ಮಲೆನಾಡು ಪ್ರವಾಸೋದ್ಯಮದ ರಾಯಭಾರಿಯಾಗಿ ರಿಷಬ್ ಶೆಟಿ ್ಟಯವರನ್ನು ನೇಮಕ ಮಾಡಿರುವುದರ ಹಿಂದೆ ಸರ್ಕಾರದ ಮಾನದಂಡ ಏನು ಒಂದು ಸಂದರ್ಶನದಲ್ಲಿ ನರೇಂದ್ರ ಮೋದಿ ಬಗ್ಗೆ ಕೇಳಿದಾಗ ಅದ್ಭುತ ನಾಯಕ ಎಂದು ಹೊಗಳಿದ ರಿಷಬ್ ಶೆಟ್ಟಿ, ರಾಹುಲ್ ಗಾಂಧಿ ಬಗ್ಗೆ ಕೇಳಿದಾಗ ನೋ ಕಮೆಂಟ್ಸ್ ಎಂದು ಉತ್ತರಿಸಿದ್ದರು.

ಕಾಂಗ್ರೆಸ್ ಪಕ್ಷದ ದೊಡ್ಡ ನಾಯಕನ ಬಗ್ಗೆ ತಿಳಿದಿಲ್ಲ ಎನ್ನುವ ವ್ಯಕ್ತಿಯನ್ನು ಕಾಂಗ್ರೆಸ್ ಸರ್ಕಾರವೇ ರಾಯಭಾರಿಯನ್ನಾಗಿ ಆಯ್ಕೆ ಮಾಡಿರುವುದು ಎಷ್ಟು ಸರಿ ಇದು ವ್ಯಕ್ತಿಯ ವಿರುದ್ಧದ ಟೀಕೆಯಲ್ಲ. ಆದರೆ ಕಾಂಗ್ರೆಸ್ ಸಿದ್ಧಾಂತ, ಪಕ್ಷದ ನಿಲುವು ಮತ್ತು ಕಾರ್ಯಕರ್ತರ ಭಾವನೆಗಳಿಗೆ ಬೆಲೆ ಇದೆಯೇ ಎಂಬ ಪ್ರಶ್ನೆ ಉದ್ಭವವಾಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪರ ನಿಂತು ದುಡಿಯುವ ಸಾವಿರಾರು ಕಾರ್ಯಕರ್ತರಿದ್ದಾಗ ಇಂತಹ ವಿವಾದಗಳಿಗೆ ಕಾರಣವಾಗುವ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಎಷ್ಟು ಸರಿ ಎಂದು ಪ್ರಶ್ನಿಸಿದ್ದಾರೆ.

## ಡಾ. ಮನಮೋಹನ್ ಸಿಂಗ್ ವಿಶ್ವವಿದ್ಯಾನಿಲಯದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಸಂಪನ್ನ



**ಬೆಂಗಳೂರು, ಜೂ.21:**ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವತಿಯಿಂದ ಜ್ಞಾನ ಜ್ಯೋತಿ ಕ್ಯಾಂಪಸ್ ನಲ್ಲಿ ಕುಲಪತಿಗಳಾದ ಪ್ರೊ. ರಮೇಶ್.ಬಿ. ಮತ್ತು ಕುಲಸಚಿವರಾದ ಎ. ನವೀನ್ ಜೋಸೆಫ್ ರವರ ಮಾರ್ಗದರ್ಶನದಲ್ಲಿ 12ನೇ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಗಡಿಯಾರ ಗೋಪುರದ ಬಳಿ ಆಯೋಜಿಸಲಾಗಿದ್ದ ಸಮಾರಂಭದಲ್ಲಿ ಕುಲಸಚಿವರಾದ (ಮೌಲ್ಯಮಾಪನ ) ಪ್ರೊ.ರಮೇಶ. ಬಿ.ಕುಡೇನಟ್ಟಿ, ಹಿರಿಯ ಪ್ರಾಧ್ಯಾಪಕರಾದ ಪ್ರೊ. ಜ್ಯೋತಿ ವೆಂಕಟೇಶ್, ಪ್ರೊ.ಮೇಧಾ ಇಟಗಿ ಹುಯಿಲಗೋಳ ಉಪಸ್ಥಿತರಿದ್ದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ.ಉಪೇಂದ್ರ.ಟಿ. ವಿದ್ಯಾರ್ಥಿಗಳು ಹಾಗೂ ಬೋಧಕ–ಬೋಧಕೇತರ ಸಿಬ್ಬಂದಿಗೆ ಯೋಗಾಸನಗಳ ತರಬೇತಿ ನೀಡಿ ಉತ್ತಮ ಗುಣಮಟ್ಟದ ಜೀವನ ಮತ್ತು ಆರೋಗ್ಯ ಸಂರಕ್ಷಣೆಗೆ ಅಗತ್ಯ ಗಮನ ಹರಿಸುವಂತೆ ಸಲಹೆಯಿತ್ತರು.

### ಕೆರೆಗೆ ವೈದ್ಯಕೀಯ ತ್ಯಾಜ್ಯ: ವೈದ್ಯರ ವಿರುದ್ಧ ಎಫ್‌ಐಆರ್ ದಾಖಲು

## ಈಶ್ವರ ಖಂಡ್ರೆ ಸೂಚನೆಯಂತೆ ಜಲಮೂಲ ಕಲುಷಿತ ಮಾಡಿದವರ ವಿರುದ್ಧ ಕ್ರಮ



**ಬೆಂಗಳೂರು, ಜೂ. 21:** ಬೆಂಗಳೂರು ಗ್ರಾಮಾಂತರ ಜಿಲ್ಲೆ ಯಂಟಗಾನಹಳ್ಳಿ ಕೆರೆಗೆ ವೈದ್ಯಕೀಯ ತ್ಯಾಜ್ಯ ಸುರಿದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಸೂಚನೆ ಮೇರೆಗೆ ಅಧಿಕಾರಿಗಳು ಕ್ರಮ ವಹಿಸಿದ್ದು, ಖಾಸಗಿ ಕ್ಲಿನಿಕ್ ವೈದ್ಯರ ವಿರುದ್ಧ ಎಫ್.ಐ.ಆರ್. ದಾಖಲಿಸಲಾಗಿದೆ.

ಯಂಟಗಾನಹಳ್ಳಿ ಗ್ರಾಮ ಪಂಚಾಯ್ತಿಗೆ ಸಚಿವರು ಹಠಾತ್ ಭೇಟಿ ನೀಡಿದ್ದ ವೇಳೆ ಸಾರ್ವಜನಿಕರು ವೈದ್ಯಕೀಯ ತ್ಯಾಜ್ಯವನ್ನು ಕೆರೆಗೆ ಸುರಿದಿರುವ ಬಗ್ಗೆ ಮಾಹಿತಿ ನೀಡಿದ್ದರು. ಕೂಡಲೇ ತಾಲೂಕು ಪಂಚಾಯ್ತಿ ಕಾರ್ಯ ನಿರ್ವಾಹಕ ಅಧಿಕಾರಿಗೆ ಸ್ಥಳ ಪರಿಶೀಲಿಸಿ, ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಸೂಚಿಸಿದ್ದರು.

ಸಚಿವ ಖಂಡ್ರೆ ಅವರ ಸೂಚನೆಯಂತೆ ಸ್ಥಳ ಪರಿಶೀಲನೆ ನಡೆಸಿದ ಪಂಚಾಯ್ತಿ ಕಾರ್ಯನಿರ್ವಾಹಕ ಅಧಿಕಾರಿ ಡಾ. ಬಿಂದು, ಸಚಿತ್ರ ಮಾಹಿತಿ ನೀಡಿದ ತರುವಾಯ ತಾಲೂಕು ವೈದ್ಯಾಧಿಕಾರಿ ಡಾ. ಪದ್ಮಿನಿ ನೆಲಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪಂಚಾಯ್ತಿ ಇಓ ಮತ್ತು ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ಬಳಸಿದ ಸಿರೆಂಜ್ ಗಳು ಹಾಗೂ ರಕ್ತಸಿಕ್ತವಾಗಿದ್ದ ಹತ್ತಿ, ಬ್ಯಾಂಡೇಜ್ ಗಳನ್ನು ಸಿಮೆಂಟ್ ಬ್ಯಾಗ್ ಗಳಲ್ಲಿ ತುಂಬಿ ಕೆರೆಗೆ ನೀರು ಹೋಗುವ ಕಾಲುವೆಯಲ್ಲಿ ಎಸೆದಿರುವುದು ಪತ್ತೆಯಾಗಿತ್ತು.

ಜನ, ಜಾನುವಾರು ಈ ಕೆರೆಯ ನೀರು ಬಳಸುವ ಕಾರಣ ರೋಗ ಹರಡುವ ಸಾಧ್ಯತೆಯ ಗಂಭೀರತೆಯನ್ನು ಅರಿತು ಖಾಸಗಿ ಕ್ಲಿನಿಕ್ ವೈದ್ಯ ಡಾ. ಅರುಣ್ ಗಿರೀಶ್ ಸಾಗರ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ವೈದ್ಯರು ಇದು ತಮ್ಮ ಆಸ್ಪತ್ರೆಯ ತ್ಯಾಜ್ಯ ಎಂದು ಒಪ್ಪಿಕೊಂಡಿದ್ದಾರೆ ಎಂದು ಎಫ್.ಐ.ಆರ್. ನಲ್ಲಿ ಉಲ್ಲೇಖಿಸಲಾಗಿದೆ.

**ಎಚ್ಚರಿಕೆ ಗಂಟೆ:**

ಕುಡಿಯುವ ನೀರಿನ ಮೂಲಗಳಾದ ಕೆರೆ, ಕುಂಟೆ, ಬಾವಿ, ನದಿಗಳಿಗೆ ಅಪಾಯಕಾರಿ ತ್ಯಾಜ್ಯವನ್ನು ಎಸೆದು ಹೋಗುವವರಿಗೆ ಇದು ಎಚ್ಚರಿಕೆಯ ಗಂಟೆಯಾಗಿದೆ.

### ಜಪಾನ್‌ನಲ್ಲಿ ಉದ್ಯೋಗಾವಕಾಶಗಳಿಗೆ ಭಾರತೀಯ ಯುವಕರಿಗೆ ಜಾಗತಿಕ ವೇದಿಕೆ

## ರೋಟರಿ ಜಿಲ್ಲಾ 3191–ಮೊಸಾಯಿಕ್ ಪ್ರೈ.ಲಿ.ನಡುವೆ ಮಹತ್ವದ ಒಪ್ಪಂದ

**ಬೆಂಗಳೂರು, ಜೂ, 21:** ಭಾರತೀಯ ಯುವಕರಿಗೆ ಜಪಾನ್‌ನಲ್ಲಿ ಉದ್ಯೋಗ ಮತ್ತು ವೃತ್ತಿ ಅಭಿವೃದ್ಧಿಯ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ ರೋಟರಿ ಇಂಟರ್‌ನ್ಯಾಷನಲ್ ಜಿಲ್ಲಾ 3191 ಹಾಗೂ ಮೊಸಾಯಿಕ್ ಪ್ರೈವೇಟ್ ಲಿಮಿಟೆಡ್‌ನಡುವೆ ಮಹತ್ವದ ಒಡಂಬಡಿಕೆ (MoU)ಗೆ ಸಹಿ ಹಾಕಲಾಗಿದೆ.

ಈ ಒಪ್ಪಂದದ ಮೂಲಕ ಗ್ರಾಮೀಣ ಹಾಗೂ ಹಿಂದುಳಿದ ವರ್ಗಗಳ ಪ್ರತಿಭಾವಂತ ಯುವಕರನ್ನು ಗುರುತಿಸಿ, ಅವರಿಗೆ ಜಪಾನೀಸ್ ಭಾಷಾ ತರಬೇತಿ, ಸಾಂಸ್ಕೃತಿಕ ಅರಿವು, ತಾಂತ್ರಿಕ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗ ಸಿದ್ಧತಾ ತರಬೇತಿಗಳನ್ನು ನೀಡಲಾಗುತ್ತದೆ. ಇದರಿಂದ ಜಪಾನ್‌ನ ವಿವಿಧ ಉದ್ಯಮ ಕ್ಷೇತ್ರಗಳಲ್ಲಿ ಉದ್ಯೋಗ ಪಡೆಯಲು ಅಗತ್ಯವಾದ ಅರ್ಹತೆ ಮತ್ತು ಆತ್ಮವಿಶ್ವಾಸವನ್ನು ಯುವಕರು ಗಳಿಸಲಿದ್ದಾರೆ.

ಒಪ್ಪಂದದ ಅನ್ವಯ, ರೋಟರಿ ಜಿಲ್ಲಾ 3191 ಅರ್ಹ ಅಭ್ಯರ್ಥಿಗಳನ್ನು ಗುರುತಿಸುವುದು,



ಜಾಗೃತಿ ಮೂಡಿ ಸುವುದು, ಸಮುದಾಯ ಮಟ್ಟದಲ್ಲಿ ಸಂಪರ್ಕ ಸಾಧಿಸುವುದು ಹಾಗೂ ವೃತ್ತಿ ಮಾರ್ಗದರ್ಶನ ನೀಡುವ ಕಾರ್ಯವನ್ನು ನಿರ್ವಹಿಸಲಿದೆ. ಮೊಸಾಯಿಕ್ ಪ್ರೈವೇಟ್ ಲಿಮಿಟೆಡ್ ಜಪಾನೀಸ್ ಭಾಷಾ ತರಬೇತಿ, ಸಾಂಸ್ಕೃತಿಕ ಪರಿಚಯ, ಅರ್ಹತಾ ಮಾರ್ಗದರ್ಶನ ಹಾಗೂ ಸಂದರ್ಶನ ಸಿದ್ಧತೆ ತರಬೇತಿಗಳನ್ನು ಒದಗಿಸಲಿದೆ. ಇದಲ್ಲದೆ, ಆಲ್ಪ್ ಕನ್ಸಲ್ಟಿಂಗ್ ಲಿಮಿಟೆಡ್ ಜಪಾನ್‌ನ ಉದ್ಯೋಗದಾತರೊಂದಿಗೆ ಅರ್ಹ ಅಭ್ಯರ್ಥಿಗಳನ್ನು ಸಂಪರ್ಕಿ ಸುವುದು, ನೇಮಕಾತಿ ಪ್ರಕ್ರಿಯೆ ಹಾಗೂ ಅಗತ್ಯ ದಾಖಲೆಗಳ ವ್ಯವಸ್ಥೆ ಯಲ್ಲಿ ಸಹಕಾರ ನೀಡಲಿದೆ.

ಮೊಸಾಯಿಕ್ ಪ್ರೈವೇಟ್ ಲಿಮಿಟೆಡ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ನಿರ್ದೇಶಕ ಹಿರೋಯುಕಿ ಇಶಿದಾ ಮಾತನಾಡಿ, ಜಪಾನ್‌ನಲ್ಲಿ ವಿವಿಧ ಕ್ಷೇತ್ರಗಳಲ್ಲಿ ನುರಿತ ಮತ್ತು ಪ್ರತಿಭಾವಂತ ಮಾನವ ಸಂಪನ್ಮೂಲದ ಬೇಡಿಕೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಈ ಸಹಭಾಗಿತ್ವದ ಮೂಲಕ ಭಾರತೀಯ ಯುವಕರಿಗೆ ಜಾಗತಿಕ ವೃತ್ತಿ ಅವಕಾಶಗಳನ್ನು ಕಲ್ಪಿಸುವ ಸೇತುವೆಯಾಗಲು ನಾವು ಬಯಸುತ್ತೇವೆ. ಗುಣಮಟ್ಟದ ಜಪಾನೀಸ್ ಭಾಷಾ ಶಿಕ್ಷಣ, ಸಂಸ್ಕೃತಿಯ ಅರಿವು ಮತ್ತು ವೃತ್ತಿ ಸಿದ್ಧತೆಯ ಮೂಲಕ ಅವರು ಜಪಾನ್‌ನಲ್ಲಿ ಯಶಸ್ವಿಯಾಗಲು ನೆರವಾಗುತ್ತೇವೆ ಎಂದು ತಿಳಿಸಿದರು.

# ಬೆಂಗಳೂರಿನ ಸದ್ಗುರು ಸನ್ನಿಧಿಯಲ್ಲಿ ನಡೆದ ಅಂತರರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ 3000ಕ್ಕೂ ಹೆಚ್ಚು ಜನ ಭಾಗಿ

**ಬೆಂಗಳೂರು, ಜೂ. 21:** ಬೆಂಗಳೂರಿನ ಸದ್ಗುರು ಸನ್ನಿಧಿಯಲ್ಲಿ ಆದಿಯೋಗಿಯ ಸಾನ್ನಿಧ್ಯದಲ್ಲಿ 12ನೇ ಅಂತರರಾಷ್ಟ್ರೀಯ ಯೋಗ ದಿನವನ್ನು ಅತ್ಯಂತ ಉತ್ಸಾಹದಿಂದ ಆಚರಿಸಲಾಯಿತು. ಬಿಎಸ್‌ಎಫ್ ಯೋಧರು, ಸೇನೆಯ ಮದ್ರಾಸ್ ಇಂಜಿನಿಯರ್ ಗ್ರೂಪ್ ಆಂಡ್ ಸೆಂಟರ್, ವಾಯುಪಡೆ ಹಾಗೂ ಎನ್‌ಸಿಸಿ ಕೆಡೆಟ್ಗಳು, ವಿದ್ಯಾರ್ಥಿಗಳು, ಗ್ರಾಮಸ್ಥರು, ಸ್ವಯಂಸೇವಕರು ಮತ್ತು ಸಾರ್ವಜನಿಕರು ಸೇರಿದಂತೆ ಒಟ್ಟು 5,000ಕ್ಕೂ ಹೆಚ್ಚು ಜನರು ಈ ಬೃಹತ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

"ಅಂತರರಾಷ್ಟ್ರೀಯ ಯೋಗ ದಿನವು ನಮಗೆ ನೆನಪಿಸುವ ವಿಷಯವೇನೆಂದರೆ, ನಾವು ಯಾವುದನ್ನು 'ಯೋಗ' ಎಂದು ಕರೆಯುತ್ತೇವೆಯೋ ಅದು ಯಾವುದೇ ತತ್ವಶಾಸ್ತ್ರವಲ್ಲ, ಸಿದ್ಧಾಂತವಲ್ಲ, ನಂಬಿಕೆಯ ಚೌಕಟ್ಟಲ್ಲ ಅಥವಾ ಧರ್ಮವೂ ಅಲ್ಲ. ಇದು ನಮ್ಮ ಆಂತರಿಕ ಯೋಗಕ್ಷೇಮಕ್ಕಾಗಿ ಇರುವ ವಿಜ್ಞಾನ ಹಾಗೂ ಸಾಧನ. ನಿಮ್ಮ ಧರ್ಮ, ಜನಾಂಗ, ಜಾತಿ, ಪಂಥ, ಲಿಂಗ ಏನೇ ಇರಲಿ?ಈ ಸಾಧನಗಳು ನಿಮ್ಮನ್ನು ಅತ್ಯುತ್ತಮ ಸ್ಥಿತಿಯಲ್ಲಿ ಬದುಕುವಂತೆ ಮಾಡುತ್ತವೆ. ಅಂದರೆ ನಿಮ್ಮ ದೇಹ, ಮನಸ್ಸು, ಭಾವನೆ, ಬುದ್ಧಿಶಕ್ತಿ ಮತ್ತು ಚೈತನ್ಯವನ್ನು ಅತ್ಯುನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುವಂತೆ ಸಜ್ಜುಗೊಳಿಸುತ್ತವೆ. ಎಲ್ಲದಕ್ಕಿಂತ ಮಿಗಿಲಾಗಿ, ಪ್ರತಿಯೊಬ್ಬ ಮನುಷ್ಯನಲ್ಲೂ ಅಡಗಿರುವ ಅದ್ಭುತ ಸಾಮರ್ಥ್ಯವನ್ನು ಇದು ಹೊರಹೊಮ್ಮಿಸುತ್ತದೆ." ಎಂದು ಯೋಗದ ಆಳವಾದ ಮಹತ್ವದ ಕುರಿತು ಸದ್ಗುರುಗಳು ಸಾಮಾಜಿಕ ಮಾಧ್ಯಮವಾದ ಫಿನಲ್ಲಿ ತಿಳಿಸಿದ್ದಾರೆ.

ಈ ಬಾರಿಯ ಆಚರಣೆಯ ಪ್ರಮುಖ ಅಂಶವೆಂದರೆ, ಸದ್ಗುರುಗಳ ಮಾರ್ಗದರ್ಶನದ ಧ್ಯಾನ ಪ್ರಕ್ರಿಯೆಯಾದ 'ಮಿರಾಕಲ್ ಆಫ್ ಮೈಂಡ್' ಆಪ್ನ ಕನ್ನಡ ಆವೃತ್ತಿಯನ್ನು ಬಿಡುಗಡೆ ಮಾಡಲಾಗಿದ್ದು, ಕೋಟ್ಯಾಂತರ ಕನ್ನಡಿಗರಿಗೆ ಇದು ಉಚಿತವಾಗಿ ಲಭ್ಯವಾಗಲಿದೆ. ಮಾನಸಿಕ ಸ್ಪಷ್ಟತೆ ಮತ್ತು ಯೋಗಕ್ಷೇಮ ವನ್ನು ಉತ್ತಮಗೊಳಿಸುವ ಈ



ಧ್ಯಾನವನ್ನು ಎಲ್ಲರೂ ಸುಲಭವಾಗಿ ಕಲಿಯಬಹುದಾಗಿದ್ದು ಇದಕ್ಕಾಗಿ ಯೋಗದ ಯಾವುದೇ ಪೂರ್ವ ಅನುಭವ ಅಥವಾ ಜ್ಞಾನದ ಅಗತ್ಯವಿಲ್ಲ. ಈ ಆಪ್ ಅನ್ನು ಜೀವಿತಾವಧಿಯವರೆಗೆ ಉಚಿತವಾಗಿ isha.sadhguru.org/in/en/miracle-of-mind ಲಿಂಕ್‌ಲ್ಲಿ ಬಳಸಬಹುದು.

ಈ ಕಾರ್ಯಕ್ರಮದಲ್ಲಿ ಗಡಿ ಭದ್ರತಾ ಪಡೆ ಮತ್ತು ನ್ಯಾಷನಲ್ ಕೆಡೆಟ್ ಕಾರ್ಪ್ಸ್ ಹಿರಿಯ ಅಧಿಕಾರಿಗಳಾದ ಶ್ರೀ ತ್ಸೆವಾಂಗ್ ನಾಮ್ಗ್ಯಾಲ್, ಹೆಚ್ಚುವರಿ ಮಹಾನಿರ್ದೇಶಕರು ದಿನೇಶ್ ಕುಮಾರ್ ಯಾದವ್, ಮಹಾನಿರೀಕ್ಷಕರು ಸಂಜಯ್ ಯಾದವ್, ಉಪಮಹಾನಿರೀಕ್ಷಕರು ಸತೀಶ್ ಕುಮಾರ್ ಮಿಶ್ರಾ, ಶಿವ ಆಧಾರ್ ಶ್ರೀವಾಸ್ತವ, ಮಹಾನಿರೀಕ್ಷಕರು ಅಮರೇಂದ್ರ ಕುಮಾರ್ ಸಿಂಗ್, ಉಪ ಮಹಾನಿರೀಕ್ಷಕರು ಮತ್ತು ಕರ್ನಾಟಕ ಮತ್ತು ಗೋವಾ ನಿರ್ದೇಶನಾಲಯದ ಉಪ ಮಹಾನಿರ್ದೇಶಕರಾದ ಏರ್ ಕಮೋಡೋರ್ ಕಮಲ್ ಚಡ್ಡಾರವರು ಉಪಸ್ಥಿತರಿದ್ದರು. ಕಾರ್ಯಕ್ರಮವು 'ಸೌಂಡ್ಸ್ ಆಫ್ ಈಶ' ಮತ್ತು 'ಪ್ರಾಜೆಕ್ಟ್ ಸಂಸ್ಕೃತಿ' ತಂಡಗಳ ಸಾಂಸ್ಕೃತಿಕ ಪ್ರದರ್ಶನಗಳೊಂದಿಗೆ ಆರಂಭವಾಯಿತು. ನಂತರ ಮುಖ್ಯ ಅತಿಥಿಗಳು ಸಭೆಯನ್ನುದ್ದೇಶಿಸಿ ಮಾತನಾಡಿದರು. ಇದೇ ವೇಳೆ ಭಾಗವಹಿಸಿದ್ದ ಜನರಿಗೆ ಯೋಗ ನಮಸ್ಕಾರ ಮತ್ತು ಕುತ್ತಿಗೆಯ ವ್ಯಾಯಾಮಗಳು ಸೇರಿದಂತೆ ಉಪ–ಯೋಗವನ್ನು ಕಲಿಸಿಕೊಡಲಾಯಿತು. ಜೊತೆಗೆ, ಸರಳ ಧ್ಯಾನವಾದ 'ಮಿರಾಕಲ್ ಆಫ್ ಮೈಂಡ್' ಪ್ರಕ್ರಿಯೆಯ ಮಾರ್ಗದರ್ಶನವನ್ನು ನೀಡಲಾಯಿತು.

ಕೇವಲ ಅಂತರರಾಷ್ಟ್ರೀಯ ಯೋಗ ದಿನ ಮಾತ್ರವಲ್ಲದೆ, ಬೆಂಗಳೂರಿನ ಸದ್ಗುರು ಸನ್ನಿಧಿಯು ಪ್ರತಿದಿನ ಕನ್ನಡ, ಇಂಗ್ಲಿಷ್, ತೆಲುಗು ಮತ್ತು ಹಿಂದಿ ಭಾಷೆಗಳಲ್ಲಿ ಉಚಿತ ಯೋಗ ಸೆಶನ್ಗಳನ್ನು ನಡೆಸಿಕೊಡುತ್ತಿದೆ. ಈ ಪ್ರಯತ್ನಗಳ ಮೂಲಕ ಕೇಂದ್ರವು ಈಗಾಗಲೇ ಒಂದು ಲಕ್ಷಕ್ಕೂ ಹೆಚ್ಚು ಜನರಿಗೆ ಉಚಿತವಾಗಿ ಯೋಗವನ್ನು ತಲುಪಿಸಿದೆ ಮತ್ತು ಶಾಸ್ತ್ರೀಯ ಹಠ ಯೋಗ ಕಾರ್ಯಕ್ರಮಗಳಿಂದ ಪ್ರತಿ ವರ್ಷ ನೂರಾರು ಜನರು ಪ್ರಯೋಜನ ಪಡೆಯುತ್ತಿದ್ದಾರೆ. ಅಂತರರಾಷ್ಟ್ರೀಯ ಯೋಗ ದಿನದ ರಾಷ್ಟ್ರಮಟ್ಟದ ಅಭಿಯಾನದ ಭಾಗವಾಗಿ, ಈಶ ಫೌಂಡೇಶನ್ ದೇಶದಾದ್ಯಂತ ಕಾರ್ಪೊರೇಟ್ ಕಂಪನಿಗಳು, ಶಿಕ್ಷಣ, ವೈದ್ಯಕೀಯ, ಸರ್ಕಾರಿ ಸಂಸ್ಥೆಗಳು, ರಕ್ಷಣಾ ಪಡೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ 1,000 ಯೋಗ ಮತ್ತು ಧ್ಯಾನ ತರಗತಿಗಳನ್ನು ನಡೆಸುತ್ತಿದ್ದು, ಇದರಲ್ಲಿ ಸುಮಾರು 50,000 ಜನರು ಭಾಗವಹಿಸುವ ನಿರೀಕ್ಷೆಯಿದೆ.




ಬೆಳಗಾವಿಯ ನ್ಯೂ ಗೂಡ್ಸ್ ಶೆಡ್ ರಸ್ತೆಯಲ್ಲಿ ಜನಕಲ್ಯಾಣ ಟ್ರಸ್ಟ್ ವತಿಯಿಂದ ನಿರ್ಮಿಸಲಾದ ಜಗನ್ನಾಥರಾವ್ ಜೋಶಿ ಸ್ಮಾರಕ ಭವನದ ಲೋಕಾರ್ಪಣೆ ಸಮಾರಂಭದಲ್ಲಿ ಹಾವೇರಿ–ಗದಗ ಲೋಕಸಭಾ ಸದಸ್ಯ ಬಸವರಾಜ ಬೊಮ್ಮಾಯಿ ಭಾಗವಹಿಸಿದ್ದರು.

### ಸಂಸದರ ಅನುದಾನ ಬಳಕೆ ಕಳಪೆ ಸಾಧನೆ: ರಾಧಾಕೃಷ್ಣ ದೊಡ್ಡಮನಿ

## ಕೇವಲ 87 ಲಕ್ಷ ಬಳಕೆ ಮಾಡಿದ ಸಾಗರ್ ಖಂಡ್ರೆ

**ಕಲಬುರಗಿ, ಜೂ. 21:** ಕಲ್ಯಾಣ ಕರ್ನಾಟಕದ ಐದು ಲೋಕಸಭಾ ಕ್ಷೇತ್ರಗಳ ಪೈಕಿ ಕಲಬುರಗಿ ಲೋಕಸಭಾ ಕ್ಷೇತ್ರದ ಸಂಸದ ರಾಧಾಕೃಷ್ಣ ದೊಡ್ಡಮನಿ ಅವರು ಸಂಸದರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಒಂದು ಪೈಸೆಯನ್ನೂ ಬಳಕೆ ಮಾಡಿಲ್ಲ!

ರಾಧಾಕೃಷ್ಣ ಅವರಿಗೆ ವಾರ್ಷಿಕ 5 ಕೋಟಿಯಂತೆ ಇದುವರೆಗೆ 14.7 ಕೋಟಿ ಒದಗಿಸಿದ್ದು, 2026ರಲ್ಲಿ 9.8 ಕೋಟಿ ಮೌಲ್ಯದ 29 ಕಾಮಗಾರಿಗಳಿಗೆ ಶಿಫಾರಸು ಮಾಡಿದ್ದಾರೆ. ಅದರಲ್ಲಿ ಒಂದೂ ಕಾಮಗಾರಿ ಪೂರ್ಣಗೊಂಡಿಲ್ಲ. ಹೀಗಾಗಿ ಅನುದಾನ ಬಿಡುಗಡೆ ಮಾಡಿಲ್ಲ. 14.7 ಕೋಟಿ ಜಿಲ್ಲಾಧಿಕಾರಿ ಖಾತೆಯಲ್ಲೇ ಉಳಿದುಕೊಂಡಿದೆ. ಕಲಬುರಗಿ ನಗರದ ವಾರ್ಡ್ ಸಂಖ್ಯೆ–6ರ ವ್ಯಾಪ್ತಿಯ ಫಿಲ್ಟರ್ ಬೆಡ್ ಪ್ರದೇಶದಲ್ಲಿ ಸಮುದಾಯ ಕ್ರೀಡಾ ಸಂಕೀರ್ಣ ನಿರ್ಮಾಣಕ್ಕೆ 1 ಕೋಟಿ, ಕಲಬುರಗಿ ತಾಲ್ಲೂಕಿನ ಮೇಳಕುಂದಾ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 3 ತರಗತಿ ಕೊಠಡಿ ನಿರ್ಮಾಣ ಹಾಗೂ ಇತರ ಕಾಮಗಾರಿಗೆ 49 ಲಕ್ಷ, ಕಲಬುರಗಿ ನಗರದ ವಾರ್ಡ್ ಸಂಖ್ಯೆ–45ರಲ್ಲಿ ಸಿಸಿ ರಸ್ತೆ ನಿರ್ಮಾಣಕ್ಕೆ 15 ಲಕ್ಷ, ವಾರ್ಡ್ ಸಂಖ್ಯೆ–31ರಲ್ಲಿ ಸಿಸಿ ರಸ್ತೆಗೆ 25 ಲಕ್ಷ ಮತ್ತು ಶಹಾಬಾದ್ ತಾಲ್ಲೂಕಿನ ಭಂಕೂರು ಪ್ರೌಢಶಾಲೆಯ ತರಗತಿ ಕೊಠಡಿ ನಿರ್ಮಾಣಕ್ಕೆ 66 ಲಕ್ಷ ನೀಡುವಂತೆ ಸಂಸದ ರಾಧಾಕೃಷ್ಣ



ದೊಡ್ಡಮನಿ ಅವರು ಶಿಫಾರಸು ಮಾಡಿದ್ದಾರೆ. ಆದರೆ ಸಂಸದರ ಎರಡು ವರ್ಷಗಳ ಅವಧಿಯಲ್ಲಿ ಇದುವರೆಗೂ ಒಂದೇ ಒಂದು ಕಾಮಗಾರಿಯೂ ಪೂರ್ಣಗೊಳ್ಳದೇ ಅವರಿಗೆ ದೊರೆತಿರುವ ಅನುದಾನ ಹಗೇ ಉಳಿದುಕೊಂಡಿದೆ.

ಕೊಪ್ಪಳ ಕ್ಷೇತ್ರದ ರಾಜಶೇಖರ ಹಿಟ್ನಾಳ ಅವರು ತಮಗೆ ಒದಗಿಸಿದ ಅನುದಾನದಲ್ಲಿ ಶೇ 40.3ರಷ್ಟು ಅನುದಾನವನ್ನು ಮಾತ್ರ ಬಳಕೆ ಮಾಡಿದ್ದಾರೆ. ರಾಯಚೂರು ಸಂಸದ ಜಿ.ಕುಮಾರ ನಾಯಕ ಅವರು ಕೇವಲ ಶೇ 14.9ರಷ್ಟು ನಿಧಿಯನ್ನು ಬಳಕೆ ಮಾಡಿದ್ದಾರೆ. ಅವರು 1.6 ಕೋಟಿ ಬಳಕೆ ಮಾಡಿದ್ದು, 107 ಕಾಮಗಾರಿಗಳಲ್ಲಿ 7 ಕಾಮಗಾರಿಗಳು ಮಾತ್ರ ಪೂರ್ಣಗೊಂಡಿವೆ. ಶಾಲಾ ಕೊಠಡಿ, ರಸ್ತೆ ಹಾಗೂ ಕುಡಿಯುವ ನೀರಿನ ಕಾಮಗಾರಿಗೆ ಆದ್ಯತೆ ನೀಡಿದ್ದಾರೆ. ಬಳ್ಳಾರಿ ಸಂಸದ ಇ.ತುಕಾರಾಂ ಅವರು ಶೇ 6.4ರಷ್ಟು ಅಂದರೆ 94.7 ಲಕ್ಷ ಅನುದಾನ ಬಳಕೆ ಮಾಡಿದ್ದು, ಶಿಫಾರಸು ಮಾಡಿದ 91 ಕಾಮಗಾರಿಗಳ ಪೈಕಿ ಯಾವ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಸಮುದಾಯ ಭವನ, ಸಿಸಿ ರಸ್ತೆ, ಹೈಮಾಸ್ಟ್ ದೀಪ ಹಾಗೂ ಕುಡಿಯುವ ನೀರಿನ ಆದ್ಯತೆ ನೀಡಿದ್ದಾರೆ. ಬೀದರ್ ಸಂಸದ ಸಾಗರ್ ಖಂಡ್ರೆ ಶೇ 5.9ರಷ್ಟು ಅನುದಾನ ಬಳಕೆ ಮಾಡಿದ್ದಾರೆ. 87 ಲಕ್ಷ ಅನುದಾನ ಬಳಕೆ ಮಾಡಿದ್ದು, 137 ಕಾಮಗಾರಿ ಕೈಗೊಂಡಿದ್ದು, ಯಾವ ಕಾಮಗಾರಿಯೂ ಪೂರ್ಣಗೊಂಡಿಲ್ಲ. ಸಾಂಸ್ಕೃತಿಕ ಭವನ, ವಸತಿ ನಿಲಯ, ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಿದ್ದಾರೆ.

## ಮಠಗಳು ಸಾಮರಸ್ಯ ಕಾಪಾಡುವ ಕೇಂದ್ರಗಳು: ರಾಜೇಶ್ವರಶ್ರೀ

**ಬಸವಕಲ್ಯಾಣ, ಜೂ. 21:** ಮಠಗಳು ಸಮಾಜದಲ್ಲಿ ಸಾಮರಸ್ಯ ಕಾಪಾಡುವ ಕೇಂದ್ರಗಳಾಗಿವೆ ಎಂದು ಬೀದರ್ ಜಿಲ್ಲಾ ಮಠಾಧೀಶರ ಒಕ್ಕೂಟದ ನೂತನ ಅಧ್ಯಕ್ಷರಾದ ತಡೋಳಾ–ಮೇಹಕರ್‌ನ ಶ್ರೀ ರಾಜೇಶ್ವರ ಶಿವಾಚಾರ್ಯರು ಹೇಳಿದರು.

ತಾಲ್ಲೂಕಿನ ತಡೋಳಾ ಆಶ್ರಮ ದಲ್ಲಿ ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಸಾನ್ನಿಧ್ಯದಲ್ಲಿ ನಡೆದ ಮಠಾಧೀಶರ ಸಭೆಯಲ್ಲಿ ಜಿಲ್ಲಾ ಮಠಾಧೀಶರ ಒಕ್ಕೂಟದ ಪದಾಧಿಕಾರಿಗಳ ಆಯ್ಕೆ ನಂತರ ಮಾತನಾಡಿದ ಅವರು, ಸಮಾಜದಲ್ಲಿ ಸಂಸತಿ ಹಾಗೂ ಸಂಸ್ಕಾರ ಉಳಿಸಿ ಬೆಳೆಸುವುದೇ ಒಕ್ಕೂಟದ ಮೂಲ ಆಶಯವಾಗಿದೆ. ಪರಸ್ಪರ ಭಿನ್ನಾಭಿಪ್ರಾಯ ಮತ್ತು ಆತಂರಿಕ ಸಮಸ್ಯೆಯನ್ನು ಬಗೆಹರಿಸುವ ಜತೆಗೆ ಭಕ್ತರ ಸಮಸ್ಯೆಗಳಿಗೆ ಸ್ಪಂದಿಸಿ ಸೂಕ್ತ ಮಾರ್ಗದರ್ಶನ ನೀಡುವುದು ಒಕ್ಕೂಟದ ಉದ್ದೇಶವಾಗಿದೆ ಎಂದರು.



ಬಸವಕಲ್ಯಾಣ ತಾಲ್ಲೂಕಿನ ತಡೋಳಾ ಆಶ್ರಮದಲ್ಲಿ ಶ್ರೀ ರಂಭಾಪುರಿ ಜಗದ್ಗುರು ಡಾ.ವೀರಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳ ಸನ್ನಿಧಾನದಲ್ಲಿ ನಡೆದ ಮಠಾಧೀಶರ ಸಭೆಯಲ್ಲಿ ಜಿಲ್ಲಾ ಮಠಾಧೀಶರ ಒಕ್ಕೂಟದ ಪದಾಧಿಕಾರಿಗಳ ಆಯ್ಕೆಯ ನಂತರ ಅಧ್ಯಕ್ಷ ರಾಜೇಶ್ವರ ಮೆಹಕರ್ ಶ್ರೀ ರಾಜೇಶ್ವರ ಶಿವಾಚಾರ್ಯರಿಗೆ ಸಚಿವ ಈಶ್ವರ ಖಮಡ್ರೆ ಅವರು ಸನ್ಮಾನಿಸಿದರು.

ಹಿರನಾಗಾಂವದ ಶ್ರೀ ಜಯಶಾಂತ ಲಿಂಗ ಮಹಾಸ್ವಾಮೀಜಿ, ಚಿಟಗುಪ್ಪಾದ ಶ್ರೀ ಗುರುಲಿಂಗ ಶಿವಾಚಾರ್ಯರು, ಹುಡಗಿಯ ಶ್ರೀ ವೀರೂಪಾಕ್ಷ ಶಿವಾಚಾರ್ಯರು, ರಾಜೇಶ್ವರದ ಶ್ರೀ ನಲಿಂಗ ರುದ್ರಮುನಿ ಶಿವಾ ಚಾರ್ಯರು, ಕಿಟ್ಟಾದ ಶ್ರೀ ಸಿದ್ಧೇಶ್ವರ ಶಿವಾಚಾರ್ಯರು, ಗಡಿಗೌಂಡಗಾಂವದ ಶ್ರೀ ಶಾಂತವೀರ ಶಿವಾಚಾರ್ಯರು, ಹಳ್ಳೀಖೇಡದ ಶ್ರೀ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಕಲ್ಲೂರಿನ ಶ್ರೀ ಮೃತ್ಯುಂಜಯ ಶಿವಾಚಾರ್ಯರು, ಬಿಮಳಖೇಡನ ಶೀ ಚಂದ್ರಶೇಖರ ಶಿವಾಚಾರ್ಯರು, ಸಂಸ್ಥಾನ ಗವಿಮಠದ ಶ್ರೀ ಡಾ.ಅಭಿನವ ನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಣಿ & ಹಲರ್ಬಗಾದ ಶ್ರೀ ಹಾವಗಿಲಿಂಗ ಶಿವಾಚಾರ್ಯರು, ಮಂಠಾಳದ ಶ್ರೀ ಅಭಿನವ ಚನ್ನಬಸವ ಮಹಾ ಸ್ವಾಮೀಜಿ, ಸ್ವಂತ & ನಾರನಾಳದ ಶ್ರೀ ಶಿವಕುಮಾರ ಶಿವಾಚಾರ್ಯರು, ಸದಲಾಪುರದ ಶ್ರೀ ಸಿದ್ಧಲಿಂಗ ಶಿವಾಚಾರ್ಯರು, ಚಾಂಬೋಳದ ಶ್ರೀ ಅಭಿನವ ರುದ್ರಮುನಿ ಶಿವಾಚಾರ್ಯರು, ಖೇಳಗಿಯ ಶ್ರೀ ಶಿವಲಿಂಗ ಮಹಾಸ್ವಾಮೀಜಿ, ಹುಡಗಿಯ ಶ್ರೀ ಚನ್ನಮಲ್ಲ ಮಹಾಸ್ವಾಮೀಜಿ, ಕಮಠಾಣದ ಶ್ರೀ ರಾಚೋಟೇಶ್ವ ಶಿವಾಚಾರ್ಯರು, ಡೋಣಗಾಂವದ ಶ್ರೀ ಡಾ.ಶಂಭುಲಿಂಗ ಶಿವಾಚಾರ್ಯರು, ಸಿಂಧನ ಕೇರಾದ ಶ್ರೀ ಹೊನ್ನಲಿಂಗ ಮಹಾಸ್ವಾಮೀಜಿ, ಖಟಕಚಿಂಚೋಳಿಯ ಶ್ರೀ ಬಸವಲಿಂಗ ಮಹಾ ಸ್ವಾಮೀಜಿ, ಸಾಯಗಾಂವದ ಶ್ರೀ ಶಿವಾನಂದ ಮಹಾಸ್ವಾಮೀಜಿ, ಗ್ರಾಮೀಣಾಭಿವೃದ್ಧಿ ಸಚಿವ ಈಶ್ವರ ಖಂಡ್ರೆ ಇತರರಿದ್ದರು.

ಮಠಾಧೀಶರ ಒಕ್ಕೂಟಕ್ಕೆ ಆಯ್ಕೆ ಬೀದರ್? ಜಿಲ್ಲೆಯ ಮಠಾಧೀಶರ ಒಕ್ಕೂಟದ ನೂತನ ಅಧ್ಯಕ್ಷರಾಗಿ ಮೇಹಕರ, ತಡೋಳಾದ ಶ್ರೀ ರಾಜೇಶ್ವರ ಶಿವಾಚಾರ್ಯರು, ಉಪಾಧ್ಯಕ್ಷರಾಗಿ ರಾಜೇಶ್ವರದ ಶ್ರೀ ನಲಿಂಗ ರುದ್ರಮುನಿ ಶಿವಾಚಾರ್ಯರು, ಶಿವಣಿ& ಹಲರ್ಬಗಾದ ಶ್ರೀಹಾವಗಿ ಲಿಂಗ ಶಿವಾಚಾರ್ಯರು, ಕಾರ್ಯ ದರ್ಶಿಗಳಾಗಿ ಹುಡಗಿಯ ಶ್ರೀ ಚೆನ್ನಮಲ್ಲ ಮಹಾಸ್ವಾಮೀಜಿ, ಸಹ ಕಾರ್ಯದರ್ಶಿಗಳಾಗಿ ಚಾಂಬೋಳ ಶ್ರೀ ಅಭಿನವ ರುದ್ರಮುನಿ ಶಿವಾ ಚಾರ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

## ಎಸ್‌ಬಿಎಚ್ ನಿವೃತ್ತ ನೌಕರರಿಗೆ ಶೀಘ್ರ ವೈದ್ಯಕೀಯ ಸೌಲಭ್ಯ: ಎಜಿಎಂ ಸೀತಾಬಾಯಿ




**ರಾಯಚೂರು, ಜೂ. 21:** ಹಿಂದಿನ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ ಈಗ ಎಸ್‌ಬಿಐನಲ್ಲಿ ವಿಲೀನಗೊಂಡಿದೆ. ಹಿಂದಿನ ಎಸ್‌ಬಿಎಚ್‌ನ ನಿವೃತ್ತ ನೌಕರರ ಅನುಕೂಲಕ್ಕೆ ಶೀಘ್ರ ವೈದ್ಯಕೀಯ ಸೌಲಭ್ಯ ಒದಗಿಸಲಾಗುವುದು ಎಂದು ಭಾರತೀಯ ಸ್ಟೇಟ್ ಬ್ಯಾಂಕ್‌ನ ಎಜಿಎಂ ಸೀತಾಬಾಯಿ ಭರವಸೆ ನೀಡಿದರು.

ನಗರದ ಎಸ್‌ಬಿಐ ಲೋಹಾರವಾಡಿ ಶಾಖೆಯಲ್ಲಿ ನಡೆದ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್ ನಿವೃತ್ತ ನೌಕರರ ಸಂಘದ ತ್ರೈಮಾಸಿಕ ಸಭೆಯಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿ, ಎಸ್‌ಬಿಐನ ಸುದೀರ್ಘ ಘನತೆ ಹಾಗೂ ಪರಂಪರೆಯಲ್ಲಿ ಎಸ್‌ಬಿಎಚ್‌ನ ಪಾತ್ರವೂ ಮಿಳಿತವಾಗಿದೆ. ಬ್ಯಾಂಕ್ ನಿವೃತ್ತರ ಶ್ರೇಯೋಭಿವೃದ್ಧಿಗೆ ಬ್ಯಾಂಕ್ ಬದ್ಧವಾಗಿದೆ ಎಂದರು.

ಹಿರಿಯ ನಿವೃತ್ತ ಅಧಿಕಾರಿ ನಕ್ಕ ಹುಸೇನಪ್ಪ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸಂಘದ ಹೈದರಾಬಾದ್ ಕೇಂದ್ರ ಸಮಿತಿಯ ಅಧ್ಯಕ್ಷ ಎಂ. ಚಕ್ರಪಾಣಿ. ಪ್ರಧಾನ ಕಾರ್ಯದರ್ಶಿ ಎಂ ಲಕ್ಷ್ಮಾರೆಡ್ಡಿ, ಉಪ ಪ್ರಧಾನ ಕಾರ್ಯದರ್ಶಿ ರಾಮಕೋಟೇಶ್ವರ ರಾವ್, ಸಂಘದ ಹೈದರಾಬಾದ್ ಜಂಟಿ ನಗರ ಉಪಾಧ್ಯಕ್ಷ ಮೋಹನ ರವೀಂದ್ರ ಸಂಘದ ಕೇಂದ್ರ ಸಮಿತಿಯ ನಿಕಟಪೂರ್ವ ಖಜಾಂಚಿ ಅಂಜನಿಕುಮಾರ, ಕರ್ನಾಟಕ ಘಟಕದ ವ್ಯವಸ್ಥಾಪನಾ ಸಮಿತಿಯ(ಎಂಸಿ) ನೂತನ ಸದಸ್ಯರಾದ ನೀಲಕಾಂತ ದಲಭಂಜನ, ಲೋಗನಾಥನ್, ಅತಿಥಿ ಹೇಮಂತ ಗೋಕುಲ್ ಅವರನ್ನು ಸನ್ಮಾನಿಸಲಾಯಿತು.

ಸಂಘದ ಕೇಂದ್ರ ಸಮಿತಿಯ ಚುನಾವಣೆಯಲ್ಲಿ ಸಹಾಯಕ ಪ್ರಧಾನ ಕಾರ್ಯದರ್ಶಿ ಆಗಿ ಆಯ್ಕೆಯಾದ ರಾಯಚೂರಿನ ಕಂದೂರು ಶ್ರೀನಿವಾಸ ಮತ್ತು ಕರ್ನಾಟಕ ಘಟಕದ ವ್ಯವಸ್ಥಾಪನಾ ಸಮಿತಿಯ (ಎಂಸಿ) ಸದಸ್ಯರಾಗಿ ಆಯ್ಕೆಯಾದ ರಾಜೊಳ್ಳಿ ನಾಗಪ್ಪ ಅವರನ್ನು ಸಭೆಯಲ್ಲಿ ಅಭಿನಂದಿಸಲಾಯಿತು.

75 ವರ್ಷ ಪೂರೈಸಿದ ಸಂಘದ ನೂತನ (ಎಂಸಿ) ಸದಸ್ಯ ರಾಜೊಳ್ಳಿ ನಾಗಪ್ಪ, ಅಬ್ದುಲ್ ಸಲೀಂ ಅನ್ಸಾರಿ, ದೋಮಕುಂಟಿ ವೆಂಕಟೇಶ, ಹುಸೇನಸಾಬ್ ಮತ್ತು ಅಸ್ಮತ್ ಪಾಷಾ ಅವರನ್ನು ಸನ್ಮಾನಿಸಲಾಯಿತು. ಕಂದೂರು ಶ್ರೀನಿವಾಸ ಸ್ವಾಗತಿಸಿದರು. ರಮೇಶ ಹೀರಾ ಪ್ರಾರ್ಥನೆ ಗೀತೆ ಹಾಡಿದರು. ಪತಂಗೆ ಹನುಮಂತರಾವ್ ಲೆಕ್ಕ ಪತ್ರ ಮಂಡಿಸಿದರು. ಸಾಬೀರಅಹಮದ್ ಕಾರ್ಯಕ್ರಮ ನಿರೂಪಿಸಿದರು. ಭೀಷ್ಮಾಚಾರ್ ವಂದಿಸಿದರು.

### ಶಾರೀರಿಕ, ಮಾನಸಿಕ ಸಂಪತ್ತನ್ನು ಸದಾ ಚೈತನ್ಯವಾಗಿಡಲು ಯೋಗ ಒಂದು ಸಾಧನ

## ಯೋಗ 21ನೇ ಶತಮಾನದ ಎಲ್ಲ ಸವಾಲುಗಳನ್ನು ಎದುರಿಸಲು ಚೈತನ್ಯ ನೀಡುತ್ತಿದೆ: ಬಸವರಾಜ ಬೊಮ್ಮಾಯಿ

**ಹುಬ್ಬಳ್ಳಿ, ಜೂ.21–** ಭಗವಂತ ಕೊಟ್ಟಿರುವ ಶಾರೀರಿಕ ಹಾಗೂ ಮಾನಸಿಕ ಸಂಪತ್ತನ್ನು ಸದಾ ಚೈತನ್ಯ ಪೂರಕವಾಗಿಡಲು ಯೋಗ ಒಂದು ಸಾಧನ. ಯೋಗ ಆರೋಗ್ಯಕರವಾದ ದೇಶ, ಆರೋಗ್ಯಕರ ಜಗತ್ತು ನಿರ್ಮಾಣ ಮಾಡುವ ಮೂಲಕ 21ನೇ ಶತಮಾನದ ಎಲ್ಲ ಸವಾಲುಗಳನ್ನು ಎದುರಿಸಲು ಸದೃಢ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.



ವಿಶ್ವ ಯೋಗ ದಿನದ ಅಂಗವಾಗಿ ಹುಬ್ಬಳ್ಳಿಯ ತಮ್ಮ ನಿವಾಸದಲ್ಲಿ ಯೋಗಾಸನ ಮಾಡಿ ಮಾತನಾಡಿರುವ ಅವರು, ಇಂದು ವಿಶ್ವ ಯೋಗ ದಿನ. ವಿಶ್ವದ ಸುಮಾರು 130 ದೇಶಗಳಲ್ಲಿ ಯೋಗ ದಿನಾಚರಣೆ ಆಚರಿಸಲಾಗುತ್ತದೆ. ನಿರಂತರ ಯೋಗ ಮಾಡುವುದರಿಂದ ಶಾರೀರಿಕವಾಗಿ ಮಾನಸಿಕವಾಗಿ ಸದೃಢವಾಗಿರುವ ವ್ಯಕ್ತಿತ್ವ ಸ್ಥಾಪನೆ ಮಾಡಬಹುದು. ಇದು ಭಾರತದ ಸನಾತನ ಕಾಲದಿಂದ ಬಂದಿರುವ ಒಂದು ಸಂಸ್ಕೃತಿ. ಈ ಸಂಸ್ಕೃತಿಯಲ್ಲಿ ನಮ್ಮ ಶಾರೀರಿಕ ವಿಚಾರ ತಿಳಿಸುತ್ತದೆ. ಪ್ರಾಣಾಯಾಮ ಮಾಡುವುದರ ಮೂಲಕ ನಮ್ಮ ಪ್ರಾಣ ವಾಯು ಮೇಲೆ ಸಂಪೂರ್ಣ ನಿಯಂತನ ಮಾಡಿ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು, ವಿವಿಧ ಯೋಗಾಸನಗಳ ಮೂಲಕ ನಮ್ಮ ಅಂಗಾಗಗಳನ್ನು ಸದೃಢಗೊಳಿಸಿ ಕೊಳ್ಳಬಹುದು ಎಂದು ಹೇಳಿದರು.

ಭಾರತದಲ್ಲಿರುವ ಯೋಗವನ್ನು ಇಡಿ ವಿಶ್ವಕ್ಕೆ ಪರಿಚಯ ಮಾಡಿಕೊಟ್ಟು ಎಲ್ಲರಿಗೂ ಮುಟ್ಟಿಸುವ ಕೆಲಸ ಮಾಡಿರುವುದು ಪ್ರಧಾನಿ ನರೇಂದ್ರ ಮೋದಿ. ಅವರ ಪಭಾವ ಮತ್ತು ಪ್ರಯತ್ನದಿಂದ ಯುಎಸ್. ಯುಎನ್ ದೇಶಗಳು ಈ ದಿನವನು ಯೋಗದಿನ ವೆಂದು ಗುರುತಿಸಿ ಭಾರತದ ಯೋಗಕ್ಕೆ ಮನ್ನಣೆ ಕೊಟ್ಟಿರುವುದಕ್ಕೆ ಮೋದಿ ಯವರಿಗೆ ನಾವು ಚಿರಋಣಿಯಾಗಿರ ಬೇಕು. ಶಾಲೆ ಕಾಲೇಜುಗಳಲ್ಲಿ ಯೋಗ ನಿರಂತರವಾಗಿ ನಡೆಯುವ ಮೂಲಕ ಆರೋಗ್ಯಕರವಾದ ದೇಶ, ಆರೋಗ್ಯಕರ ಜಗತ್ತು ನಿರ್ಮಾಣ ಮಾಡುವ ಮೂಲಕ 21ನೇ ಶತಮಾನದ ಎಲ್ಲ ಸವಾಲುಗಳನ್ನು ಎದುರಿಸಲು ಸದೃಢ ಮಾಡುತ್ತಿದೆ. ಎಲ್ಲರೂ ಆರೋಗ್ಯ ವಾಗಿರುವಂತೆ ಯೋಗ ದಿನದ ಶುಭ ಕೋರಿದರು.

## ಯೋಗಾಭ್ಯಾಸವು ದೈನಂದಿನ ದಿನಚರಿಯ ಭಾಗವಾಗಿರಲಿ: ಟಿಟಿಡಿ ಇಒ ಎಂ. ರವಿಚಂದ್ರ



ತಿರುಪತಿ, ಜೂ 21.ಅಂತರ ರಾಷ್ಟ್ರೀಯ ಯೋಗ ದಿನಾಚರಣೆ ಯಂದು ಭಾನುವಾರ ಟಿಟಿಡಿ ಆಡಳಿತ ಕಟ್ಟಡದ ಹಿಂಭಾಗದ ಪರೇಡ್ ಮೈದಾನದಲ್ಲಿ ಆಯೋ ಜಿಸಲಾದ ಭವ್ಯ ಯೋಗ ಕಾರ್ಯಕ್ರಮ ದಲ್ಲಿ ಟಿಟಿಡಿ ಇಒ ಮುದ್ದದ ರವಿಚಂದ್ರ ಭಾಗವಹಿಸಿ ಯೋಗದ ಮಹತ್ವವನ್ನು ವಿವರಿಸಿದರು.

ಪ್ರತಿದಿನ ಯೋಗಾಭ್ಯಾಸ ಮಾಡುವುದರಿಂದ ದೈಹಿಕ ಸದೃಢತೆಯ ಜೊತೆಗೆ ಮಾನಸಿಕ ಬೆಳವಣಿಗೆ ಮತ್ತು ಮನಸ್ಸಿನ ಶಾಂತಿಯನ್ನು ಬೆಳೆಸಿಕೊಳ್ಳಬಹುದು. ಶ್ರೀವಾರಿಯ ಸೇವೆಯಲ್ಲಿ ನಿರಂತರವಾಗಿ ತೊಡಗಿಸಿಕೊಂಡು ಲಕ್ಷಾಂತರ ಭಕ್ತರಿಗೆ ಸೇವೆ ಸಲ್ಲಿಸುವ ಟಿಟಿಡಿ ನೌಕರರು ಯೋಗವನ್ನು ಅಳವಡಿಸಿಕೊಂಡರೆ, ಅವರು ಆರೋಗ್ಯಕರ ಮತ್ತು ಸಂತೋಷ ದಾಯಕ ಜೀವನವನ್ನು ನಡೆಸುತ್ತಾರೆ ಮತ್ತು ಅವರ ಕುಟುಂಬ ಗಳು ಸಹ ಸಂತೋಷ ವಾಗಿರುತ್ತವೆ ಎಂದರು. ಟಿಟಿಡಿ ಇಒ ಅವರು 'ಧ್ಯಾನ ಮೂಲಮಿದಂ ಜಗತ್' ಸಿಡಿ, ಪುಸ್ತಕ ಬಿಡುಗಡೆ ಮತ್ತು ಸ್ವಿಮ್ಸ್ ಸಿದ್ಧಪಡಿಸಿದ ಕರಪತ್ರವನ್ನು ಬಿಡುಗಡೆ ಮಾಡಿದರು.

## ಬೀಜ–ರಸಗೊಬ್ಬರ ಪೂರೈಕೆಗೆ ಆಗ್ರಹಿಸಿ ರೈತರ ಹೋರಾಟ

**ರಾಯಚೂರು, ಜೂ. 21:** ರೈತರಿಗೆ ಸಮರ್ಪಕ ಬೀಜ–ರಸಗೊಬ್ಬರ ಪೂರೈಕೆ, ಬಡ ಕುಟುಂಬಗಳಿಗೆ ಮನೆ ನಿವೇಶನ ಹಾಗೂ ಹಕ್ಕುಪತ್ರ ವಿತರಣೆ ಮಾಡಬೇಕು ಎನ್ನುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರು ಇಲ್ಲಿಯ ಟಿಪ್ಪು ಸುಲ್ತಾನ್ ಉದ್ಯಾನದಲ್ಲಿ ಹೋರಾಟ ನಡೆಸಿದರು.




ಮುಂಗಾರು ಬಿತ್ತನೆಗಾಗಿ ಜಿಲ್ಲೆಯ ಎಲ್ಲ ತಾಲ್ಲೂಕುಗಳಲ್ಲಿ ರೈತರಿಗೆ ಅಗತ್ಯಕ್ಕೆ ಅನುಗುಣವಾಗಿ ಗುಣಮಟ್ಟದ ಬೀಜ ಹಾಗೂ ರಸಗೊಬ್ಬರಗಳನ್ನು ಎಂ.ಆರ್.ಪಿ. ದರದಲ್ಲಿ ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಜಿಲ್ಲೆಯಲ್ಲಿ ಮುಂಗಾರು ಜೋಳವನ್ನು ಸರ್ಕಾರದ ಎಂಎಸ್‌ಪಿ ದರದಲ್ಲಿ ಖರೀದಿಸಿದ್ದು, ತಕ್ಷಣವೇ ಜೋಳದ ಬಾಕಿ ಹಣವನ್ನು ರೈತರಿಗೆ ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ವಿದ್ಯುತ್ ವಿತರಣೆಯನ್ನು ಈ ಹಿಂದಿನಂತೆ ಜೆಸ್ಕಾಂ ಮೂಲಕವೇ ಮುಂದುವರಿಸಬೇಕು. ವಿದ್ಯುತ್ ಖಾಸಗೀಕರಣ ಪ್ರಸ್ತಾಪವನ್ನು ಕೆಇಆರ್‌ಸಿ ಕೈಬಿಡಬೇಕು ಎಂದು ಆಗ್ರಹಿಸಿದರು.

ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಅಮರಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೂಲದಗುಡ್ಡ, ಗಾಜಲದಿನ್ನಿ ಹಾಗೂ ಮಂಡಲಗುಡ್ಡ ಗ್ರಾಮಗಳ ಸರ್ಕಾರಿ ವಸತಿ ಆಶ್ರಯ ಕಾಲೊನಿಗಳಲ್ಲಿ ಸುಮಾರು 20 ವರ್ಷಗಳಿಂದ ವಾಸಿಸುತ್ತಿರುವ ಬಡ ಕುಟುಂಬಗಳಿಗೆ ಹಕ್ಕುಪತ್ರಗಳನ್ನು ನೀಡಬೇಕು ಎಂದು ಒತ್ತಾಯಿಸಿದರು. ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕ ವಾಗಿ ಜಾರಿಗೊಳಿಸಬೇಕು. ಹಾಜರಾತಿ ಜಿಪಿಎಸ್ ವ್ಯವಸ್ಥೆಯಲ್ಲಿರುವ ತಾಂತ್ರಿಕ ಸಮಸ್ಯೆಗಳನ್ನು ತಕ್ಷಣ ಪರಿಹರಿಸಬೇಕು ಎಂದು ಮನವಿ ಮಾಡಿದರು. ಜಾಲಹಳ್ಳಿ ಹೋಬಳಿಯ ಗ್ರಾಮೀಣ ಪ್ರದೇಶಗಳಲ್ಲಿನ ಬಂಡಿದಾರಿಗಳನ್ನು ತೆರವುಗೊಳಿಸಿ, ರೈತರಿಗೆ ಕೃಷಿ ಚಟುವಟಿಕೆಗಳಿಗೆ ಅನುಕೂಲ ಕಲ್ಪಿಸಬೇಕು. ಸಿಂಧನೂರು ತಾಲ್ಲೂಕಿನ ಕುನುಟಿಗಿ ಹೋಬಳಿಯ ಕಲ್ಲೂರು ಗ್ರಾಮದ ಸ್ಮಶಾನದ ರಸ್ತೆಯನ್ನು ಅಭಿವೃದ್ಧಿಪಡಿಸಬೇಕು. ಸಿಂಧನೂರು ತಾಲ್ಲೂಕಿನ ದಢೆಸೂಗುರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕೆಂಗಲ್ ಗ್ರಾಮದಲ್ಲಿ ಸ್ಮಶಾನದ ರಸ್ತೆ ಒತ್ತುವರಿಯಾಗಿದ್ದು, ತಕ್ಷಣವೇ ಒತ್ತುವರಿ ತೆರವುಗೊಳಿಸಿ ಸಾರ್ವಜನಿಕ ಬಳಕೆಗೆ ಮುಕ್ತಗೊಳಿಸಬೇಕು ಎಂದು ಒತ್ತಾಯಿಸಿದರು.

ಸಿಂಧನೂರು ತಾಲ್ಲೂಕಿನ ಮಲ್ಲಾಪುರ ಗ್ರಾಮದಲ್ಲಿ ಮಹಿಳೆಯರಿಗೆ ಶೌಚಾಲಯ ಮಂಜೂರು ಮಾಡಬೇಕು. ಮಸ್ಕಿ ತಾಲ್ಲೂಕಿನ ತಲೆಖಾನ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಯರದೊಡ್ಡಿಯಲ್ಲಿ ವಸತಿ ಉದ್ದೇಶಕ್ಕಾಗಿ ಭೂಸ್ವಾಧೀನಗೊಂಡ ಸರ್ಕಾರಿ ಭೂಮಿಯನ್ನು ಖಾಸಗಿ ವ್ಯಕ್ತಿಗಳು ಒತ್ತುವರಿ ಮಾಡಿಕೊಂಡಿದ್ದು, ತಕ್ಷಣವೇ ಒತ್ತುವರಿ ತೆರವುಗೊಳಿಸಿ ನಿವೇಶನ ರಹಿತ ಕುಟುಂಬಗಳಿಗೆ ಹಂಚಿಕೆ ಮಾಡಬೇಕು ಎಂದು ಆಗ್ರಹಿಸಿದರು.

ತುರುವಿಹಾಳ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಸರ್ಕಾರಿ ವಸತಿ ಆಶ್ರಯ ಕಾಲೊನಿಯಲ್ಲಿ 15 ವರ್ಷಗಳಿಂದ ವಾಸಿಸುತ್ತಿರುವ ಬಡ ಕುಟುಂಬಗಳಿಗೆ ಹಕ್ಕುಪತ್ರ ವಿತರಿಸಿ, ಮೂಲ ಸೌಕರ್ಯ ಒದಗಿಸಬೇಕು ಎಂದು ಆಗ್ರಹಿಸಿದರು.

ದೇವದುರ್ಗ ತಾಲ್ಲೂಕಿನ ಗಣೇಕಲ್, ಗಲಗ ಹಾಗೂ ಪಲಕನ ಮರಡಿ ಗ್ರಾಮ ಪಂಚಾಯಿತಿಗಳಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಬಡ ಕುಟುಂಬಗಳಿಗೆ ಸರ್ಕಾರಿ ವಸತಿ ಯೋಜನೆಯಡಿ ನಿವೇಶನಗಳನ್ನು ಮಂಜೂರು ಮಾಡಬೇಕು. ಮಸ್ಕಿ ತಾಲ್ಲೂಕಿನ ತಲೆಖಾನ ಗ್ರಾ.ಪಂ ವ್ಯಾಪ್ತಿಯ ತಲೆಖಾನ ಮತ್ತು ಯರದೊಡ್ಡಿ, ಲಿಂಗಸೂಗೂರು ತಾಲ್ಲೂಕಿನ ಹಟ್ಟಿ ಪಟ್ಟಣ, ಗೆಜ್ಜಲಗಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವೀರಾಪುರ, ರೋಡಲಬಂಡ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗೌಡೂರು ಹಾಗೂ ನಾಗಲಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಯ ತೊಡಕಿ ಗ್ರಾಮಗಳಲ್ಲಿ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವ ಬಡ ಕುಟುಂಬಗಳಿಗೆ ಆಶ್ರಯ ಯೋಜನೆಯಡಿ ನಿವೇಶನಗಳನ್ನು ಒದಗಿಸಬೇಕು ಎಂದು ಮನವಿ ಮಾಡಿದರು.

ನರೇಗಾ ಕೆಲಸದ ಸಂದರ್ಭದಲ್ಲಿ ಬಿಸಿಲಿನ ತಾಪದಿಂದ ಮೃತಪಟ್ಟ ಕಾರ್ಮಿಕರ ಕುಟುಂಬಗಳಿಗೆ ಸೂಕ್ತ ಪರಿಹಾರ ಒದಗಿಸಬೇಕು. ಉದ್ಯೋಗ ಖಾತ್ರಿ ಯೋಜನೆಯನ್ನು ವಿಫಲಗೊಳಿಸುವ ಉದ್ದೇಶದಿಂದ ಕಾರ್ಮಿಕರಿಗೆ 5 ರಿಂದ 6 ಕಿ.ಮೀ. ದೂರದ ಕಲ್ಲು ಪ್ರದೇಶಗಳಲ್ಲಿ ಕೆಲಸ ನೀಡುವುದು, ಕಡಿಮೆ ಕೂಲಿ ಪಾವತಿಸುವುದನ್ನು ತಕ್ಷಣ ನಿಲ್ಲಿಸಬೇಕು. ಕಾರ್ಮಿಕರಿಗೆ ಅನುಕೂಲಕರ ಸ್ಥಳಗಳಲ್ಲಿ ಕೆಲಸ ಒದಗಿಸಿ, ಪೂರ್ಣ ಪ್ರಮಾಣದ ಕೂಲಿ ಪಾವತಿಸಿ ಯೋಜನೆಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ರಾಯಚೂರು ತಾಲ್ಲೂಕಿನ ಯಾಪಲ ದಿನ್ನಿ, ಜಂಬಲದಿನ್ನಿ, ಮಮದಾಪುರ, ಪುಚ್ಚಲದಿನ್ನಿ, ಕೊತ್ತದೊಡ್ಡಿ, ಮಲದೊಡ್ಡಿ ಗ್ರಾಮಗಳ ವಸತಿರಹಿತರಿಗೆ ಮನೆಗಳ ನಿರ್ಮಾಣ ಮಾಡಬೇಕು. ಕೊತ್ತದೊಡ್ಡಿ, ಹೆಗ್ಗಸನಹಳ್ಳಿಗೆ ಸ್ಮಶಾನ ಭೂಮಿ ಮಂಜೂರು ಮಾಡಬೇಕು. ಯಾಪಲ ದಿನ್ನಿ, ಮಮದಾಪುರ, ಯರಗುಂಟಾ ಗ್ರಾಮಗಳ ಸಾರ್ವಜನಿಕ ಸಶ್ಮಾನ ಭೂಮಿ ಒತ್ತವರಿ ತೆರವುಗೊಳಿಸಬೇಕು ಎಂದು ಮನವಿ ಮಾಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ, ರಾಜ್ಯ ಘಟಕದ ಅಧ್ಯಕ್ಷ ಚಂದ್ರಪ್ಪ ಹೊಸಕೇರಾ, ಜಿಲ್ಲಾ ಘಟಕದ ಅಧ್ಯಕ್ಷ ಬಸವಂತ್ರಾಯಗೌಡ, ಜಿಲ್ಲಾ ಕಾರ್ಯದರ್ಶಿ ನರಸಣ್ಣ ನಾಯಕ, ಯಾದಗಿರಿ ಜಿಲ್ಲಾ ಘಟಕದ ಅಧ್ಯಕ್ಷ ಚನ್ನಪ್ಪ ಆನೆಗುಂದಿ, ಕೆ.ಜಿ. ವೀರೇಶ, ಕರಿಯಪ್ಪ ಅಚ್ಚೊಳಿ, ರಂಗನಗೌಡ ದೇವೇಂದ್ರಗೌಡ, ಶಬ್ಬೀರ್ ಜಲಹಳ್ಳಿ, ಎಚ್.ಪದ್ಮಾ, ಪೆಂಚಲಯ್ಯ, ರಂಗಪ್ಪ ಯಾಪಲದಿನ್ನಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

## ಸುಃಖ – ದುಃಖಗಳಿಂದ ಬದಲಾವಣೆಗೆ ಪ್ರೇರಣೆ: ಶಿವಶಾಂತವೀರ ಶರಣರು



**ಬಳ್ಳಾರಿ, ಜೂ. 21:**ಜೀವನದಲ್ಲಿ ಎದುರಾಗುವ ಸುಃಖ ಮತ್ತು ದುಃಖಗಳು ನಮ್ಮಲ್ಲಿ ಬದಲಾವಣೆಗೆ ಕಾರಣ ಆಗಲಿವೆ ಎಂದು ಪರಮ ಪೂಜ್ಯ ಶಿವಶಾಂತವೀರ ಶರಣರು ಆಶೀರ್ವದಿಸಿದ್ದಾರೆ.

ಬಸವಭವನದಲ್ಲಿ ಭಾನುವಾರ ನಡೆದ ಚಿಕೇನಕೊಪ್ಪದ ಶ್ರೀ ಚನ್ನವೀರದ ಶರಣರ 31ನೇ ಪುಣ್ಯಸ್ಮರಣೋತ್ಸವ ಹಾಗೂ 1008 ಮುತ್ತೈದೆಯರಿಗೆ ಉಡಿ ತುಂಬುವ ಕಾರ್ಯಕ್ರಮ ಮತ್ತು ಶ್ರೀ ಶಿವಶಾಂತವೀರ ಶರಣರ ತುಲಾಭಾರದಲ್ಲಿ ಶ್ರೀಗಳು ಆಶೀರ್ವಚನ ನೀಡಿದರು.

ನದಿಯ ನೀರು ಸಾಗಲು ಬಲ ದಂಡೆ ಮತ್ತು ಎಡ ದಂಡೆ ಬೇಕು. ಅದೇ ರೀತಿಯಲ್ಲಿ ನಮ್ಮೆಲ್ಲರ ಬದುಕಿನ ನದಿ ಸಾಗಬೇಕು ಎಂದಲ್ಲಿ ಸುಃಖ ಮತ್ತು ದುಃಖದ ದಂಡೆಗಳು ಅವಶ್ಯ. ಸುಃಖ ಮತ್ತು ದುಃಖದ ದಂಡೆಗಳ ಮಧ್ಯೆ ನಮ್ಮೆಲ್ಲರ ಜೀವನ ನೀರಿನಂತೆ ಸಾಗಿದಾಗಲೇ ಬದುಕು ಸಾಗುತ್ತಿದೆ ಎಂದರ್ಥ ಎಂದರು.

ಭೌತಿಕ ವಸ್ತುಗಳು ನಾನಾ ರೀತಿಯಲ್ಲಿ ಬದಲಾಗುತ್ತವೆ. ಭೌತಿಕ ವಿಷಯಗಳು ರೂಪಾಂತರಗೊಳ್ಳುತ್ತವೆ. ಭೌತಿಕ ವಸ್ತುಗಳು ಮತ್ತು ವಿಷಯಗಳನ್ನು ತಿರಸ್ಕರಿಸಿದ್ದ ಚನ್ನವೀರ ಶರಣರು, ನಮ್ಮೆಲ್ಲರ ನಡುವಿನ ಆರಾಧ್ಯದೈವ ಆಗಿದ್ದಾರೆ. ಚನ್ನವೀರ ಶರಣರ ರೀತಿಯಲ್ಲಿ ಪ್ರತಿಯೊಬ್ಬರೂ ಜೀವನದಲ್ಲಿ ಬದುಕಿನ ಮೌಲ್ಯವರ್ಧನೆ ಮಾಡಿಕೊಳ್ಳಬೇಕು ಎಂದರು.

ನಮ್ಮೆಲ್ಲರಲ್ಲೂ ಅದ್ಭುತವಾದ ಶಕ್ತಿಯನ್ನು – ಸಾಮರ್ಥ್ಯವನ್ನು ಸೃಷ್ಠಿಯು ಕೊಟ್ಟಿದೆ. ನಮ್ಮಲ್ಲಿರುವ ಶಕ್ತಿ ಮತ್ತು ಸಾಮರ್ಥ್ಯವನ್ನು ಸದ್ವಿನಿಯೋಗ ಮಾಡಿಕೊಂಡು ಬಡವರಿಗಾಗಿ, ಸಮಾಜಕ್ಕಾಗಿ, ಸಮೀಪದವರ ಒಳಿತಿಗಾಗಿ ಮತ್ತು ಅಗತ್ಯ ಇರುವವರ ನೆರವಿಗಾಗಿ ಸ್ಪಂದಿಸುತ್ತಾ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದರು.

ಆಕಾಶ, ವಾಯು, ಅಗ್ನಿ, ನೀರು ಮತ್ತು ಭೂಮಿಯನ್ನು ದೇವರು ನಮಗೆಲ್ಲರಿಗೂ ನೀಡಿದ್ದಾನೆ. ನಮಗೆಲ್ಲರಿಗೂ ನವರಂಧ್ರಗಳನ್ನು ನಿರ್ಮಾಣ ಮಾಡಿದ್ದಾನೆ. ಈ ನವರಂಧ್ರಗಳಲ್ಲಿ ಒಂದು ಕ್ಷಣಹೊತ್ತು ಯಾವುದಾದರೂ ಒಂದನ್ನು ದೇವರು ಕ್ಷಣಮಾತ್ರ ನಿಲ್ಲಿಸಿದರೆ ಬದುಕಲು ಸಾಧ್ಯವಿಲ್ಲ ಎಂದರು.

ಬಳೂಟಗಿಯ ಸಿದ್ದೇಶ್ವರ ಶಾಸ್ತ್ರಿಗಳು, ಚನ್ನವೀರ ಶರಣರು ಮತ್ತು ಅಲ್ಲೀಪುರದ ಮಹಾದೇವ ತಾತನವರು ಸಮಕಾಲೀನರು. ಜಾತ್ಯಾತೀತರಾಗಿದ್ದ ಚನ್ನವೀರ ಶರಣರು ಸಮಾಜಮುಖಿ ಚಿಂತನೆಗಳ ಮೂಲಕ ನಮ್ಮೆಲ್ಲರ ನಡುವೆ ಚೈತನ್ಯವಂತರಾಗಿ ಈಗಲೂ ಇದ್ದಾರೆ. ಮೌನ, ಕಾಲ್ನಡಿಗೆ, ತಪಸ್ಸುಗಳ ಮೂಲಕ ಭಕ್ತರ ಮನಸ್ಸಲ್ಲಿ ಅಚ್ಚಳಿಯದೇ ಇರುವ ಚನ್ನವೀರ ಶರಣರು, ಮಾಡಿದ ಪವಾಡಗಳು, ತೋರಿದ ವಿಸ್ಮಯಗಳು ಸ್ಮರಣೀಯ ಎಂದರು.

ಸಿದ್ದಾಪುರ ಶಿವಲಿಂಗ ಶಾಸ್ತ್ರಿಗಳು, ಚನ್ನವೀರ ಶರಣರ ಪವಾಡಗಳು ಮತ್ತು ಧಾರ್ಮಿಕ ಶಕ್ತಿ, ಆಧ್ಯಾತ್ಮಿಕ ಚೈತನ್ಯಗಳ ಕುರಿತು ಪ್ರಾಸ್ತಾವಿಕ ಭಾಷಣ ಮಾಡಿ, ಸ್ವಾಗತ ಕೋರಿದರು.

ವಂದಲಿಯ ಪಂಡಿತ ವಿರೂಪಾಕ್ಷಯ್ಯ ಗವಾಯಿಗಳು ಸಂಗೀತ ಸೇವೆ ಸಲ್ಲಿಸಿದರು. ಕೊಪ್ಪಳ ಗವಿಮಠದ ಸಂಗೀತ ಶಿಕ್ಷಕರಾಗಿರುವ ವೀರೇಶ್ ಹಿಟ್ನಾಳ್ ಅವರು ಹಾರ್ಮೋನಿಯಂ ಸಾಥ್ ನೀಡಿದರು. ಗಂಗಾವತಿಯ ರಾಘವೇಂದ್ರ ಅವರು ತಬಲಾ ಸಾಥ್ ನೀಡಿದರು.

ಬಸವರಾಜ್ ಅಮಾತಿ ಅವರು ಕಾರ್ಯಕ್ರಮ ನಿರೂಪಿಸಿದರು. ಹದಿಮೂರು ಭಕ್ತಾಧಿಗಳು ಮತ್ತು ಅವರ ಕುಟುಂಬದ ಸದಸ್ಯರು ತುಲಾಭಾರ ಸೇವೆಯನ್ನು ಸಲ್ಲಿಸಿದರು.

ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾಗಿ ಆಯ್ಕೆಯಾದ ಹಿನ್ನೆಲೆಯಲ್ಲಿ, ಪಕ್ಷದಲ್ಲಿ ಒಬ್ಬರಿಗೆ ಒಂದೇ ಹುದ್ದೆ ಎಂಬ ಸಿದ್ಧಾಂತದ ಪ್ರಕಾರ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ.ಶಿವಕುಮಾರ್ ರಾಜೀನಾಮೆ ನೀಡಿದ್ದರು. ಬಿ.ಕೆ. ಹರಿಪ್ರಸಾದ್ ಸಚಿವ ಸ್ಥಾನದ ಆಕಾಂಕ್ಷಿಯಾಗಿದ್ದರು. ದೆಹಲಿಯಲ್ಲಿ ಬಿ.ಕೆ.ಹರಿಪ್ರಸಾದ್ ಮತ್ತು ಡಿ.ಕೆ.ಶಿವಕುಮಾರ್ ನಡುವೆ ರಹಸ್ಯ ಸಭೆ ನಡೆಯಿತು. ಅನಂತರ ಹರಿಪ್ರಸಾದ್ ಕೆಪಿಸಿಸಿ ಅಧ್ಯಕ್ಷರಾಗಲು ಒಪ್ಪಿಕೊಂಡಿದ್ದು, ಜೂನ್ 3ರಂದು ಎಐಸಿಸಿ ಅಧ್ಯಕ್ಷರು ಹರಿಪ್ರಸಾದ್ ಅವರನ್ನು ಕೆಪಿಸಿಸಿ ಅಧ್ಯಕ್ಷರನ್ನಾಗಿ ಘೋಷಣೆ ಮಾಡಿದ್ದರು. 18 ದಿನಗಳ ಬಳಿಕ ಭಾನುವಾರ ಹರಿಪ್ರಸಾದ್ ಅಧಿಕಾರ ಸ್ವೀಕರಿಸಿದ್ದಾರೆ.

# ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ 22ನೇ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಿ.ಕೆ.ಹರಿಪ್ರಸಾದ್





ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲ, ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಸಂಪುಟದ ಸಚಿವರು, ಶಾಸಕರು ಸೇರಿದಂತೆ ಹಲವರು ಭಾಗವಹಿಸಿದ್ದರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಔಪಚಾರಿಕವಾಗಿ ಅಧಿಕಾರ ವಹಿಸಿಕೊಂಡರು.



ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ನೂತನ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಅವರಿಗೆ ಪಕ್ಷದ ಬಾವುಟವನ್ನು ಹಸ್ತಾಂತರಿಸಿದರು..








ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಂದ ಕೆಪಿಸಿಸಿ ಅಧ್ಯಕ್ಷರಾಗಿ ಬಿ.ಕೆ. ಹರಿಪ್ರಸಾದ್ ಔಪಚಾರಿಕವಾಗಿ ಅಧಿಕಾರ ವಹಿಸಿಕೊಂಡರು.